ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಸಂಪುಟ 2 ಸಂಚಿಕೆ 21

ಮೇ 25, 2008


ಕನ್ನಡ ವಾರಪತ್ರಿಕೆ

ರೂ. 5/-



ವಿಧಾನಸಭಾ ಚುನಾವಣೆ
ಪ್ರಣಾಳಿಕೆಗಳ ಸ್ಪರ್ಧೆ





ಜೈಪುರ ಸರಣಿ ಬಾಂಬ್ ಸ್ಫೋಟ : ಭಯೋತ್ಪಾದಕರ ಕೋಮುವಾದಿ

ಔಷಧಿಗಳು ಜನಾರೋಗ್ಯಕ್ಕೋ, ಕಂಪನಿಗಳ ಲಾಭಕ್ಕೋ?

'ಬ್ರಾಂಡ್' ಸಂಸ್ಕೃತಿ ಕುರಿತು



ಅತಂತ್ರ ವಿಧಾನಸಭೆಯ ಭೀತಿ?

ನೋಟ

'ಬ್ರಾಂಡ್' ಇಂದಿನ ವಿಶೇಷ ಸಂಸ್ಕೃತಿ



ಡಾ. ಜಿ. ಭಾಸ್ಕರ ಮಯ್ಯ


ಬಂಡವಾಳಶಾಹಿ ಯುಗದ ಪ್ರಮುಖ ವಿಶೇಷತೆಯೆಂದರೆ ದೊಡ್ಡ ದೊಡ್ಡ ಕಾರ್ಖಾನೆಗಳು. ಅತಿ ಹೆಚ್ಚಿನ ಪ್ರಮಾಣದಲ್ಲಿ ಉತ್ಪಾದನೆ ಹಾಗೂ ಅವುಗಳ ಮಾರಾಟ. ದೊಡ್ಡ ದೊಡ್ಡ ಕಾರ್ಖಾನೆಗಳ ವ್ಯವಸ್ಥಾಪನೆಗೆ ದೊಡ್ಡ ಪ್ರಮಾಣದ ಸಂಪನ್ಮೂಲಗಳು ಬೇಕು. ಕಾರ್ಮಿಕರಿಗೆ ಸವಲತ್ತು, ಪಿ.ಎಫ್., ನಿವೃತ್ತಿ ವೇತನ ಈ ಮಧ್ಯೆ ಕಾರ್ಮಿಕರು ಆಗಿಂದಾಗ್ಗೆ ನಡೆಸುವ ಆಂದೋಲನಗಳನ್ನು ಸುಧಾರಿಸಬೇಕು - ಆದರೆ ಜಾಗತೀಕರಣದ ನವೀನ ಆವೃತ್ತಿ ಈ ಎಲ್ಲ ಸಮಸ್ಯೆಗಳಿಂದ ಸಾಮ್ರಾಜ್ಯಶಾಹಿಯನ್ನು ಮುಕ್ತಗೊಳಿಸಿದೆ. ಅದುವೇ 'ಬ್ರಾಂಡ್ ಸಂಸ್ಕೃತಿ'

ಹತ್ತಾರು ದಶಕಗಳಿಂದ ಹೋರಾಟದ ಮೂಲಕ ಕಾರ್ಮಿಕರು ಪಡೆದ ಹಕ್ಕುಗಳನ್ನು ದೇಶಿಯ ಸರಕಾರಗಳು ಕ್ರಮಕ್ರಮವಾಗಿ ಮೊಟಕುಗೊಳಿಸುವಂತೆ ಮಾಡುವಲ್ಲಿ 'ಜಾಗತೀಕರಣ' ಸಫಲವಾಗಿವೆ. ಲಕ್ಷಗಟ್ಟಲೆ ಉದ್ಯಮಗಳನ್ನು ಯಾವ ಕಾನೂನಿನ ಬೆದರಿಕೆಯಿಲ್ಲದೆ ಮುಚ್ಚುವಲ್ಲಿ ಅವು ಸಫಲವಾಗಿವೆ. ಸಾರ್ವಜನಿಕ ಉದ್ಯಮಗಳೂ ಬಹುದೊಡ್ಡ ಪ್ರಮಾಣದಲ್ಲಿ ಖಾಸಗೀಕರಣಗೊಂಡು ಕಾರ್ಮಿಕರು ಅಸುರಕ್ಷಿತರಾಗಿದ್ದಾರೆ. ಆದರೆ ಇದೆಲ್ಲದರ ಹಿಂದಿನ ರಹಸ್ಯವೇನು? ಅದಕ್ಕೆ ಮತ್ತದೇ ಉತ್ತರ 'ಬ್ರಾಂಡ್ ಸಂಸ್ಕೃತಿ'.

ಇಂದು ಕಂಪ್ಯೂಟರ್ ಚಾಲಿತ ಕಾರ್ಖಾನೆಗಳಲ್ಲಿ ತಯಾರಾಗುವ ಸರಕುಗಳು ಒಂದು ಕಂಪೆನಿಯಿಂದ ಮತ್ತೊಂದು ಕಂಪೆನಿಗೆ ಭಿನ್ನವಾಗಿರುವುದಿಲ್ಲ. ಉದಾ: ಬಾಟಾ ಕಂಪೆನಿ, ಚಪ್ಪಲಿ ಶೂ ತಯಾರಿಸುತಿತ್ತು. ಬೇರೆ ಕಂಪೆನಿಗಳೂ ತಯಾರಿಸುತ್ತಿದ್ದವು. ಆದರೆ ಮಾರುಕಟ್ಟೆಯಲ್ಲಿ ಬಾಟಾ ಕಂಪೆನಿ ವ್ಯವಸ್ಥಿತವಾಗಿ ಮಾಡುತ್ತಿದ್ದ ಪ್ರಚಾರ, ಜಾಹೀರಾತು, ಕಾರ್ಖಾನೆ ನಡೆಸುವುದಕ್ಕೆ ತೊಡಗಿಸುವ ಬಂಡವಾಳಕ್ಕಿಂತ ಹೆಚ್ಚು

ಇಂದು ಯಾವುದನ್ನು ಯುವಜನರ ಸಂಸ್ಕೃತಿಯೆನ್ನುತ್ತೇವೊ ಅದು ನಿಜಕ್ಕೂ ಯುವ ಜನರಿಂದ ನಿರ್ಮಾಣವಾದುದೆ? ಅಥವಾ ಯುವಜನರ ಮನಸ್ಸು ಮಾರುಕಟ್ಟೆಗೆ ಎಷ್ಟೊಂದು ಅನುಕೂಲಿತವಾಗಿದೆಯೆಂದರೆ ಅದಕ್ಕಿಂತ ಭಿನ್ನವಾಗಿ ಯೋಚಿಸಲಾರರು. ಪ್ರತಿಯೊಂದು ಕಾರ್ಯಕ್ರಮವೂ ಪ್ರಾಯೋಜಿತ. ವ್ಯಕ್ತಿಯ ಒಳಗಿನ 'ಸ್ಪೇಸ್' ಎಂಬುದು ಸಂಪೂರ್ಣ ನಾಶವಾಗಿದೆ.

ಬಂಡವಾಳವನ್ನು ಜಾಹೀರಾತಿಗೆ ನೀಡಿದರೆ, ಮಾರುಕಟ್ಟೆಯಲ್ಲಿ ಒಂದು 'ಪ್ರಭಾವ' ಮೂಡಿಸುವುದರಲ್ಲಿ ಸಫಲವಾದರೆ, ತನ್ನದೇ ಒಂದು



ಕಂಪೆನಿ ಯಾಕೆ ಬೇಕು. ಕ್ರಮಕ್ರಮವಾಗಿ ಬಾಟಾ ತನ್ನದೇ ಕಾರ್ಖಾನೆಗಳನ್ನು ಮುಚ್ಚುತ್ತಾ ಬಂತು. ಫೀಸ್‌ವರ್ಕ್ ಮೂಲಕ ಚಪ್ಪಲಿ ಮಾಡಿಸಿತು. ಅತ್ಯಂತ ಕಡಿಮೆ ಶ್ರಮ ಮೌಲ್ಯಕ್ಕೆ ಕೆಲಸ ಮಾಡಿಕೊಡುವ ಮೂರನೆಯ ವಿಶ್ವದ ಕಾರ್ಮಿಕರಿರುವಾಗ - ಕಾರ್ಖಾನೆಯ ಕಾರ್ಮಿಕರು ಕಂಪೆನಿಗೊಂದು ಹೊರೆ. ಕಡಿಮೆ ಖರ್ಚಿಗೆ ಸರಕನ್ನು ಎಲ್ಲೆಂದರಲ್ಲಿ ಮಾಡಿಸಿ ಬಾಟಾ 'ಮಾರ್ಕ್' ಲೋಗೋ ಹಾಕಿಸಿದರೆ ಆಯಿತು. ಇಂದು ಮಾರುಕಟ್ಟೆಯಲ್ಲಿ ಸಿಗುವ ಶ್ರೇಷ್ಠತಮ ಕನ್‌ಸ್ಯೂಮರ್ ಸರಕುಗಳು ಶ್ರೇಷ್ಠವೆನಿಸುವುದು ಈ 'ಬ್ರಾಂಡ್'ನಿಂದಾಗಿ. ಬ್ರಾಂಡ್‌ಗಾಗಿ ಖರ್ಚು ಮಾಡುವ ಹಣವನ್ನು ಉತ್ಪಾದನೆಗೆ ಖರ್ಚು ಮಾಡಬೇಕಾಗಿಲ್ಲ. ಬಹುರಾಷ್ಟ್ರೀಯ ಕಂಪೆನಿಗಳ ಪ್ರಕಾರ ಯಾವ ದೇಶದಲ್ಲಿ ಕಡಿಮೆ ಬೆಲೆಗೆ ಕೆಲಸಗಾರರು ಸಿಗುತ್ತಾರೋ, ಯಾವ ದೇಶದಲ್ಲಿ ಕಾರ್ಮಿಕ ಕಾನೂನುಗಳು ಅತ್ಯಂತ ಸಡಿಲವಾಗಿವೆಯೋ ಅಲ್ಲಿ ತಯಾರಾದ ಮಾಲನ್ನು ಕೊಂಡರಾಯಿತು. ತಯಾರಾದ ಮಾಲನ್ನು ಕೊಳ್ಳುವುದು, ತಮ್ಮ ಬ್ರಾಂಡಿನ ಮೂಲಕ ಮಾರುವುದು. ಚಪ್ಪಲಿ ಬಾಟಾ ಇರಲಿ, ನಾಯಿಕ್ ಇರಲಿ ಮಾರುಕಟ್ಟೆಯಲ್ಲಿ ಮಿಂಚುವುದು ಜಾಹೀರಾತಿನ ಚಮತ್ಕಾರದಿಂದ. 'ನಿಮ್ಮ ಕಾಲುಗಳ ಸುರಕ್ಷೆ ಬಾಟಾದಿಂದ', 'ನಾನು ಯಾವಾಗಲೂ ಡಾಲ್ಡಾ ಉಪಯೋಗಿಸಿಯೇ ಅಡುಗೆ ಮಾಡುವುದು', ಬಾಟಾ ಎನ್ನುತ್ತಲೇ ಚಪ್ಪಲಿ ಕಣ್ಣೆದುರು ಕುಣಿಯಬೇಕು, ಡಾಲ್ಡಾ ಎನ್ನುತ್ತಲೇ ವನಸ್ಪತಿ ತುಪ್ಪದ ಡಬ್ಬಿ ಪ್ರತ್ಯಕ್ಷವಾಗಬೇಕು! ನಮ್ಮ ಸುತ್ತ ಇರುವುದೆಲ್ಲಾ ಬ್ರಾಂಡ್‌ಗಳೇ. ನೂರಾರು ಚಾನೆಲ್‌ಗಳಿವೆ. ಯಾವ ಚಾನೆಲ್‌ನಲ್ಲಿ ಯಾವುದೇ ಕಾರ್ಯಕ್ರಮ ಜಾಹೀರಾತಿಲ್ಲದೇ ನಡೆಯುವುದಿಲ್ಲ. ಪ್ರಾಯೋಜಕರಿಲ್ಲದಿದ್ದರೆ ಕಾರ್ಯಕ್ರಮವೆಲ್ಲಿ? ವಾರ್ತೆ ಹೇಳಲೂ ಪ್ರಾಯೋಜಕರು ಬೇಕು.

ಸರಕು ತಯಾರಾಗಿದೆ. ಅದರ ಬೆಲೆ ಕಡಿಮೆಯಿಟ್ಟರೆ ಗ್ರಾಹಕರು ಕೊಳ್ಳುತ್ತಾರೆ. ಚರ್ಚೆ ಮಾಡುವ ಗ್ರಾಹಕರು ಬರೇ ಸರಕನ್ನಲ್ಲ, ಅದರ ಗುಣವನ್ನು ಪರೀಕ್ಷಿಸುತ್ತಾರೆ - ಎಂಬ ಲೆಕ್ಕಾಚಾರದಲ್ಲಿ ಅಮೆರಿಕಾದ ಸಿಗರೇಟ್ ಕಂಪೆನಿ ಮಾರ್ಲ್‌ಬೋರೋ ಸಿಗರೇಟಿನ ಜಾಹೀರಾತಿನ ಖರ್ಚು ಕಡಿತಗೊಳಿಸಿತು. ಆದರೆ ಅದರ ಪರಿಣಾಮ, ಮಾರ್ಲ್‌ಬೋರೋ ಸಿಗರೇಟಿನ ಮಾರಾಟ ಕಡಿಮೆಯಾಯಿತು! ಕೇವಲ ದರ ಕಡಿಮೆಯಿಟ್ಟರೆ ಸರಕು ಬಿಕರಿಯಾಗುವುದಿಲ್ಲ. ಜಾಹೀರಾತು ಇಲ್ಲದಿದ್ದರೆ ಕಂಪೆನಿಗಳಿಗೆ ಭವಿಷ್ಯವೇ ಇಲ್ಲ. ಜಾಹೀರಾತೇ ಒಂದು ಉದ್ಯಮ. 'ಬ್ರಾಂಡಿಂಗ್' ಇಂದಿನ ಅತೀ ದೊಡ್ಡ ಕೈಗಾರಿಕೆ. ಕಂಪೆನಿಯ ಗುರುತು ಆ ಕಂಪೆನಿಯ 'ಬ್ರಾಂಡ್'. ಬ್ರಾಂಡ್‌ನಿಂದಾಗಿ ಅದು ಏನನ್ನೂ ಮಾರುವುದರಲ್ಲಿ ಸಮರ್ಥವಾಗುತ್ತದೆ.



ಮನುಷ್ಯನ ಜೀವನ ಶೈಲಿಯನ್ನು ಸಂಸ್ಕೃತಿ ಪ್ರಭಾವಿಸುತ್ತದೆ. ಇಂದು ಬ್ರಾಂಡ್ ತನ್ನ ಪ್ರಚಾರಕ್ಕೆ ಸಾಂಸ್ಕೃತಿಕ ಘಟನೆಗಳನ್ನೇ ಉಪಯೋಗಿಸುತ್ತದೆ. ಸಂಗೀತಗಾರರು, ಆಟಗಾರರು, ಕಲಾವಿದರು, ಫಿಲ್ಮ್‌ಸ್ಟಾರ್‌ಗಳು ಎಲ್ಲರೂ ಬ್ರಾಂಡಿನ ಮಾಧ್ಯಮಗಳೇ. ಪುರಾತತ್ವ ಮಹತ್ವದ ಯಾವುದೇ ಶಿಲ್ಪಕಲೆ ಇರಲಿ, ಗಿರಿಧಾಮಗಳೇ ಇರಲಿ, ಪವಿತ್ರ ಕ್ಷೇತ್ರಗಳೇ ಇರಲಿ - ಎಲ್ಲವೂ ಬ್ರಾಂಡಿನ ವ್ಯಾಪ್ತಿಗೆ ಬರುತ್ತದೆ. ಇಂದು ಬ್ರಾಂಡ್ ಮತ್ತು ಸಂಸ್ಕೃತಿಯ ನಡುವಣ ವಿಭಾಜಕ ರೇಖೆ ನಿಧಾನವಾಗಿ ಕ್ಷೀಣಿಸುತ್ತಾ ಬಂದಿದೆ. ಬ್ರಾಂಡ್ ಸಂಸ್ಕೃತಿಯ ಸೃಷ್ಟಿಕರ್ತ, ನಿರ್ಮಾಪಕ ಬ್ರಾಂಡ್ ಬ್ರಹ್ಮಾಂಡವನ್ನೇ ಆರಿಸಿದೆ.

ಇಂದು ಯಾವುದನ್ನು ಯುವಜನರ ಸಂಸ್ಕೃತಿಯೆನ್ನುತ್ತೇವೊ ಅದು ನಿಜಕ್ಕೂ ಯುವ ಜನರಿಂದ ನಿರ್ಮಾಣವಾದುದೆ? ಅಥವಾ ಯುವಕರ ಮನಸ್ಸು ಮಾರುಕಟ್ಟೆಗೆ ಎಷ್ಟೊಂದು ಅನುಕೂಲಿತವಾಗಿದೆಯೆಂದರೆ ಅದಕ್ಕಿಂತ ಭಿನ್ನವಾಗಿ ಯೋಚಿಸಲಾರರು. ಪ್ರತಿಯೊಂದು ಕಾರ್ಯಕ್ರಮವೂ ಪ್ರಾಯೋಜಿತ. ವ್ಯಕ್ತಿಯ ಒಳಗಿನ 'ಸ್ಪೇಸ್' ಎಂಬುದು ಸಂಪೂರ್ಣ ನಾಶವಾಗಿದೆ. ಶರೀರದಿಂದ ವ್ಯಕ್ತಿ ಸ್ವತಂತ್ರವಾಗಿ ಕಾಣಿಸಿದರೂ ಮಾನಸಿಕವಾಗಿ ಆತ ಗುಲಾಮನಾಗಿದ್ದಾನೆ. ನಿತ್ಯ ಹೊಸ ಹೊಸ ವಸಾಹತುಗಳನ್ನು ಹುಡುಕುತ್ತಿರುತ್ತಾನೆ. ಅವನ ನರಭಕ್ಷಕ ಪ್ರವೃತ್ತಿ ನಿರಂತರವಾದುದು.

ಪ್ರಭಾ ಖೇತಾನ್ ಬರೆಯುತ್ತಾರೆ:

'ಆಫ್ರಿಕಾ - ಅಮೆರಿಕಾ ಸಂಸ್ಕೃತಿ'ಗೆ ಪರ್ಯಾಯ ಪದವೇ 'ಕೂಲ್ ಸಂಸ್ಕೃತಿ'. ದೊಡ್ಡ ಕಂಪೆನಿಗಳ ಪ್ರಕಾರ 'ಕೂಲ್ ಸಂಸ್ಕೃತಿ'ಯ ಹುಡುಕಾಟದ ಮೂಲದಲ್ಲಿ ಬಿಳಿಯರಲ್ಲದವರ ಸಂಸ್ಕೃತಿಯನ್ನೇ ಪುನಃ ಪ್ರತಿಷ್ಠಾಪನೆ ಮಾಡುವ ಪ್ರಯತ್ನ ನಡೆಸಲಾಗಿದೆ. ಬಹುಮುಖೀ ಸಂಸ್ಕೃತಿಯಲ್ಲಿ ಹಸ್ತಕ್ಷೇಪ ನಡೆಸುವುದು ಅನಿವಾರ್ಯವಾಗಿದೆ. ಒಬ್ಬರು ಇನ್ನೊಬ್ಬರನ್ನು ಗುರುತಿಸುವುದರ ಅರ್ಥ ಒಟ್ಟೊಟ್ಟಿಗೆ ಒದುಕುವುದು. ಮಾರಾಟಗಾರರು ತಮ್ಮ ಪ್ರದೇಶದ ಫ್ಯಾಶನನ್ನೆ ಹುಡುಕಿದರು. ಬಿಳಿಯರಲ್ಲದವರು ಬಿಳಿ ಅಮೆರಿಕನ್ನರನ್ನು ಅನುಕರಿಸಲು ಪ್ರಯತ್ನಿಸಿದರೆ, ಫ್ಯಾಶನ್ ಕ್ಷೇತ್ರದಲ್ಲಿ ಬಿಳಿ ಅಮೆರಿಕನ್ನರು ಕರಿಯರ ಸಂಸ್ಕೃತಿಯನ್ನು ಬಯಸುತ್ತಿದ್ದರು. 'ಫಾರ್ಚೂನ್' ಪತ್ರಿಕೆಯಲ್ಲಿ ಕಿಶೋರ ವಯಸ್ಸಿನ ಹುಡುಗಿಯರಿಗೆ ಹೇಗೆ ಸರಕನ್ನು ಮಾರಬೇಕು ಎಂಬ ಬಗ್ಗೆ ಈ ಸಲಹೆ ನೀಡಲಾಗಿತ್ತು. - 'ಈ ಹುಡುಗಿಯರಿಗೆ ಎಲ್ಲವೂ ತಿಳಿದಿದೆ, ಅವರು ಸ್ವತಃ ನಿರ್ಣಯ ಮಾಡಲು ಸಮರ್ಥರು ಎಂಬ ರೀತಿಯಲ್ಲಿ ನೀವು ಅಭಿನಯಿಸಬೇಕು'.

ಮಾರುಕಟ್ಟೆಯಿಂದ ಪ್ರಭಾವಿತವಾದ ಜಾಗತೀಕರಣ ಭಿನ್ನತೆಗೆ ಅವಕಾಶವನ್ನೇ ಕೊಡುವುದಿಲ್ಲ. ಅದಕ್ಕೆ ಒಂದೇ ಬಗೆಯ ಸರಕನ್ನು ತಯಾರಿಸಬೇಕಾಗಿದೆ. ಬಹುರಾಷ್ಟ್ರೀಯ ಕಂಪೆನಿಗಳು ಪ್ರಾದೇಶಿಕತೆಯ ಶತ್ರು. ನಾವಿಂದು ಇಬ್ಬಗೆಯ ಅಸಂಗತ ಬದುಕನ್ನು ಸಾಗಿಸುತ್ತಿದ್ದೇವೆ. ಒಂದೆಡೆ ಎಲ್ಲವೂ ಪ್ರಗತಿಶೀಲವಾಗಿ ಕಾಣಿಸುತ್ತದೆ. ಇನ್ನೊಂದೆಡೆ ಜೀನ್ಸ್, ಪೆಪ್ಸಿ, ನಾಯಿಕ್ ಶೂ, ಕೈಯಲ್ಲಿ ಸ್ಯಾಮ್‌ಸಂಗ್ ಮೊಬೈಲ್ - ಇದು ಭಾರತದ ನಗುತ್ತಾ ಕುಣಿಯುತ್ತಾ ಇರುವ ಯುವ ಜನರ ಚಿತ್ರ. ಇವರ ಭವಿಷ್ಯ ಮಾತ್ರ ಕಗ್ಗತ್ತಲು.

ಇಡೀ ಜಗತ್ತಿನಲ್ಲಿ ಇಂದು ಹೆಚ್ಚಿನ ರಾಷ್ಟ್ರೀಯ ಸರ್ಕಾರಗಳೆಲ್ಲಾ ಬಹುರಾಷ್ಟ್ರೀಯ ಕಂಪೆನಿಗಳ ತಾಳಕ್ಕೆ

ಪುಟ 15ಕ್ಕೆ

ಚೀನಾ, ಕ್ಯೂಬಾದಲ್ಲಿ ಅದು ನಡೆಯಲಿಲ್ಲ

ಹಾಲಿವುಡ್ ಮೊದಲ ಬಾರಿಗೆ ಚೀನಾದಲ್ಲಿ ತನ್ನ ಸಿನೇಮಾಗಳನ್ನು ತೋರಿಸಲು ಪ್ರಯತ್ನಿಸಿತು. ಆದರೆ ಅದರ ಶರ್ತಗಳನ್ನು ಅದು ಒಪ್ಪಲೇ ಬೇಕಾಯಿತು. ಮಾವೋತ್ಸೆ ತುಂಗ್ ಮೇಲೆ ಬಿ.ಬಿ.ಸಿ. ತಯಾರಿಸಿದ ಕಾರ್ಯಕ್ರಮ ಚೀನಕ್ಕೆ ಹಿಡಿಸಲಿಲ್ಲ. ಅದು ಬಿ.ಬಿ.ಸಿ.ಗೆ ಎಚ್ಚರಿಕೆ ನೀಡಿತು. ಅಲ್ಲಿಗೆ ಅದು ತಣ್ಣಗಾಯಿತು. ಇತ್ತೀಚೆಗಷ್ಟೇ ಹಾಂಕಾಂಗ್‌ನ ನಿರ್ವತ್ತ ಗವರ್ನರ್ ಕ್ರಿಸ್ ಪೆಟನ್ ಚೀನಾದಲ್ಲಿ 'ಮಾನವ ಹಕ್ಕುಗಳ ಉಲ್ಲಂಘನೆ'ಯ ಬಗ್ಗೆ ಒಂದು ಪುಸ್ತಕ ಬರೆದ. ಪುಸ್ತಕವನ್ನು ಪ್ರಕಾಶನ ಮಾಡಿದ್ದು 'ಹಾರ್ಪರ್ ಕಾಲಿನ್ಸ್'. ಹಾರ್ಪರ್ ಕಾಲಿನ್ಸ್ ಮಾಲಿಕ ರೂಪರ್ಟ್ ಮರ್ಡೋಕ್‌ನು ನ್ಯೂಸ್ ಕಾರ್ಪೋರೇಶನ್ನಿನ ಮಾಲಿಕನೂ ಹೌದು. ಚೀನಾದ ಒಂದು ಬೆದರಿಕೆಗೆ ಆತ ಹೆದರಿ ಹೋದ. 'ನಿಮ್ಮ ಬಗ್ಗೆ ತಪ್ಪು ಬರೆದರೆ ನಾವು ನಿಮಗೆ ನ್ಯೂಸ್ ಪ್ರಸಾರದ ಹಕ್ಕು ಕೊಡುವುದಿಲ್ಲ!' ಅಷ್ಟೆ ಸಾಕು ಮರ್ಡೋಕ್ ಆ ಪುಸ್ತಕದ ಪ್ರಕಾಶನವನ್ನು ತಡೆಹಿಡಿದು ಬಿಟ್ಟ! ಸಿ.ಎನ್.ಎನ್., ಬಿ.ಬಿ.ಸಿ., ಎಮ್.ಟಿ.ವಿ., ಫಾಕ್ಸ್ ನ್ಯೂಸ್ - ಎಲ್ಲವೂ ಚೀನಾದೆದುರಿಗೆ ತಲೆಬಾಗಿವೆ. ದಲಾಯಿಲಾಮನ ಮೇಲೆ ಫಿಲ್ಮ್ ಮಾಡುವ ಯೋಜನೆಗೆ ಒಪ್ಪಿಗೆ ಸಿಗಲಿಲ್ಲ. ಬಹುರಾಷ್ಟ್ರೀಯ ಕಂಪೆನಿಗಳ ಪ್ರಥಮ ಅವಶ್ಯಕತೆ ಅವರ ಆರ್ಥಿಕ ಸ್ವಾರ್ಥ. ಅದು ಪೂರ್ತಿಯಾದರೆ ಅವರು ಜಗತ್ತಿನ ಬಗ್ಗೆ ಚಿಂತಿಸುವುದಿಲ್ಲ. ಚೀನಾದ ಉದಾಹರಣೆಯಿಂದ ನಾವು ಕಲಿಯಬೇಕಾದ ಪಾಠ ಸಾಕಷ್ಟಿದೆ. ಚೀನಾದ ಪಾರಂಪರಿಕ ಜ್ಞಾನ ಅತ್ಯಂತ ಸುರಕ್ಷಿತವಾಗಿದೆ. ಆದರೆ ನಮ್ಮದು ಮೂರಾಬಟ್ಟೆಯಾಗಿದೆ. ಗತಿಮತಿಗಳಿಲ್ಲದ ಜನ, ಅವರನ್ನಾಳುವ ಸ್ವಾರ್ಥ, ಕ್ರಿಮಿನಲ್ ಸರಕಾರಗಳಿಂದ ಭಾರತ ಸಹಸ್ರಾರು ವರ್ಷಗಳಿಂದ ಉಳಿಸಿಕೊಂಡು ಬಂದ ಪರಂಪರಾಗತ ಸಂಪತ್ತು, ಜ್ಞಾನ ಇಂದು ಕಂಡವರ ಪಾಲಾಗುತ್ತಿದೆ. ಭಾರತ ಸಾಂಸ್ಕೃತಿಕ ಅಧಃಪತನದ ದಾರಿಯಲ್ಲಿ ಬಹಳಷ್ಟು ದೂರ ಕ್ರಮಿಸಿ ಬಿಟ್ಟಿದೆ.

ಸಂಪಾದಕೀಯ

ಅತಂತ್ರ ವಿಧಾನಸಭೆಯ ಭೀತಿ?

ರಾಜ್ಯದಲ್ಲಿ ಇನ್ನೂ ಕೇವಲ ಕೊನೆಯ ಹಂತದ ಮತದಾನ ಮಾತ್ರ ಬಾಕಿ ಇದೆ. ಮೊದಲನೆಯ ಹಂತದ ಮತದಾನ ನಡೆದ 89 ವಿಧಾನಸಭಾ ಕ್ಷೇತ್ರಗಳಲ್ಲಿ ಸ್ಪರ್ಧೆಗಿಳಿದಿದ್ದ ವಿವಿಧ ರಾಜಕೀಯ ಪಕ್ಷಗಳ ಒಟ್ಟು 953 ಅಭ್ಯರ್ಥಿಗಳ ಹಾಗೂ ಎರಡನೆಯ ಹಂತದ ಮತದಾನ ನಡೆದ 66 ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದ ಒಟ್ಟು 590 ಅಭ್ಯರ್ಥಿಗಳ ಭವಿಷ್ಯ ಈಗ ಎಲೆಕ್ಟ್ರಾನಿಕ್ ಮತ ಯಂತ್ರಗಳಲ್ಲಿ ಅಡಗಿದೆ. ಸೋಲು ಗೆಲುವಿನ ಬಗ್ಗೆ ಏನೇನೋ ಸಮೀಕ್ಷೆ, ವಿಶ್ಲೇಷಣೆ, ಲೆಕ್ಕಾಚಾರ ಎಗ್ಗಿಲ್ಲದೆ ನಡೆಯುತ್ತಿವೆ.

ಕಾಂಗ್ರೆಸ್, ಬಿಜೆಪಿ ಮತ್ತು ಜೆಡಿ(ಎಸ್) ಪಕ್ಷಗಳ ನಾಯಕರು ತಮ್ಮ ಪಕ್ಷಕ್ಕೆ ನಿಚ್ಚಳ ಬಹುಮತ ಖಚಿತ ಎಂದು ಹೇಳುತ್ತಿದ್ದಾರೆ. ಆದರೆ ಅವರ ಧ್ವನಿಯಲ್ಲಿ ಆತ್ಮವಿಶ್ವಾಸ ಕಾಣಿಸುತ್ತಿಲ್ಲ. ಈ ಬಾರಿ ಯಾವುದೇ ಒಂದು ಪಕ್ಷಕ್ಕೆ ಸ್ಪಷ್ಟ ಬಹುಮತ ಲಭಿಸಬಹುದೇ ಎನ್ನುವ ಶಂಕೆ ಎಲ್ಲ ಪ್ರಮುಖ ರಾಜಕೀಯ ಪಕ್ಷಗಳನ್ನು ಕಾಡುತ್ತಿದೆ. ಮುಂಬರುವ ಸರ್ಕಾರವೂ 'ಚೌ-ಚೌ' ಸರ್ಕಾರ ಎಂಬ ಮಾತು ರಾಜಕೀಯ ವಲಯದಲ್ಲಿ ದಟ್ಟವಾಗಿ ಕೇಳಿ ಬರುತ್ತಿದೆ.

ಇತ್ತೀಚೆಗೆ ಬೆಂಗಳೂರಿನಲ್ಲಿ ಸುದ್ದಿಗೋಷ್ಠಿಯೊಂದರಲ್ಲಿ ಮಾತನಾಡುತ್ತಾ ಬಿಜೆಪಿ ಮುಖಂಡ ಎಲ್.ಕೆ. ಅಡ್ವಾಣಿ 'ರಾಜ್ಯದ ಜನತೆ 2004ರ ಚುನಾವಣೆಯಲ್ಲಿ ಮಾಡಿದ ತಪ್ಪನ್ನೇ ಈ ಬಾರಿಯೂ ಮಾಡಬಾರದು. ಎಚ್ಚರಿಕೆಯಿಂದ ಮತದಾನ ಮಾಡದಿದ್ದರೆ ಮತ್ತೆ ಅತಂತ್ರ ವಿಧಾನಸಭೆ ನಿರ್ಮಾಣಗೊಂಡು ಅಭಿವೃದ್ಧಿ ಕಾಮಗಾರಿಗಳು ಕುಂಠಿತಗೊಳ್ಳಲಿವೆ. ಅವಕಾಶವಾದಿ ರಾಜಕಾರಣಿಗಳ ಕೈಗೆ ಅಧಿಕಾರ ಸಿಗಲಿದೆ. ಈ ಹಿನ್ನೆಲೆಯಲ್ಲಿ ಬಿಜೆಪಿಗೆ ಒಂದು ಅವಕಾಶ ಕೊಟ್ಟರೆ ಉತ್ತಮ ಆಡಳಿತ, ಮೂಲ ಸೌಲಭ್ಯ ಕಲ್ಪಿಸಲು ಪಕ್ಷ ಶ್ರಮಿಸಲಿದೆ" ಎಂದು ಹೇಳಿದ್ದರು. ಇದೇ ವಿಚಾರಗಳನ್ನು ಬೇರೆ ಶಬ್ದಗಳಲ್ಲಿ ಮತದಾರರ ಮುಂದಿಟ್ಟು ಮಾತನಾಡಿದ್ದ ಕಾಂಗ್ರೆಸ್ ನಾಯಕ ಎಸ್.ಎಂ.ಕೃಷ್ಣ ಕಾಂಗ್ರೆಸ್ ಪಕ್ಷಕ್ಕೆ ಬಹುಮತ ನೀಡುವಂತೆ ಮನವಿ ಮಾಡಿದ್ದರು.

ಮಾಜಿ ಪ್ರಧಾನಿ ದೇವೇಗೌಡರು ಮಾತ್ರ "ನಮ್ಮನ್ನು ಬಿಟ್ಟು ಯಾರು ಸರ್ಕಾರ ರಚಿಸುತ್ತಾರೋ ನೋಡ್ತೀನಿ" ಎನ್ನುವ ಮೂಲಕ ಮುಂಬರುವ ಸರ್ಕಾರವೂ ಸಹ ಒಂದು ಸಮ್ಮಿಶ್ರ ಸರ್ಕಾರ ಆಗಿರುತ್ತದೆ ಎಂಬ ಖಚಿತ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಅದರಂತೆಯೇ ಸಮಾಜವಾದಿ ಪಕ್ಷದ ಮುಖಂಡ ಎಸ್. ಬಂಗಾರಪ್ಪ ಅವರು ಸಹ ಅಭಿಪ್ರಾಯ ವ್ಯಕ್ತಪಡಿಸುತ್ತಾ ರಾಜ್ಯದಲ್ಲಿ ಜಾತ್ಯಾತೀತ ಪಕ್ಷಗಳು ಕೂಡಿಕೊಂಡು ಸರ್ಕಾರ ರಚಿಸುತ್ತವೆ ಎಂಬ ಅಭಿಪ್ರಾಯವನ್ನು ನೀಡಿದ್ದಾರೆ.

ಭ್ರಮನಿರಸನಗೊಂಡ ಮತ ದಾರರು: ಯಾವುದೇ ಒಂದು ಪಕ್ಷಕ್ಕೆ ಮತದಾರರು ಬಹುಮತ ನೀಡದಿರುವುದು ಅವುಗಳ ಬಗ್ಗೆ ಮತದಾರರು ಭ್ರಮನಿರಸನ ಗೊಳ್ಳುತ್ತಿರುವುದನ್ನು ಸೂಚಿಸುತ್ತದೆ. ಪ್ರಮುಖ ರಾಷ್ಟ್ರೀಯ ರಾಜಕೀಯ ಪಕ್ಷಗಳಾದ ಕಾಂಗ್ರೆಸ್ ಹಾಗೂ ಬಿಜೆಪಿಗೆ ಕೇಂದ್ರದಲ್ಲಾಗಲೀ, ರಾಜ್ಯದಲ್ಲಾಗಲೀ, ಇತರ ಪಕ್ಷಗಳ ಬೆಂಬಲವಿಲ್ಲದೆ ಅಧಿಕಾರಕ್ಕೆ ಬರಲು ಸಾಧ್ಯವಿಲ್ಲದ ಪರಿಸ್ಥಿತಿ ಬಂದಿದೆ. ಅಂದರೆ ಈ ಪಕ್ಷಗಳ ಬಗ್ಗೆ ಮತದಾರರಿಗೆ ವಿಶ್ವಾಸವಿಲ್ಲದಂತಾಗಿದೆ. ಈ ಪ್ರಮುಖ ಪಕ್ಷಗಳು ಜನತೆಯ ನಂಬಿಕೆಗೆ ದ್ರೋಹ ಎಸಗುತ್ತಾ ಬಂದಿವೆ. ಆದ್ದರಿಂದಲೇ ಯಾವುದೇ ಒಂದು ಪಕ್ಷದ ಕೈಯಲ್ಲಿ ಸಂಪೂರ್ಣ ಬಹುಮತ ನೀಡಲು ಜನತೆ ಹಿಂದೇಟು ಹಾಕುತ್ತಿದೆ.

ಆರ್ಥಿಕ ನೀತಿಗಳ ವಿಷಯದಲ್ಲಿ ಕಾಂಗ್ರೆಸಿಗೂ ಬಿಜೆಪಿಗೂ ಏನೂ ವ್ಯತ್ಯಾಸವಿಲ್ಲ ಎಂಬ ವಿಚಾರ ಜನತೆಗೆ ಈಗ ಮನವರಿಕೆಯಾಗಿದೆ. ಈ ಪಕ್ಷಗಳ ನಡುವೆ ನಡೆಯುತ್ತಿರುವ ಪಕ್ಷಾಂತರ ಇದನ್ನೇ ಸಾಬೀತುಪಡಿಸುತ್ತದೆ. ಇವುಗಳ ನಡುವೆಯೇ ಆಯ್ಕೆ ಮಾಡಿಕೊಳ್ಳುವುದು ಅನಿವಾರ್ಯವಾದಾಗ ಯಾವುದಾದರೂ ಒಂದು ಪಕ್ಷಕ್ಕೆ ಮತ ನೀಡಿ ಸುಮ್ಮನಾಗುತ್ತಾರೆ.

ಯಾವುದೇ ಒಂದು ಪಕ್ಷಕ್ಕೆ ಇಂದು ಮತದಾರರು ಅಗತ್ಯ ಬಹುಮತ ನೀಡದಿರುವುದು ಅವರು ನಡೆಸುತ್ತಿರುವ ಹುಡುಕಾಟದ ದ್ಯೋತಕವಾಗಿದೆ. ಕಾಂಗ್ರೆಸ್ಸಿನ ಆಡಳಿತ ವೈಖರಿಯನ್ನು ರಾಜ್ಯದಲ್ಲೂ ಕೇಂದ್ರದಲ್ಲೂ ನೋಡಿ ಆಗಿದೆ. ಬಿಜೆಪಿಯ ಅಧಿಕಾರವನ್ನೂ ನೋಡಿಯಾಗಿದೆ. ಜೆಡಿ(ಎಸ್) ಅಧಿಕಾರವನ್ನೂ ನೋಡಿದ್ದಾಗಿದೆ. ಈ ಪ್ರಮುಖ ರಾಜಕೀಯ ಪಕ್ಷಗಳಲ್ಲಿ ಮೂಲಭೂತ ವ್ಯತ್ಯಾಸಗಳೇನಿಲ್ಲ. ಹೇಗಾದರೂ ಮಾಡಿ ಅಧಿಕಾರಕ್ಕೆ ಬರಬಯಸುವ ಈ ಪಕ್ಷಗಳೂ, ಅಧಿಕಾರಕ್ಕಾಗಿ ಏನು ಬೇಕಾದರೂ ಮಾಡಲು ಸಿದ್ಧವಿರುವ ಈ ಪಕ್ಷಗಳು ಮತದಾರರ ವಿಶ್ವಾಸವನ್ನು ಕಳೆದುಕೊಂಡಿವೆ. ಆದ್ದರಿಂದಲೇ ಯಾವುದೇ ಒಂದು ಪಕ್ಷಕ್ಕೆ ಅಗತ್ಯ ಬಹುಮತ ಸಿಗದಂತಾಗಿದೆ. ಈ ರೀತಿಯ ಪ್ರಯೋಗಗಳ ಮೂಲಕವೇ ಮತದಾರರು ಪರ್ಯಾಯ ದಾರಿಯನ್ನು ಕಂಡುಕೊಳ್ಳಲು ಸಾಧ್ಯವಾಗುವುದು.

ಸಮ್ಮಿಶ್ರ ಸರ್ಕಾರಗಳಿಂದ ಸುಭದ್ರ ಸರ್ಕಾರ ಸಾಧ್ಯವಿಲ್ಲ ಎಂದು ಹೇಳುವುದು ಸರಿಯಲ್ಲ. ಜನತೆಯ ಮೂಲಭೂತ ಪ್ರಶ್ನೆಗಳ ಬಗ್ಗೆ ಸಹಮತ ಇರುವ ರಾಜಕೀಯ ಪಕ್ಷಗಳು ಒಂದು ಸುಭದ್ರ ಸರ್ಕಾರ ನೀಡಲು ಸಾಧ್ಯವಿದೆ ಎಂಬುದನ್ನು ಪಶ್ಚಿಮ ಬಂಗಾಳದಂತಹ ಎಡರಂಗ ಸರ್ಕಾರಗಳು ಸಾಬೀತುಪಡಿಸಿವೆ. ಎಡರಂಗ ಸರ್ಕಾರಗಳು ಅಧಿಕಾರದಲ್ಲಿರುವ ರಾಜ್ಯಗಳ ಜನತೆ ಕಾಂಗ್ರೆಸ್‌ನ್ನು ತಿರಸ್ಕರಿಸಿ, ಬಿಜೆಪಿಗೆ ಅವಕಾಶ ನೀಡದೆ ಪರ್ಯಾಯ ದಾರಿಯನ್ನು ಕಂಡುಕೊಂಡಿದ್ದಾರೆ. ಪರ್ಯಾಯಕ್ಕಾಗಿ ಹುಡುಕಾಟ ನಡೆಸುತ್ತಿರುವ ಕರ್ನಾಟಕದ ಜನತೆಗೆ ಪಶ್ಚಿಮ ಬಂಗಾಳ, ತ್ರಿಪುರಾ, ಕೇರಳ ಒಂದು ಮಾದರಿ ಯಾಕಾಗಬಾರದು?

ಧನಬಲ, ಭುಜಬಲ ಮೇಳೈಸಿದರೆ ಸಾಮಾನ್ಯ ಜನರ ಪಾಡೇನು?


ಕಳೆದ ನಾಲ್ಕು ವರ್ಷಗಳ ಕಾಲ ರಾಜ್ಯದ ರಾಜಕೀಯವನ್ನು ತನ್ನ ಮುಷ್ಟಿಯಲ್ಲಿಟ್ಟು ಕುಣಿಸಿದ ಹಣಬಲ ಮತ್ತು ಭುಜಬಲ ಈ ಬಾರಿಯ ವಿಧಾನಸಭಾ ಚುನಾವಣೆಗಳಲ್ಲೂ ರಾರಾಜಿಸುತ್ತಿರುವುದು ಎದ್ದು ಕಾಣಿಸುತ್ತಿದೆ. ಇದರಲ್ಲಿ ಕಳೆದ ಚುನಾವಣೆಗಳ ನಂತರ ರಾಜ್ಯವನ್ನು ಆಳಿದ ಮೂರು ಪಕ್ಷಗಳದ್ದೇ ಸಿಂಹಪಾಲು. ಮೂರು ಹಂತಗಳಲ್ಲಿ ನಡೆಯುತ್ತಿರುವ ಈ ಚುನಾವಣೆಯ ಅಭ್ಯರ್ಥಿಗಳಲ್ಲಿ 132 ಕ್ರಿಮಿನಲ್ ಆಪಾದನೆಗಳಿರುವವರಿದ್ದಾರೆ. ಅವರಲ್ಲಿ 91 ಅಭ್ಯರ್ಥಿಗಳು ಬಿಜೆಪಿ, ಕಾಂಗ್ರೆಸ್ ಮತ್ತು ಜನತಾದಳ(ಎಸ್)ಗೆ ಸೇರಿದವರು. ಕರ್ನಾಟಕ ಎಲೆಕ್ಷನ್ ವಾಚ್ ಎಂಬ ಸಂಘಟನೆ ಸ್ವತಃ ಅಭ್ಯಥಿಗಳೇ ಚುನಾವಣಾ ಆಯೋಗದ ಎದುರು ಸಲ್ಲಿಸಿದ ವಿವರಗಳನ್ನು ಕಲೆ ಹಾಕಿದಾಗ ಕಂಡು ಬಂದ ಸಂಗತಿಗಳು ಬಹಳ ಆತಂಕಕಾರಿ. ಕ್ರಿಮಿನಲ್ ಕೇಸುಗಳಿರುವವರ ಅಂಕೆ-ಸಂಖ್ಯೆ ಹೀಗಿದೆ:

ಹಂತ	ಒಟ್ಟು ಸ್ಥಾನ	ಕೇಸು ಗಳಿರುವವರು	ಬಿಜೆಪಿ	ಕಾಂಗ್ರೆಸ್	ಜೆಡಿ(ಎಸ್)
ಒಂದು	89	47	12	10	13
ಎರಡು	66	49	13	9	8
ಮೂರು	69	36	12	6	7

ಸಹಜವಾಗಿಯೇ ಬಿಜೆಪಿಯ ಮಾಜಿಸಚಿವ ಬಳ್ಳಾರಿಯ ಶ್ರೀರಾಮುಲು ಇವರಲ್ಲಿ ಎಲ್ಲರಿಗಿಂತ ಮುಂದಿದ್ದಾರೆ. ಇವರಲ್ಲಿ ಹೆಚ್ಚಿನವರ ಮೇಲೆ ಕೊಲೆ, ಕೊಲೆ ಪ್ರಯತ್ನ ಮತ್ತು ಅಪಾಯಕಾರೀ ಆಯುಧಗಳಿಂದ ಹಲ್ಲೆಯ ಪ್ರಯತ್ನದಂತಹ ಗುರುತರ ಆಪಾದನೆಗಳಿವೆ.

ಇದು 'ಭುಜಬಲ'ದ ಪ್ರಮಾಣ ವಾದರೆ 'ಧನಬಲ'ದ ಪ್ರಮಾಣ ನೋಡಿ:

ಮೊದಲ ಹಂತದ 89 ಸ್ಥಾನಗಳ ಚುನಾವಣೆಗಳ ಅಭ್ಯರ್ಥಿಗಳಲ್ಲಿ 14 ಮಂದಿಯ ಘೋಷಿತ ತಲಾ ಆಸ್ತಿ 30ಕೋಟಿ ರೂ.ಗಳಿಗಿಂತ ಹೆಚ್ಚು ಇದೆ. ಇವರೆಲ್ಲಾ ಈ ಮೂರು ಪ್ರಮುಖ ಪಕ್ಷಗಳಿಂದ ಟಿಕೇಟು ಪಡೆದವರೇ. ಕಾಂಗ್ರೆಸ್ ಇಂತಹ 7 ಮಂದಿಗೆ, ಬಿಜೆಪಿ 5 ಮಂದಿಗೆ ಹಾಗೂ ಜೆಡಿ(ಎಸ್) ಇಬ್ಬರಿಗೆ ಟಿಕೇಟು ನೀಡಿದೆ. ಕಾಂಗ್ರೆಸ್‌ನ ಕುಪೇಂದ್ರ ರೆಡ್ಡಿ (ಘೋಷಿತ ಆಸ್ತಿ 180.69ಕೋಟಿ) ಇವರಲ್ಲಿ ಮೊದಲಿಗರು. 5ರಿಂದ 30ಕೋಟಿರೂ.ವರೆಗಿನ ಆಸ್ತಿವಂತರ ಸಂಖ್ಯೆಯಂತೂ ಬಹಳಷ್ಟು-ಇವರಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳ ಸಂಖ್ಯೆ 21, ಬಿಜೆಪಿ 14 ಹಾಗೂ ಜೆಡಿ(ಎಸ್) 19. ಇವರಲ್ಲಿ ಬಹಳಷ್ಟು ಜನ ತಮ್ಮ ಆದಾಯತೆರಿಗೆ ಪಾವತಿ ಸಂಖ್ಯೆಯನ್ನು ತಿಳಿಸಿಲ್ಲ.


ಕೃಪೆ: ಪ್ರಜಾವಾಣಿ

ಒಂದು ಲಕ್ಷ ರೂಪಾಯಿಗಿಂತ ಕಡಿಮೆ ಆದಾಯ ತೋರಿಸಿದವರ ಸಂಖ್ಯೆ 33. ಅದರಲ್ಲಿ ಕಾಂಗ್ರೆಸ್ ಮತ್ತು ಜನತಾದಳದ ಅಭ್ಯರ್ಥಿಗಳ ಸಂಖ್ಯೆ ತಲಾ ಎರಡು, ಬಿಜೆಪಿ ಅಭ್ಯರ್ಥಿ ಕೇವಲ ಒಬ್ಬರೇ! ಅಂದರೆ ಹಣವಂತರು ಮತ್ತು ಭುಜಬಲ ಇರುವವರು ಮಾತ್ರ ಚುನಾವಣೆಗಳಲ್ಲಿ ಸ್ಪರ್ಧಿಸಬೇಕು ಎಂಬ ಸಂದೇಶ ಈ ಪಕ್ಷಗಳದ್ದು!

ಎರಡನೇ ಹಂತದ ಅಂಕಿ-ಅಂಶಗಳೂ ಇದನ್ನೇ ಹೇಳುತ್ತವೆ. 66ಸ್ಥಾನಗಳಿಗೆ ಸ್ಪರ್ಧಿಸುತ್ತಿರುವ ಅಭ್ಯರ್ಥಿಗಳಲ್ಲಿ 49 ಕ್ರಿಮಿನಲ್ ಆಪಾದನೆಗಳನ್ನು ಹೊತ್ತಿರುವವರು. ಇವರಲ್ಲಿ 13 ಮಂದಿ ಬಿಜೆಪಿಯವರು, 9 ಕಾಂಗ್ರೆಸ್ ಮತ್ತು 8 ಮಂದಿ ಜೆಡಿ(ಎಸ್) ನವರು. 372 ಅಭ್ಯರ್ಥಿಗಳಲ್ಲಿ 191 ಮಂದಿ ಈ ಮೂರು ಪಕ್ಷಗಳವರು. ಇವರ ಒಟ್ಟು ಆಸ್ತಿ ಎಲ್ಲಾ ಅಭ್ಯರ್ಥಿಗಳ ಒಟ್ಟು ಘೋಷಿತ ಆಸ್ತಿಯ 88.5ಶೇ.! ಇವರಲ್ಲಿ ಬಿಜೆಪಿಯ 66, ಕಾಂಗ್ರೆಸ್‌ನ 64 ಮತ್ತು ಜೆಡಿ(ಎಸ್)ನ 61 ಮಂದಿಯಿದ್ದು ಈ ಮೂರು ಪಕ್ಷಗಳ ತಲಾ ಘೋಷಿತ ಆಸ್ತಿ ಪ್ರಮಾಣ ಅನುಕ್ರಮವಾಗಿ 3.78ಕೋಟಿ, 7.35ಕೋಟಿ ಮತ್ತು 1.28ಕೋಟಿ.

30 ಕೋಟಿ ರೂ.ಗಿಂತ ಹೆಚ್ಚು ಆಸ್ತಿ ಘೋಷಿಸಿದವರು 5 ಮಂದಿ - ಮೂರು ಕಾಂಗ್ರೆಸ್ಸಿನವರು, ಇಬ್ಬರು ಬಿಜೆಪಿಯವರು. 5 ರಿಂದ 30 ಕೋಟಿ ರೂ.ಗಳ ಘೋಷಿತ ಆಸ್ತಿ ಇರುವವರು ಬಿಜೆಪಿ-17, ಕಾಂಗ್ರೆಸ್-4 ಮತ್ತು ಜೆಡಿ(ಎಸ್) 6. 1 ಲಕ್ಷ ರೂ.ಗಿಂತ ಕಡಿಮೆ ಆಸ್ತಿಯಿರುವವರಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ನವರು ತಲಾ ಇಬ್ಬರು ಮಾತ್ರ; ಜೆಡಿ(ಎಸ್)ನ ಒಬ್ಬರು.

ಇನ್ನೊಂದು ಗಮನಿಸಬೇಕಾದ ಸಂಗತಿಯೆಂದರೆ ಕಳೆದ ಚುನಾವಣೆ (2004) ರಿಂದ ಈ ಚುನಾವಣೆ ನಡುವೆ ಈ ವ್ಯಕ್ತಿಗಳ ಆದಾಯದಲ್ಲಿ ಆಗಿರುವ ಹೆಚ್ಚಳ. ಮೊದಲ ಹಂತದ ಚುನಾವಣೆಯ 82 ಅಭ್ಯರ್ಥಿಗಳ ಆಸ್ತಿಯಲ್ಲಿ ತೀವ್ರ ಏರಿಕೆಯಾಗಿದೆ - ಸರಾಸರಿ ಶೇ. 677ರಷ್ಟು. ಇವರಲ್ಲಿ ಬಿಜೆಪಿಯ 20 ಮಂದಿ, 28 ಕಾಂಗ್ರೆಸ್ ಅಭ್ಯರ್ಥಿಗಳು ಹಾಗೂ 25 ಜೆಡಿ(ಎಸ್) ಅಭ್ಯರ್ಥಿಗಳು. ಎರಡನೇ ಹಂತದಲ್ಲೂ ಇಂತಹ 74 ಅಭ್ಯರ್ಥಿಗಳ ಆಸ್ತಿ ಏರಿಕೆ ಈ ನಾಲ್ಕು ವರ್ಷಗಳಲ್ಲಿ ಶೇ.465.6 ರಷ್ಟು! ಉದಾ: ಬಿಜೆಪಿಯ ಮಾಜಿ ಸಚಿವ ಕಟ್ಟಾ ಸುಬ್ರಮಣ್ಯನಾಯ್ಡು ರವರ 2004 ರ ಘೋಷಿತ ಆಸ್ತಿ 2,57,33,859 ರೂ. 2008ರಲ್ಲಿ 12,50,48,125 ರೂ. ಅಂದರೆ ಶೇ.383.9 ಏರಿಕೆ. ಅದೇ ರೀತಿ ಇನ್ನೊಬ್ಬ ಬಿಜೆಪಿ ಮಾಜಿ ಸಚಿವ ಆರ್.ಅಶೋಕ್ 2004 ರಲ್ಲಿ ಘೋಷಿತ ಆಸ್ತಿ 37,18,756 ರೂ 2008ರಲ್ಲಿ 10,05,81,668 ರೂ. ಅಂದರೆ ಶೇ.2604.7 ಇದು ಇವರೇ ನೀಡಿರುವ ದಾಖಲೆಗಳ ಪ್ರಕಾರ. ಇದು 'ಭಿನ್ನ ಸ್ವರೂಪ ಪಕ್ಷದ ಅಭಿನ್ನತೆ'. ಇರಲಿ. ಈ ಬಗ್ಗೆ ಅವರೂ ಈಗ ಮಾತನಾಡುತ್ತಿಲ್ಲ. ಕಾಂಗ್ರೆಸ್ 50 ವರ್ಷಗಳಲ್ಲಿ 'ಸಾಧಿಸಿದ್ದನ್ನು' ತಾವು ಐದೇ ವರ್ಷಗಳಲ್ಲಿ 'ಸಾಧಿಸಿದ' ಹೆಗ್ಗಳಿಕೆ ಅವರದ್ದು!

ಒಟ್ಟಿನಲ್ಲಿ ಎಲ್ಲರಿಗೂ ರಾಜಕೀಯದಲ್ಲಿರುವುದೇ ಹಣ ಗಳಿಸಲು ಎಂಬಂತಾಗಿದೆ. ಆದ್ದರಿಂದಲೇ ಈ ಮೂರು ಪಕ್ಷಗಳಲ್ಲಿ ರಿಯಲ್ ಎಸ್ಟೇಟ್, ಗಣಿ, ಸಾರಾಯಿ, ಶಿಕ್ಷಣ ಲಾಬಿಗಳ ಅಭ್ಯರ್ಥಿಗಳದ್ದೇ ಮೇಲುಗೈ. ಜೊತೆಗೆ ಕ್ರಿಮಿನಲ್ ಹಿನ್ನೆಲೆಗಳು. ಇದನ್ನು ನಿಲ್ಲಿಸದಿದ್ದರೆ ಚುನಾವಣೆಗಳು, ಪ್ರಜಾಪ್ರಭುತ್ವ ಮತ್ತು ಒಟ್ಟಾರೆ ಆಡಳಿತ ವ್ಯವಸ್ಥೆಗೆ ಅಪಾಯವಿದೆ ಎನ್ನುವುದು ಈ ಎಲೆಕ್ಷನ್ ವಾಚ್ ಸಂಘಟನೆಯ ಮುಖಂಡರ ಆತಂಕ. ಇದು ಎಲ್ಲಾ ಪ್ರಜಾಪ್ರಭುತ್ವವಾದಿಗಳ ಆತಂಕ ಕೂಡಾ.


ಇವರು ದುಡಿವ ವರ್ಗದ ದನಿ

ಗುಲ್ಬರ್ಗಾ ಗ್ರಾಮೀಣ ಕ್ಷೇತ್ರ-ಮಾರುತಿ ಮಾನ್ಪಡೆ

ಕರ್ನಾಟಕದ 13ನೇ ವಿಧಾನಸಭೆಗೆ ಅಂತಿಮ ಹಂತದ ಚುನಾವಣೆ ಮೇ 22 ರಂದು ನಡೆಯಲಿದ್ದು ಗುಲ್ಬರ್ಗಾ ಗ್ರಾಮೀಣ ಕ್ಷೇತ್ರದಿಂದ ಸಿಪಿಐ(ಎಂ) ಅಭ್ಯರ್ಥಿಯಾಗಿ ಮಾರುತಿ ಮಾನ್ಪಡೆ ಸ್ಪರ್ಧಿಸಿದ್ದಾರೆ.

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕ್ಕೆ ಚುನಾವಣೆ ಎಂಬುದು ರಾಜಕೀಯ ಹೋರಾಟದ ಪ್ರಮುಖ ಭಾಗ. ವಿವಿಧ ಜನ ವಿಭಾಗಗಳ ಸಮಸ್ಯೆ ಹಾಗೂ ಸಮಸ್ತ ಶೋಷಿತ ಜನರ ಒಟ್ಟು ಸಮಸ್ಯೆಗಳ ಪರಿಹಾರಕ್ಕಾಗಿ ಚಳುವಳಿ ನಡೆಸುವ ಸಿಪಿಐ(ಎಂ) ಆ ಚಳುವಳಿಯನ್ನು ವಿಧಾನಸಭೆ ಮೊದಲಾದ ಚುನಾಯಿತ ಪ್ರತಿನಿಧಿಗಳ ಸಭೆಯಲ್ಲಿ ಪ್ರತಿಧ್ವನಿಸಲು ಚುನಾವಣೆಯನ್ನು ಬಳಸಿಕೊಳ್ಳುತ್ತಿದೆ.

ರಾಜ್ಯ ಸರ್ಕಾರಿ ನೌಕರಿಯಲ್ಲಿದ್ದು ಅದಕ್ಕೆ ರಾಜೀನಾಮೆ ಕೊಟ್ಟು ಎಡ ಚಳುವಳಿಗೆ ಧುಮುಕಿದ ಮಾರುತಿ ಮಾನ್ಪಡೆಯವರು ಗುಲ್ಬರ್ಗಾದಲ್ಲಿ ಮಾತ್ರವಲ್ಲದೆ ರಾಜ್ಯದಾದ್ಯಂತ ಪಕ್ಷದ ನೇತೃತ್ವದಲ್ಲಿ ಹಲವಾರು ಚಳುವಳಿಯನ್ನು ಕಟ್ಟಿ ಬೆಳೆಸಿದವರು. ಕರ್ನಾಟಕ ಪ್ರಾಂತ ರೈತ ಸಂಘದ ಅಧ್ಯಕ್ಷರಾಗಿ, ರಾಜ್ಯದಾದ್ಯಂತ ರೈತರ ಸಮಸ್ಯೆಗಳ ಗಮನ ನೀಡಿದ ಅವರು ಗುಲ್ಬರ್ಗಾ ಜಿಲ್ಲೆಯಲ್ಲಿ ತೊಗರಿ ಬೆಳೆಗಾರರ ಸಂಕಷ್ಟಗಳಿಗೆ ದನಿಯಾಗಿದ್ದರು. ಸತತ ಹೋರಾಟದ ಫಲವಾಗಿ ತೊಗರಿ ಬೋರ್ಡ್ ಸ್ಥಾಪನೆಯಾಗಿದ್ದು ಬೆಳೆಗಾರರಿಗೆ ಸಹಾಯವಾಗಿದೆ. ವಿದ್ಯುತ್ ಸರಬರಾಜು ಕಂಪನಿಗಳ ಖಾಸಗೀಕರಣದ ಭಾಗವಾಗಿ, ರೈತರ ಪಂಪ್ ಸೆಟ್‌ಗಳಿಗೆ ಮೀಟರ್ ಅಳವಡಿಸಬೇಕೆಂದು ಎಸ್.ಎಂ.ಕೃಷ್ಣ ಸರ್ಕಾರದ ನಿರ್ಧರಿಸಿದಾಗ ಅದರ ವಿರುದ್ಧ ರೈತರ



ಹೋರಾಟ ಸಮಿತಿಗಳನ್ನು ರಚಿಸಿ ತೀವ್ರವಾದ ಹೋರಾಟಗಳು ನಡೆದವು. ಆ ಸಂದರ್ಭದಲ್ಲಿ ಪೋಲೀಸರ ದಬ್ಬಾಳಿಕೆಯನ್ನಲ್ಲದೆ ಜೈಲು ವಾಸವನ್ನು ಅನುಭವಿಸಬೇಕಾಯ್ತು.

ಅತ್ಯಂತ ಕಡಿಮೆ ವೇತನದಲ್ಲಿ ದುಡಿಯುತ್ತಿದ್ದ ಗ್ರಾಮ ಪಂಚಾಯಿತಿ ನೌಕರರಿಗೆ ಸೇವಾ ಸೌಲಭ್ಯಗಳನ್ನು ವೇತನವನ್ನು ಉತ್ತಮಗೊಳಿಸುವಲ್ಲಿ ಮಾನ್ಪಡೆಯವರು ಅಧ್ಯಕ್ಷರಾಗಿರುವ ಕರ್ನಾಟಕ ರಾಜ್ಯ ಗ್ರಾಮ ಪಂಚಾಯಿತಿ ನೌಕರರ ಸಂಘವು ತೀವ್ರವಾದ ಹೋರಾಟಗಳನ್ನು ನಡೆಸಿ ಯಶಸ್ವಿಯಾಗಿದೆ.

ದೇವದಾಸಿ ಮಹಿಳೆಯರು ಆರ್ಥಿಕವಾಗಿ ಮಾತ್ರವಲ್ಲದೆ ಸಾಮಾಜಿಕವಾಗಿ ಅತ್ಯಂತ ಶೋಷಿತ ವಿಭಾಗಕ್ಕೆ ಸೇರಿದವರು. ದೇವದಾಸಿ ಪದ್ಧತಿಯನ್ನು ನಿರ್ಮೂಲನೆ ಮಾಡಬೇಕೆಂದು ಸರ್ಕಾರವು ಘೋಷಿಸಿದ್ದರೂ ಪಾಳೆಯಗಾರಿ ಭೂ ಮಾಲಕರ ತೃಷೆಯಿಂದಾಗಿ ಹಲವಾರು ಜಿಲ್ಲೆಗಳಲ್ಲಿ ದೇವದಾಸಿ ಪದ್ಧತಿಯು ಆಗಲೇ ಉಳಿದುಕೊಂಡಿದೆ.

ಅಂತೆಯೇ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಸಮಸ್ಯೆಗಳ ಬಗ್ಗೆ ವಿಶೇಷ ಗಮನ ನೀಡಬೇಕೆಂದು ಪಕ್ಷವು ನಿರ್ಧರಿಸಿದಾಗ ರಾಜ್ಯ ಮಟ್ಟದಲ್ಲಿ ಅವರನ್ನು ಸಂಘಟಿಸಲು ಮತ್ತು ಅಸ್ಪೃಶ್ಯತೆ ಮತ್ತಿತರ ಅಸಮಾನತೆಯ ವಿರುದ್ಧ ಹೋರಾಡಲು ಪಕ್ಷವು ಮಾನ್ಪಡೆಯವರಿಗೆ ವಿಶೇಷ ಜವಾಬ್ದಾರಿ ನೀಡಿತು. ಈ ಸಂದರ್ಭದಲ್ಲಿ ಹಲವಾರು ಹೋರಾಟಗಳನ್ನು ಕೈಗೆತ್ತಿಕೊಂಡು ಮಧ್ಯ ಪ್ರವೇಶಕ್ಕೆ ಮುತುವರ್ಜಿ ವಹಿಸಿದ ಮಾನ್ಪಡೆಯವರು ಕಂಬಾಲಪಲ್ಲಿ ದಲಿತರ ಸಜೀವ ಪ್ರಕರಣದಲ್ಲಿ ಆರೋಪಿಗಳು ನ್ಯಾಯಾಲಯವು ಖುಲಾಸೆಗೊಳಿಸಿದಾಗ ಮರು ವಿಚಾರಣೆ ನಡೆಸಬೇಕೆಂದು, ಪಾದಯಾತ್ರೆ ಕೈಗೊಂಡು ಅದರ ನಾಯಕತ್ವ ವಹಿಸಿದರು. ಆಗಲೇ ಬಿಜಾಪುರ ಜಿಲ್ಲೆಯ ಕಡಕೋಳ, ಬೀದರ್ ಜಿಲ್ಲೆಯ ಚಿಟ್ಟಾ ಮೊದಲಾದೆಡೆ ಪಕ್ಷದ ನೇತೃತ್ವದಲ್ಲಿ ಮಾನ್ಪಡೆಯವರು ನಡೆಸಿದ ಹೋರಾಟ ಅವಿಸ್ಮರಣೀಯ.

ಇತಿಹಾಸ - ವರ್ತಮಾನ

ಇತಿಹಾಸದ ಪುಟ ತಿರುವಿದೆ
ಕಂಡಿತು ನನಗಲ್ಲಿ
ಹಿಟ್ಲರನ ಕ್ರೂರ ಮುಖ
ನಾಝಿ ಸೈನ್ಯದ
ಕೊಲೆಗಡುಕ ಕವಾಯತು
ಸಾಲು ಸಾಲು ಹೆಣದ ರಾಶಿ
ನೆಲದವ್ವ ಹಾಡಿದ
ಶೋಕಗೀತೆ

ಕ್ರೂರ ಕೈಗಳ ಚಾಚಿ
ಹಿರೋಷಿಮಾದ ಮೇಲೆಸೆದ
ಬಾಂಬಿನ ಸದ್ದು
ಸುಟ್ಟು ಬೂದಿಯಾದ ಬದುಕು
ಚಟ್ಟ ಕಟ್ಟುವವರಿಲ್ಲದೆ
ಎಲ್ಲೆಂದರಲ್ಲಿ
ಕೊಳೆತ ಹೆಣಗಳ ನಾತ
ಇನ್ನೂ ಹಸಿಯಾದ ರಕ್ತ

ವರ್ತಮಾನದತ್ತ
ಕಣ್ಣು ಹೊರಳಿಸಿದೆ
ಕಂಡ ಕಂಡಲ್ಲೆಲ್ಲ
ನೆತ್ತರು ದೆವ್ವದ ಕುಣಿತ
ಭಯದ ಕರಿನೆರಳು
ಲಾಠಿ, ತ್ರಿಶೂಲಗಳ
ಕವಾಯತು
ಗೋಬೆಲ್ ಮಂತ್ರದ ಪಠಣ
ಮೋದಿಯ ಕಣ್ಣಲ್ಲಿ
ಹಿಟ್ಲರನ ಕ್ರೂರ ಮುಖದ
ಪ್ರತಿಬಿಂಬ
(ಅದೇ ಬಾಂಬಿನ ಸದ್ದು)
ಅದೇ ರಕ್ತ
ಅದೇ ಹೆಣಗಳ ನಾತ
ನೆಲದವ್ವ ಹಾಡಿದ
ಅದೇ ಶೋಕ ಗೀತೆ

– ಹುಲಿಕಟ್ಟೆ ಚನ್ನಬಸಪ್ಪ

ಸರ್ರ್ಯಾಗಿ ಬುದ್ಧಿ ಕಲಿಸಬೇಕು

ಕತ್ತೆ

ಶ್ರೀ

"ಏನ್ಲಾ ಚಡ್ಡಿ ಚಿಕ್ಕ ಬಾಳ ಕುಸಿಲಿದೀಯ?" ಎಂದು ಕೇಳಿದ ಎಣ್ಣೆ ತಮ್ಮಣ್ಣ.

"ನಿನ್ನ ಕುಸಿ ಮುಂದೆ ನಮ್ಮದೇನು ಬುಡ್ಲಾ, ಈಗೇನು ಎಣ್ಣೆ ಒಳಗೇ ಈಜಾಡ್ತಿದೀಯೋ ಎಂಗೆ?"

"ಸುಮ್ಗಿರಪ್ಪ , ನಮ್ಮ ಬ್ರಾಂಡು ಸಿಗದಿದ್ಮೇಲೆ ಇನ್ಯಾವುದು ಆಕಿದ್ರೂ ಸಮಾದಾನ ಆಗಕಿಲ್ಲ".

"ಅಂದಂಗೆ ಈ ಎಲೆಕ್ಸನ್ ಕಮೀಸನ್ನು ಬಾಳ ಟ್ರಿಕ್ಸ್ ಮಾಡಿ ನಮಗೆಲ್ಲ ಒಳ್ಳೆ ತಾಪತ್ರಯ."

"ನಿನಗೇನ್ಲಾ ಎಲ್ಲಾಗಿದ್ದು?."

"ನೋಡು ಈ ಎಲೆಕ್ಸನ್ನಿಗೆ ನಿಂತೋರು ಬ್ಯಾನರ್ರು ಕಟವುಟು ಅಳು ಮೂಳು ಅಂತ ದುಡ್ಡೆಲ್ಲ ಆಳು ಮಾಡೋರು, ಈಗ ಅದೇ ದುಡ್ಡಲ್ಲಿ ನಮ್ಮ ಎಂಗುಸ್ರುಗೆಲ್ಲ ಸೀರೆ ಗೀರೆ ಅಂಚುತಾವ್ರೆ."

"ನಿನ್ನೆಂಡ್ತಿಗೆ ಒಳ್ಳೆ ಸೀರೆಗಳ ಕಲೆಕ್ಷನ್ ಆಗಿದೆ ಅನ್ನು. ಇನ್ನೇನು ಇನ್ನೊಂದು ಐದು ವರ್ಸ ನೀನು ಸೀರೆ ಗೀರೆ ಕೊಡ್ಸಂಗಿಲ್ಲ ಬುಡು ಅತ್ಲಾಗೆ."

"ಥೂ ಅದ್ರು ಸುದ್ದಿ ಎತ್ತಬೇಡ ಕನ್ಲಾ, ನನ್ನೆಂಡ್ರು ಬಾಯಿಗೆ ಬಂದಂಗೆ ಉಗೀತವಳೆ".

"ಏನಂತ?".

"ಯಾವ ನನ್ ಮಗ್ನೂ ಒಳ್ಳೆ ಸೀರೆ ಕೊಟ್ಟಿಲ್ಲ. ನೆಲ ಸಾರ್ಸ ಬಟ್ಟೆ ಇದ್ದಂಗಿದವೆ. ಒಂದಾರ ಒಳ್ಳೆ ಕಲರ್ ಇಲ್ಲ. ಒಳ್ಳೆ ಡಿಜೈನ್ ಇಲ್ಲ. ಗೂಬೆ ಬಣ್ಣ ಇದ್ದಂಗಿದವೆ. ಈ ಬಡ್ಡಿಮಕ್ಳು ಯಾರಿಗೂ ಓಟ್ ಆಕಬಾರದು. ಸರ್ರ್ಯಾಗೆ ಬುದ್ದಿ ಕಲುಸ್ಬೇಕು. ಎಣ್ ಮಕ್ಳು ಅಂದ್ರೆ ಏನಂತ ತಿಳ್ಕಂಡವರೆ? ಇವ್ರು ಯಾವುದೋ ಒಂದು ಸೀರೆ ಕೊಡುಸ್ ಬುಟ್ರೆ ನಾವು ಮಳ್ಳಾಗಿ ಓಟ್ ಆಕ್‌ಬುಡ್‌ತೀವ? ನಮಗೇನು ಬುದ್ದಿ ಗಿದ್ದಿ ಇಲ್ಲ ಅಂತ ತಿಳಕಂಡವರೋ ಎಂಗೆ? ಇಂತ ಮನೆ ಆಳು —ಮಕ್ಳಿಗೆಲ್ಲ ಸರ್ರ್ಯಾಗಿ ಬುದ್ದಿ ಕಲುಸ್ ಬೇಕು. ಅಂಗೆ ಇಂಗೆ ಅಂತ ವದರಾಡತಾನೇ ಇರ್ತಳಪ್ಪ".

"ನನ್ನೆಂಡತೀನೂ ಅಂಗೇ, ಎಂಗುಸ್ರು ಅಂದ್ರೆ ಅಮ್ಮ, ತಾಯಿ, ದ್ಯಾವರು, ಲೊಟ್ಟೆ ಲೊಸಕು ಅಂತ ಏನೇನೋ ರೈಲು ಅತ್ತುಸ್ತಾರೆ. ಎಲೆಕ್ಸನ್ನಿಗೆ ಟಿಗೇಟ್ ಕೊಡ್ರಲಾ ಅಂದರೆ, ಗೆಲ್ಲೋರಿಗೆ ಕೊಡತೀವಿ ಅಂತ ಕಳ್ರು ಕಾಕರು ಕಿಮಿನಲ್ಲುಗಳಿಗೆ ಕೋಟ್ಯಾಂತರ ರುಪಾಯಿಗೆ ಮಾರ್ಕತರೆ. ನಾವೇ ಅಧಿಕಾರಕ್ಕೆ ಬರದು ಅಂತರೆ. ಅದ್ರೆ ಈ ಯಾವ ಪಕ್ಸದೋರು ಎಣ್ ಮಕ್ಕಳಿಗೆ ಸರ್ರ್ಯಾಗಿ ಟಿಕೇಟ್ ಕೊಟ್ಟಿಲ್ಲ. ಎಲ್ರಿಗು ಸರ್ರ್ಯಾಗಿ ಬುದ್ದಿ ಕಲುಸ್ಬೇಕು. ಅಂತ ಉಗಿತಾ ಇರ್ತಳಪ್ಪ."

"ಅದಿರಲಿ, ಯಾವ ಪಕ್ಸ ಗೆಲ್ಲಬೋದು ಅಂತೀಯ?"

"ಅನುಮಾನಾನೇ ಇಲ್ಲ, ನಮ್ಮ ಬಿಜೆಪೀನೇ ಗೆಲ್ಲೋದು." ಎಂದ ಚೆಡ್ಡಿ ಚಿಕ್ಕಣ್ಣ.

"ಅಲ್ಲ ಕಣಲಾ ಚೆಡ್ಡಿ ಚಿಕ್ಕಣ್ಣ, ನಿಮ್ಮ ಮುಕ್ಯಮಂತ್ರಿ ಅಭ್ಯರ್ಥಿನೇ ಏದುಸ್ರು ಬಿಡತಾವ್ರೆ, ಇನ್ನು ನಿಮ್ಮ ಪಾಲ್ಟಿ ಎಂಗ್ಲಾ ಗೆಲ್ಲುತ್ತೆ?"

"ಏ ನಮ್ಮ ಪಕ್ಸದ ಪ್ರಚಾರ ಒಳ್ಳೆ ಜೋರಾಗೈತೆ, ಗೆಲ್ಲೋತರ ಕಾಣತೈತೆ."

"ನಿಮ್ಮ ಪಕ್ಸದ್ದು ಯಾವಾಗಲೂ ಅಂಗೇಯ. ತಗಡಿನ ಖಾಲಿ ಡಬ್ಬದೊಳಗೆ ಕಲ್ಲು ಆಕಿ ಅಲ್ಲಾಡಿಸಿದಂಗೆ. ಸಬ್ದ ಬಲು ಜೋರು".

"ಅಂಗೇನಿಲ್ಲ ಸುಮ್ಗಿರಪ್ಪ ನಮ್ಮೋರು ಒಳ್ಳೊಳ್ಳೆ ಪಾಯಿಂಟ್ ಆಕವರೆ."

"ಥೂ, ನಿನ್ನ ಮಕಕಿಷ್ಟು, ಏನು ದರಿದ್ರ ಪಾಯಿಂಟಲಾ ನಿಮ್ಮ ಪಕ್ಸದ್ದು, ಇಲ್ಲಿ ರೈತರು ನೇಣಾಕ್ಕೊಂಡು ಸಾಯ್ತಾವ್ರೆ, ಆ ಇಸ್ಯ ಬುಟ್ಟು, ಅದ್ಯಾವನೋ ಒಬ್ಬನಿಗೆ ಗಲ್ಲಿಗಾಕಬೇಕೂಂತ ಬಡಕೋತಾವ್ರಲ್ಲ. ಕಾನೂನು ಸಂವಿಧಾನ ಏನಿದ್ದದೋ ಅಂಗಾಯ್ತದೆ, ಇವ್ರು ಯಾಕ್ರಲಾ ಅಂಗೆ ವದರಾಡ್ತರೆ. ಆ ವಯ್ಯ ಮುಸ್ಲಿಂ ಅಂತ ತಾನೆಯಾ? ಒರಿಸ್ಸಾದಲ್ಲಿ ಗ್ರಹಾಂಸ್ಟೇನ್ನು ಮತ್ತೆ ಮಕ್ಕಳನ್ನು ಜೀವಂತ ಸುಟ್ನಲ್ಲ ದಾರಾಸಿಂಗ್, ನರಮೇಧ ಮಾಡುದ್ನಲ್ಲ ಅವುನ್ನ ನೇಣಾಕಿ ಅಂತ ಕೇಳ್ಲೇ ಇಲ್ಲ ಇವ್ರು".

"ಅಂಗಲ್ಲ ಕಣಲಾ..., ಕರ್ನಾಟಕನ ಒಳ್ಳೆ ಗುಜರಾತು ತರ ಮಾಡನಾಂತ".

"ಥೂ ನಿನ್ನ......, ಎಸ್ಟು ಉಗುದ್ರೂ ನಾಚ್ಕೆ ಅನ್ನೋದೆ ಇಲ್ಲವಲ್ಲಾ ನಿಮಿಗೆ. ಅಲ್ಲ, ಕರ್ನಾಟಕ ಇದ್ದಂಗೇ ಇರ್ಲಿ. ಅದನ್ನ ತಗೊಂಡೋಗಿ ಗುಜರಾತಿನಂಗೆ ಬೆಂಕಿ ಅಚ್ಚಿ ನಾಸ ಮಾಡೋಕೆ ವಂಟಿದಿರಾ ? ನಿಮಿಗೆ ಮಾನ ಮರವಾದೆ ಮನುಸತ್ವ ಅನ್ನೋದೆ ಇಲ್ವೇನ್ರಲಾ..., ಥೂ?..,?

"ಏ ಸುಮ್ಗಿರಪ್ಪ ಯಾಕೋ ಬಾರಿ ರಾಂಗಾಗಿದೀಯ. ಒಗ್ಲೀ ಬಿಜೆಪಿ ಟಿ.ವಿ. ಜಾಯಿರಾತು ನೋಡ್ದಾ"

"ನಿಮ್ಮ ಬಿ ಜೆ ಪಿ ನೇ ಒಂದು ದೊಡ್ಡ ಸಮಸ್ಯೆ. ಅದು ಪರಿಹಾರ ಎಂಗಾಯ್ತದೆ? ಬಿಜೆಪಿ ಅಯೋಧ್ಯೆ, ಬಾಬಾಬುಡನ್ ಗಿರಿ, ಅಂತ ಇಲ್ಲದ ಸಮಸ್ಯೆ ಸೃಷ್ಟಿ ಮಾಡಿ ಹಿಂಸೆ, ರಕ್ತಪಾತ,ಕೊಲೆ, ಬೆಂಕಿ ಗಲಭೆ ಇವನ್ನು ಸೃಷ್ಟಿಸಿದೆ. ಅದೇ ಅದರ ಉದ್ಯೋಗ. ಬಿಜೆಪಿನೇ ಪರಿಹಾರ ಅಂತೀಯಲ್ಲ ನಡೀಲಾ ಅತ್ಲಾಗೆ."

ವಿಧಾನಸಭಾ ಚುನಾವಣೆ
ಮಹಿಳಾ ಸಬಲೀಕರಣದ ಪ್ರಶ್ನೆಗಳು

ಮಹಿಳಾ ಸಬಲೀಕರಣದ ಘೋಷಣೆಗಳೇನೋ ಬಹಳಷ್ಟು ಕೇಳಿಬರುತ್ತಿವೆ. ಆದರೆ ಈ ನಿಟ್ಟಿನಲ್ಲಿ ಪ್ರಯತ್ನಗಳು ಏನೇನೂ ಸಾಲವು. ಮತ್ತೆ ಈ ಬಾರಿಯ ಚುನಾವಣೆಯ ಸಂದರ್ಭದಲ್ಲಿ ಸಿಪಿಐ(ಎಂ) ಕಾರ್ಯದರ್ಶಿಮಂಡಳಿ ಸದಸ್ಯೆ ಕೆ.ನೀಲಾರವರು ಈ ಪ್ರಶ್ನೆಯನ್ನು ರಾಜ್ಯದ ಮತದಾರರನ್ನುದ್ದೇಶಿಸಿ ಮಾಡಿದ ದೂರದರ್ಶನ ಭಾಷಣದಲ್ಲಿ ಪರಿಶೀಲಿಸಿದ್ದಾರೆ.



ಕರ್ನಾಟಕ ರಾಜ್ಯದಲ್ಲಿ 13ನೇ ವಿಧಾನಸಭಾ ಚುನಾವಣೆಗಳು ಬಂದಿದೆ. ಈ ಚುನಾವಣೆಗಳು ಏಕೆ ಬಂದಿವೆ? ಹೇಗೆ ಮತದಾರರ ಬಂಧುಗಳು ಇದನ್ನು ಸ್ವೀಕರಿಸಬೇಕೆಂಬುದು ನಮ್ಮ ಮುಂದಿನ ಪ್ರಶ್ನೆ. 12ನೇ ವಿಧಾನಸಭಾ ಚುನಾವಣೆ ನಡೆದಾಗ ಮತದಾರ ಬಂಧುಗಳು ಯಾವುದೇ ಒಂದು ರಾಜಕೀಯ ಪಕ್ಷಕ್ಕೆ ಬಹುಮತ ನೀಡಲಿಲ್ಲ. ಜನರ ಪೂರ್ಣ ವಿಶ್ವಾಸಗಳಿಸಲಿಲ್ಲ. ಪರಿಣಾಮ ಸಮ್ಮಿಶ್ರ ಸರ್ಕಾರಗಳ ಆಳ್ವಿಕೆ ರಾಜ್ಯದಲ್ಲಿ ನಡೆಸುವಂತಾಯಿತು. ಸರ್ಕಾರವನ್ನು ರಚಿಸಿದ ಪ್ರಮುಖ ಪಕ್ಷಗಳು ತಮ್ಮ ತತ್ವ ಸಿದ್ಧಾಂತಗಳಿಗೆ ತಿಲಾಂಜಲಿಯಿಟ್ಟು ಅಧಿಕಾರ ದಾಹ ಮತ್ತು ಸಂದರ್ಭ ಸಾಧಕತನದ ಕಾರಣದಿಂದ ಕರ್ನಾಟಕ ರಾಜ್ಯದ ಜನತೆ ಒಂದುವರೆ ವರ್ಷ ಮುಂಚಿತವಾಗಿಯೇ ಚುನಾವಣೆಯನ್ನು ಎದುರಿಸುವಂತಾಗಿದೆ.

ರಾಜಕೀಯ ಪಕ್ಷಗಳ ನೀತಿಗಳಿಂದಾಗಿ ಮತದಾರರು ರಾಜಕೀಯ ಒಂದು ವ್ಯಾಪಾರ ಎಂದು ಭಾವಿಸಿ, ದೂರವಾಗಲು ಪ್ರಯತ್ನಿಸುತ್ತಿರುವುದು ಇತ್ತೀಚೆಗೆ ಕಂಡು ಬರುತ್ತಿದೆ. ರಾಜ್ಯದ ಸಮಗ್ರ ಅಭಿವೃದ್ಧಿಗೆ ಪೂರಕವಾಗಿ ಜನರ ಅಭಿಪ್ರಾಯಗಳಿಂದಲೇ ಆಯ್ಕೆ ಮಾಡಬೇಕಾದ ಸಂವಿಧಾನಬದ್ಧ ಜವಾಬ್ದಾರಿಯಿರುವುದರಿಂದ ರಾಜ್ಯದ ಮತದಾರ ಬಂಧುಗಳು ತಮ್ಮ ಪವಿತ್ರವಾದ ಮತವನ್ನು ಅತ್ಯಂತ ಜಾಗರೂಕತೆಯಿಂದ ತಪ್ಪದೇ ಚಲಾಯಿಸಬೇಕಾಗಿದೆ.

ಮೂರುವರೆ ವರ್ಷ ಆಳ್ವಿಕೆ ನಡೆಸಿದ ರಾಜ್ಯದ ಪ್ರಮುಖ ಪಕ್ಷಗಳು ರಾಜ್ಯದ ಜನತೆಯ ಬದುಕು ಮೂಲಭೂತ ಸಮಸ್ಯೆಗಳಾದ ಉದ್ಯೋಗ, ನಿರುದ್ಯೋಗ, ಉದ್ಯೋಗಕ್ಕೆ ತಕ್ಕ ಕೂಲಿ, ರೈತರ ಸಂಕಷ್ಟಗಳು, ಮಹಿಳೆಯರ ಮೇಲೆ ಹೆಚ್ಚುತ್ತಿರುವ ದಬ್ಬಾಳಿಕೆ, ಮಹಿಳೆಯರನ್ನು ಅಮಾನವೀಯವಾಗಿ ದುಡಿಸುವುದು, ಬಾಲ ಕಾರ್ಮಿಕರಿಗೆ ಪುನರ್ವಸತಿ, ವಿದ್ಯಾರ್ಥಿ-ಯುವಜನರ ಸಮಸ್ಯೆ, ದಲಿತ-ಅಲ್ಪಸಂಖ್ಯಾತರಿಗೆ ಭದ್ರತೆ, ಮೂಲಭೂತ ಸಮಸ್ಯೆಗಳಾದ ನೀರು, ಆರೋಗ್ಯ, ಶೌಚಾಲಯ, ವಿದ್ಯುತ್, ಸಾರಿಗೆ ವ್ಯವಸ್ಥೆ, ಪಡಿತರ ವ್ಯವಸ್ಥೆ ಅಭಿವೃದ್ಧಿಗೆ ಸಂಬಂಧಿಸಿ, ಕೃಷಿ ಬಿಕ್ಕಟ್ಟು, ಕೈಗಾರಿಕಾ ರಂಗದ ಬಿಕ್ಕಟ್ಟುಗಳಿಗೆ ಸಂಬಂಧಿಸಿ ಚರ್ಚಿಸಿದ್ದು, ಯೋಜನೆ ರೂಪಿಸುವುದರ ಬದಲಿಗೆ 20-20 ಕಪ್, ಲವ್ ಮ್ಯಾರೇಜ್, ಹನಿಮೂನ್ ಎಂಬ ಹೇಳಿಕೆಗಳನ್ನು ನೀಡುತ್ತಲೇ ಅಧಿಕಾರ ಉಳಿಸಲು ಚರ್ಚೆ ನಡೆಸಿದ್ದೆ ಹೆಚ್ಚು. ಮಹಿಳೆಯರ ಉದ್ಧಾರದ ಬಗ್ಗೆ ಎಗ್ಗಿಲ್ಲದೇ ಮಾತನಾಡುವ ಇವರು ಕಳೆದ ಸರ್ಕಾರದಲ್ಲಿ ಒಬ್ಬಳೇ ಒಬ್ಬ ಮಹಿಳೆಯನ್ನು ಮಂತ್ರಿ ಮಾಡಲಿಲ್ಲ ಎಂಬುದು ಇವರ ನಿಜವಾದ ರಾಜಕೀಯ ಬಣ್ಣವನ್ನು ಬಯಲಿಗಿಡುತ್ತದೆ.

ಮಹಿಳಾ ಸಬಲೀಕರಣ:

ಜನಸಂಖ್ಯೆಯ ಅರ್ಧದಷ್ಟಿರುವ ಮಹಿಳೆಯರ ಮೇಲಿನ ದೌರ್ಜನ್ಯ ಮತ್ತು ದಬ್ಬಾಳಿಕೆಗಳು ಕಡಿಮೆಯಾಗಬೇಕಾದರೆ ಮಹಿಳೆಯರು ಆರ್ಥಿಕವಾಗಿ ಸ್ವಾತಂತ್ರ್ಯ ಪಡೆದಾಗ ಮಾತ್ರ. ಆದರೆ ಇದುವರೆಗೂ ಆಳ್ವಿಕೆ ನಡೆಸಿದ ಪಕ್ಷಗಳು ಮಹಿಳಾ ಸಬಲೀಕರಣವಾಗಬೇಕೆಂಬ ಘೋಷಣೆಗಳನ್ನು ಮಾತ್ರ ನೀಡುತ್ತವೆ. ಆದರೆ ಮಹಿಳೆಯರ ಮೂಲಭೂತ ಸಮಸ್ಯೆಗಳನ್ನು ಪರಿಹರಿಸಲು ಶ್ರಮಿಸುತ್ತಿಲ್ಲ.

ಕುಟುಂಬದ ನಿರ್ವಹಣೆಗಾಗಿ ಮತ್ತು ಸ್ವಾವಲಂಬನೆಗಾಗಿ ಕೋಟಿಗಟ್ಟಲೆ ಮಹಿಳೆಯರು ಮನೆಯಿಂದ ಹೊರಗಡೆ ಬಂದು ದುಡಿಯುತ್ತಿದ್ದಾರೆ. ಎಲ್ಲಿ ಹೆಚ್ಚು ಶ್ರಮ ಮತ್ತು ಕಡಿಮೆ ಕೂಲಿ ಇರುತ್ತದೋ ಅಲ್ಲಿ ಮಹಿಳೆಯರು ಹೆಚ್ಚು ದುಡಿಯುತ್ತಿರುವುದನ್ನು ಕಾಣಬಹುದಾಗಿದೆ.

ಅಸಂಘಟಿತ ಕ್ಷೇತ್ರದಲ್ಲಿ ಇಂದಿಗೂ ದುಡಿಯುತ್ತಿರುವ ಕಾರ್ಮಿಕರಿಗೆ ದಿನಕ್ಕೆ 20 ರೂ. ಕೂಲಿ ಇದೆ. ಕೆಲಸದ ಭದ್ರತೆಯಿಲ್ಲ. ಗುತ್ತಿಗೆ, ದಿನಗೂಲಿ ಬದಲಿ ಕಾರ್ಮಿಕರಾಗಿ ಸರ್ಕಾರದ ಕಛೇರಿಗಳಲ್ಲಿ, ಖಾಸಗಿ ಕಂಪನಿ, ಕಾರ್ಖಾನೆಗಳಲ್ಲಿ 8 ಗಂಟೆಗಳ ಬದಲಿಗೆ 10-12 ಗಂಟೆ ದುಡಿಸಿಕೊಳ್ಳುವ ಪದ್ಧತಿ ಇದೆ. ದುಡಿಯುವ ಸ್ಥಳಗಳಲ್ಲಿ ಶೌಚಾಲಯವಿಲ್ಲದೆ ರಾತ್ರಿ ಪಾಳೆಯಗಳಲ್ಲಿ ದುಡಿಯಬೇಕಾದ ಪರಿಸ್ಥಿತಿ ಇದೆ. ಈ ದುಡಿಮೆಗೆ ಇಂತಹುದೇ ರೂಪ ಎಂದು ಹೇಳಿಕೊಳ್ಳುವ ಪರಿಸ್ಥಿತಿಯಲ್ಲಿಯೂ ಇಲ್ಲ. ದುಡಿಯುವ ಮಹಿಳೆಯ ಮೂಲಭೂತ ಹಕ್ಕಾದ ಹೆರಿಗೆ ಭತ್ಯೆಯನ್ನು ಇಂದು ಹಲವಾರು ಕ್ಷೇತ್ರಗಳಲ್ಲಿ ಜಾರಿ ಮಾಡುತ್ತಿಲ್ಲ. ಹೆರಿಗೆ ಭತ್ಯೆಯನ್ನು ಕೇಳಿದರೆ ನೀನು ಕೆಲಸಕ್ಕೆ ಬೇಡ, ಮನೆಗೆ ಹೋಗು ಎಂದು ನೇರವಾಗಿ ಹೇಳುವ ಪರಿಸ್ಥಿತಿ ಇದೆ. ದುಡಿಮೆಗೆ ಕನಿಷ್ಠ ಕೂಲಿ ಸಿಗಬೇಕು. ಅಂಗನವಾಡಿ, ಬಿಸಿಯೂಟ, ಗ್ರಾಮ ಪಂಚಾಯಿತಿ ಹಾಗೂ ಹಮಾಲಿ, ಬೀಡಿ, ದಿನಗೂಲಿ ಇತ್ಯಾದಿ ಅಸಂಘಟಿತ ಕ್ಷೇತ್ರದಲ್ಲಿ ದುಡಿಯುವವರಿಗೆ ರಕ್ಷಣೆಯ ಭಾಗವಾಗಿ ರಾಜ್ಯ ಸರ್ಕಾರ ವಿಶೇಷವಾದ ಕಾನೂನು ರೂಪಿಸಬೇಕೆಂದು ಹಲವಾರು ಹೋರಾಟಗಳನ್ನು ನಡೆಸಿದರೂ ಸರ್ಕಾರ ಅಸಂಘಟಿತ ಕ್ಷೇತ್ರದ ಕಾರ್ಮಿಕರಿಗೆ ಸಂಬಂಧವಿಲ್ಲ ಎಂಬ ಜಾಣ ಕಿವುಡತನವನ್ನು ತೋರಿಸುತ್ತಿದೆ.

ಯಾವುದೇ ಸೌಲಭ್ಯಗಳನ್ನು ನೀಡದೇ ಖಾಸಗಿ ಮಾಲೀಕರು ದುಡಿಸುತ್ತಾ ಇದುದ್ದು, ಜಾಗತೀಕರಣದ ನೀತಿಗಳ ಪರಿಣಾಮವಾಗಿ ಸರ್ಕಾರಗಳು ಕೂಡಾ ಇಂದು ವಿವಿಧ ಸ್ಕೀಮುಗಳನ್ನು ಜನರನ್ನು ದುಡಿಸುತ್ತಾ ಸುಲಿಗೆ ಮಾಡುತ್ತಿದೆ. ಉದಾ: ಅಂಗನವಾಡಿ ನೌಕರರು 33 ವರ್ಷಗಳಿಂದ ಹೋರಾಟ ನಡೆಸಿದರೂ ಅವರಿಗೆ ಕನಿಷ್ಠ ಕೂಲಿ ಕೊಡದೇ ಸರ್ಕಾರಿ ನೌಕರರು ಎಂದು ಪರಿಗಣಿಸಿಲ್ಲ. ಅಲ್ಲದೇ ಅನೇಕ ನಿರ್ಬಂಧಗಳನ್ನು ಹೇರಲಾಗುತ್ತಿದೆ.

ಬಿಸಿಯೂಟದ ಮಹಿಳೆಯರಿಗೆ ದಿನಕ್ಕೆ 10 ರಿಂದ 22 ರೂ.ಗಳನ್ನು ಕೊಟ್ಟು ದುಡಿಸುತ್ತಿದೆ. ಗ್ರಾಮೀಣ ಪ್ರದೇಶದ ಮಕ್ಕಳಿಗೆ ಬಿಸಿಯೂಟ ಯೋಜನೆ ತಂದಿದ್ದು ನಾನೇ ನಾನೇ ಎಂದು ಕಿತ್ತಾಡುವವರು ಈ ಯೋಜನೆಯಲ್ಲಿ ದುಡಿಯುವ ಮಹಿಳೆಯರ ಕಷ್ಟದ ಬಗ್ಗೆ ಅರಿತಿಲ್ಲ. ಇವರಿಗೆ ಹೆರಿಗೆ ಭತ್ಯೆಯನ್ನು ನಿರಾಕರಿಸಲಾಗುತ್ತಿದೆ. ಪಂಚಾಯಿತಿ ನೌಕರರು, ಸಾಕ್ಷರತಾ ಪ್ರೇರಕರು, ಅರೆಕಾಲಿಕ ಉಪನ್ಯಾಸಕರನ್ನು ಗೌರವಧನದಲ್ಲಿ ದುಡಿಸಲಾಗುತ್ತಿದೆ.

ಇಂತಹ ನೌಕರರ ಹಕ್ಕುಗಳಿಗಾಗಿ ಸಿಪಿಐ(ಎಂ) ಇವರನ್ನು ರಾಜ್ಯಾದ್ಯಂತ ಸಂಘಟಿಸಿ ಹೋರಾಟ ನಡೆಸುತ್ತಿದೆ. ದುಡಿಯುವ ಸ್ಥಳಗಳಲ್ಲಿ ಮಹಿಳೆಯರ ಮೇಲಾಗುವ ದಬ್ಬಾಳಿಕೆ ವಿರುದ್ಧ 1997ರಲ್ಲಿ ಸುಪ್ರೀಂಕೋರ್ಟ್ ನೀಡಿದ ಆದೇಶವನ್ನು -ಕಾಯ್ದೆಯಾಗಿ ತರಬೇಕೆಂದು ಸಿಪಿಐ(ಎಂ) ಹೋರಾಟ ನಡೆಸಿದ್ದಲ್ಲದೆ ದಬ್ಬಾಳಿಕೆಗೆ ಒಳಪಡುವ ಮಹಿಳೆಯರ ರಕ್ಷಣೆಗಾಗಿ ದುಡಿಯುತ್ತಿದೆ. ಇಂದು ದುಡಿಯುವ ಮಹಿಳೆ ದಿನಕ್ಕೊಂದು ಬಾರಿಯಾದರೂ ಲೈಂಗಿಕ ಕಿರುಕುಳ, ದಬ್ಬಾಳಿಕೆಗೆ ಒಳಪಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಒಂದು ನಿಮಿಷಕ್ಕೆ ಒಬ್ಬ ಮಹಿಳೆ ಅತ್ಯಾಚಾರಕ್ಕೊಳಗಾಗುತ್ತಿದ್ದಾಳೆ. 3 ವರ್ಷದಿಂದ 70 ವರ್ಷದ ಮಹಿಳೆಯೂ ಇದರಲ್ಲಿ ಸೇರಿದ್ದಾಳೆ.

ಮಹಿಳೆಯರಲ್ಲಿ ಅಪೌಷ್ಠಿಕತೆ

ಇಂದಿನ ಸಂಕಷ್ಟದ ಆರ್ಥಿಕ ಪರಿಸ್ಥಿತಿಯಿಂದಾಗಿ ಮಹಿಳೆಯರ ಅಪೌಷ್ಠಿಕತೆ ಹೆಚ್ಚುತ್ತಿದೆ. ಇಂದಿಗೂ 100ಕ್ಕೆ 80 ರಷ್ಟು ಮಹಿಳೆಯರು ಕಬ್ಬಿಣಾಂಶದ ಕೊರತೆಯಿಂದ ಬಳಲುತ್ತಿದ್ದು, ಕ್ಯಾನ್ಸರ್, ಅಸ್ತಮಾ, ಗರ್ಭಾಶಯದ ಕಾಯಿಲೆಗಳಿಗೆ ತುತ್ತಾಗಿ ಸಾವಿರಾರು ಮಹಿಳೆಯರು ಸರಿಯಾದ ಆಸ್ಪತ್ರೆ ಸೌಲಭ್ಯವಿಲ್ಲದೆ ಅಕಾಲಿಕ ಮರಣವನ್ನಪ್ಪುತ್ತಿದ್ದಾರೆ. 100ಕ್ಕೆ 70? ಬಡತನವಿರುವ ನಮ್ಮಲ್ಲಿ ಪಡಿತರ ವ್ಯವಸ್ಥೆಯನ್ನು ಬದಲಿಸಿರುವುದರಿಂದ ಹಲವಾರು ಕುಟುಂಬಗಳು ಒಂದು ಹೊತ್ತಿನ ಊಟಕ್ಕೂ ಇಲ್ಲದೇ ಸಾವಿನಿಂದ ಬಳಲುತ್ತಿರುವುದನ್ನು, ನೋಡುತ್ತಿದ್ದೇವೆ. ಆದ್ದರಿಂದ ವೈಜ್ಞಾನಿಕವಾಗಿ ಒಂದು ಕುಟುಂಬಕ್ಕೆ ವಾರ್ಷಿಕ ಆದಾಯದ ಮಿತಿಯನ್ನು ಹೆಚ್ಚಿಸಬೇಕು.

ರಾಜ್ಯದಲ್ಲಿ ಕೃಷಿ ಬಿಕ್ಕಟ್ಟು ಮತ್ತು ಕೆಲಸಕ್ಕೆ ತಕ್ಕ ಸಂಬಳ ಹಾಗೂ ಭದ್ರತೆಯಿಲ್ಲದಿರುವುದರ ಪರಿಣಾಮ ನೇರವಾಗಿ ಕೃಷಿ ಮಹಿಳೆಯರ ಮತ್ತು ಮಕ್ಕಳ ಮೇಲೆ ಹೆಚ್ಚಿನ ಪರಿಣಾಮ ಬೀರುತ್ತದೆ. ಸಿಪಿಐ(ಎಂ) ಪಕ್ಷ ಇದರ ಪರಿಹಾರಕ್ಕಾಗಿ ಸತತವಾಗಿ ಹೋರಾಟಗಳನ್ನು ನಡೆಸುತ್ತಿದೆ. ಇದರ ಭಾಗವಾಗಿ ಇಂದು ಉದ್ಯೋಗ ಖಾತ್ರಿ ಯೋಜನೆಯನ್ನು ಕೇಂದ್ರ ಸರ್ಕಾರದಿಂದ ಜಾರಿ ಮಾಡಲು ಸಾಧ್ಯವಾಗಿದೆ. ಇದರಿಂದ ಉದ್ಯೋಗ ರಹಿತರಿಗೆ ವರ್ಷಕ್ಕೆ 100 ದಿನಗಳ ಕೆಲಸದ ಗ್ಯಾರಂಟಿಯನ್ನು ನೀಡಲಾಗಿದೆ.

ಶೌಚಾಲಯದ ಅವ್ಯವಸ್ಥೆ

ಇಂದಿಗೂ ಗ್ರಾಮಾಂತರ ಪ್ರದೇಶಗಳಲ್ಲಿ ಮತ್ತು ಹೈದ್ರಾಬಾದ್ ಕರ್ನಾಟಕದ ಹೆಚ್ಚಿನ ಪ್ರದೇಶಗಳಲ್ಲಿ ಇಂದಿಗೂ ಮಹಿಳೆಯರು ಬಹಿರ್ದೆಶೆಗೆ ಊರಿನ ಹೊರಗಡೆ ಹೋಗಬೇಕಾದ ಅಮಾನವೀಯ ಪರಿಸ್ಥಿತಿ ಇದೆ. ಇದರಿಂದಾಗಿ ಮಹಿಳೆಯರ ಮೇಲಿನ ಲೈಂಗಿಕ ದಬ್ಬಾಳಿಕೆಗೆ ಕಾರಣವಾಗುತ್ತಿದೆ. ಅಷ್ಟೇ ಅಲ್ಲದೇ ಆರೋಗ್ಯದ ಮೇಲೂ ದುಷ್ಪರಿಣಾಮ ಬೀರುತ್ತಿದೆ. ಹಳ್ಳಿಗಳ ಅಭಿವೃದ್ಧಿಗಾಗಿ ಜನತೆಯ ಮೂಲಭೂತ ಸಮಸ್ಯೆಗಳಿಗೆ ಹೆಚ್ಚಿನ ಒತ್ತು ನೀಡಿಲ್ಲ. ನೀಡಿದ್ದರೂ ಅದು ನಿಜವಾದ ಫಲಾನುಭವಿಗಳಿಗೆ ದಕ್ಕುತ್ತಿಲ್ಲ.

ಸ್ತ್ರೀ ಶಕ್ತಿ-ಸ್ವಸಹಾಯ ಸಂಘಗಳು

ಮಹಿಳಾ ಸಬಲೀಕರಣದ ಭಾಗವಾಗಿ ಮಹಿಳೆಯರ ಸ್ವಂತ ಉಳಿತಾಯದ ಆಧಾರದಲ್ಲಿ ಗುಂಪುಗಳನ್ನು ರಚಿಸಿ, ಹಲವಾರು ಸೌಲಭ್ಯಗಳನ್ನು ನೀಡುತ್ತಿವೆ ಎಂಬುದನ್ನು ಹೇಳಿದೆ. ರಾಜ್ಯದಲ್ಲೀಗ 1.20 ಸಾವಿರ ಗುಂಪುಗಳು ಸ್ತ್ರೀ-ಶಕ್ತಿಯಡಿಯಲ್ಲಿ 16 ಲಕ್ಷ ಮಹಿಳೆಯರು ಸಂಘಟಿತರಾಗಿದ್ದಾರೆ. ಇವರಿಗೆ ಸರ್ಕಾರಿ ಸೌಲಭ್ಯಗಳನ್ನು ಪಡೆದುಕೊಳ್ಳಲು ಹಲವಾರು ನಿರ್ಬಂಧನೆಗಳನ್ನು ವಿಧಿಸಿದ್ದಾರೆ. ಅನಕ್ಷರಸ್ಥ ಮಹಿಳೆಯರೇ ಈ ಗುಂಪುಗಳಲ್ಲಿ ಹೆಚ್ಚಿರುವುದರಿಂದ ಇವರ ನಿರ್ಬಂಧನೆಗಳನ್ನು ಪಾಲಿಸಲು ಸಾಧ್ಯವಾಗದೇ ಬ್ಯಾಂಕುಗಳಿಂದ ಲೋನ್‌ಗಳನ್ನು ಪಡೆಯುವಲ್ಲಿ ವಿಫಲರಾಗುತ್ತಿದ್ದಾರೆ. ಇವರ ಉಳಿತಾಯವೇ 2007 ರಲ್ಲಿ 444 ಕೋಟಿ ಇದೆ. ಸರ್ಕಾರ ಕೊಟ್ಟಿರುವುದು ಕೇವಲ 70 ಕೋಟಿ. ಗುಂಪುಗಳಿಗೆ ಸರ್ಕಾರಿ ಸೌಲಭ್ಯಗಳನ್ನು ಕೊಡುವಾಗ ತಾರತಮ್ಯ ಮಾಡಲಾಗುತ್ತಿದೆ. ಆದ್ದರಿಂದ ಈ ಗುಂಪುಗಳಿಗೆ ಏನೇ ಕೊಟ್ಟರೂ ಸಮನಾಗಿ ಕೊಡಬೇಕು. ನಿರ್ಬಂಧನೆಗಳನ್ನು ಸಡಿಲಗೊಳಿಸಬೇಕು. ಎಲ್ಲ ಗುಂಪುಗಳಿಗೂ ಬಡ್ಡಿ ರಹಿತ ಲೋನ್ ಮತ್ತು ಸಬ್ಸಿಡಿ ಲೋನ್‌ಗಳನ್ನು ಕೊಡಬೇಕು. ಈ ಗುಂಪುಗಳಿಗೆ ಉದ್ಯೋಗ ತರಬೇತಿ ನೀಡಿ, ಮಾರುಕಟ್ಟೆ ಒದಗಿಸಬೇಕು. ಈ ಗುಂಪುಗಳು ಕೇವಲ ಆರ್ಥಿಕ ವ್ಯವಹಾರಕ್ಕೆ ಸೀಮಿತ ಮಾಡದೇ ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿಸುವ ಕಾರ್ಯಕ್ರಮಗಳನ್ನು ರೂಪಿಸಬೇಕು.

ಕುಗ್ಗುತ್ತಿರುವ ಮಹಿಳಾ ಜನಸಂಖ್ಯೆ

ಮಹಿಳೆಯರ ಮೇಲೆ ನಡೆಯುತ್ತಿರುವ ಸಾಮಾಜಿಕ ದಬ್ಬಾಳಿಕೆಗಳು-ಅದರಲ್ಲೂ ಪ್ರಮುಖವಾಗಿ ವರದಕ್ಷಿಣೆ ಮತ್ತು ಕೌಟುಂಬಿಕ ಹಿಂಸೆಗಳಿಂದ ನಡೆಯುತ್ತಿವೆ. ಹೆಣ್ಣು ಮಗು ಎಂದು ಗೊತ್ತಾದ ಕೂಡಲೇ ಗರ್ಭಪಾತ, ಪೌಷ್ಠಿಕ ಆಹಾರವಿಲ್ಲದೆ, ಆರೋಗ್ಯ ಹಾರೈಕೆಯಿಲ್ಲದದೇ ಗರ್ಭಿಣಿ-ಬಾಣಂತಿಯರ ಸಾವು ಹಾಗೂ ಅಕಾಲಿಕ ಸಾವುಗಳು ಹೆಚ್ಚಾಗುತ್ತಿರುವ ಕಾರಣಕ್ಕಾಗಿ 1000 ಪುರುಷರಿಗೆ 924 ಮಹಿಳೆಯರು ಇದ್ದು ಇದು ಆಘಾತಕಾರಿ ಸುದ್ದಿ.

ಇಂತಹ ಮೂಲಭೂತ ಸಮಸ್ಯೆಗಳ ಪರಿಹಾರಕ್ಕಾಗಿ ಸರ್ಕಾರಗಳು ಶ್ರಮಿಸುವುದು ಬಿಟ್ಟು, ಇಂದು ಮಹಿಳೆಯರ ಭಾವನೆಗಳನ್ನು ಕಡೆಗಣಿಸಲಾಗುತ್ತಿದೆ. ಧಾರ್ಮಿಕ ಮನೋಭಾವನೆಯನ್ನು ಬಳಸಿಕೊಂಡು ಅಂಧಕಾರಕ್ಕೆ ದೂಡುವ ಕೋಮುವಾದಿಗಳ ಪ್ರಯತ್ನ ನಿರಂತರವಾಗಿ ಸಾಗುತ್ತಿದೆ. ಮಹಿಳೆಯರನ್ನು ದೇವರೆಂದೂ ಹೇಳುತ್ತಲೇ, ಆಕೆಯನ್ನು ನಾಗರೀಕತೆಯಿಂದ ಸಮಾಜದ ಪ್ರಧಾನವಾಹಿನಿಯಿಂದ ದೂರವಿಡುವ ಪ್ರಯತ್ನ ಮಾಡುತ್ತಿರುವ ಕೋಮುವಾದಿ ಬಣ್ಣ ಬಯಲುಗೊಳಿಸಬೇಕಿದೆ.

ಇಂದು ರಾಜಕೀಯವೆಂದರೆ ವ್ಯಾಪಾರ ಎಂಬ ವ್ಯಾಖ್ಯಾನವನ್ನು ಮತದಾರರು ಬದಲಿಸದೇ ಇದ್ದರೆ ಪ್ರಜಾಸತ್ತಾತ್ಮಕವಾದ ಈ ಪ್ರಕ್ರಿಯೆ ಅಪಾಯಕ್ಕೀಡಾಗುವ ಸಂದರ್ಭಗಳು ಬರಬಹುದು. ರಾಜ್ಯದ ಮತ್ತು ದೇಶದ ಅಭಿವೃದ್ಧಿಗೆ ಪೂರಕವಾಗಿ ರೈತ-ಕಾರ್ಮಿಕರ ಮೂಲಭೂತ ಸಮಸ್ಯೆಗಳ ನಿವಾರಣೆಗಾಗಿ ಹೋರಾಟ ಮಾಡುತ್ತಿರುವ ಸಿಪಿಐ(ಎಂ)ಪಕ್ಷವನ್ನು ಬೆಂಬಲಿಸಬೇಕೆಂದೂ ಈ ಮುಖಾಂತರ ಮನವಿ ಮಾಡುತ್ತೇವೆ.

ಜಗತ್ತಿನ ಪ್ರಥಮ ಶೋಷಿತೆಯಾಗಿರುವ ಮಹಿಳೆಯ ವಿಮೋಚನೆಗಾಗಿ, ಸಮಾನತೆ ಪ್ರಗತಿಗಾಗಿ, ಸಿಪಿಐ(ಎಂ) ಹೋರಾಡುತ್ತಿದೆ. ರಾಜಕೀಯ ಕ್ಷೇತ್ರದಲ್ಲಿಯೂ ಶಾಸನಸಭೆಗಳಲ್ಲಿ ಶೇ.33 ರಷ್ಟು ಸ್ಥಾನ ಮೀಸಲಾತಿಯ ಮಸೂದೆ ಇನ್ನೆಷ್ಟೂ ವಿಳಂಬವಿಲ್ಲದೇ ಜಾರಿಗೊಳಿಸಬೇಕೆಂದು ಹೋರಾಡುತ್ತದೆ. ಮಹಿಳೆಯರ ಮೇಲಿನ ದೌರ್ಜನ್ಯಗಳ ವಿರುದ್ಧ ದುಡಿಯುವ ಮಹಿಳೆಯರ ಸತತವಾಗಿ ಪ್ರಬಲವಾದ ಆಂದೋಲನವನ್ನು ನಡೆಸುತ್ತಿದೆ. ಈ ಹೋರಾಟವನ್ನು ಬಲಗೊಳಿಸಬೇಕಾಗಿದೆ.

ಈ ಚುನಾವಣೆಯು ಹಿಂದಿನಂತಲ್ಲ, ಇಡೀ ರಾಜ್ಯವನ್ನೇ ಕಬಳಿಸಲು ಕೋಮುವಾದಿ ಶಕ್ತಿಗಳು ಹಲವು ಪ್ರಯತ್ನ ನಡೆಸಿವೆ. ರಾಜ್ಯದ ಅಧಿಕಾರ ಇಂತಹ ಜನವಿಭಜಕ ಕೋಮುವಾದಿಗಳಿಗೆ ಸಿಕ್ಕರೆ ಐಕ್ಯತೆ, ಸಮಗ್ರತೆಗೆ ಮತ್ತು ಪ್ರಗತಿಗೆ ಅಪಾಯಕಾರಿಯಾಗುತ್ತದೆ. ಆದ್ದರಿಂದ ಪ್ರಜಾಸತ್ತಾತ್ಮಕ ದೇಶದ ಐಕ್ಯತೆಗೆ ಧಕ್ಕೆ ತರುವ ಕೋಮುವಾದಿ ಶಕ್ತಿಗಳನ್ನು ಸೋಲಿಸಿ ಜಾತ್ಯಾತೀತ ಶಕ್ತಿಗಳನ್ನು ಬೆಂಬಲಿಸಿ, ಈ ವಿಧಾನಸಭಾ ಚುನಾವಣೆಯಲ್ಲಿ ಸಿಪಿಐ(ಎಂ) ಪಕ್ಷವು 9 ಸ್ಥಾನಗಳಿಗಾಗಿ ಸ್ಪರ್ಧಿಸಿದೆ. ಮುಂದಿನ 2 ಹಂತದಲ್ಲಿ ಮಂಗಳೂರು ದಕ್ಷಿಣ, ಮಂಗಳೂರು, ಬೈಂದೂರು, ಗುಲಬರ್ಗಾ ಗ್ರಾಮಾಂತರ ಕ್ಷೇತ್ರಗಳಲ್ಲಿ ಸಿಪಿಐ(ಎಂ)ಗೆ ಮತ ನೀಡಿ ದುಡಿಯುವ ವರ್ಗದ, ನ್ಯಾಯ ಸಮಾನತೆಯ ಧ್ವನಿಯನ್ನು ವಿಧಾನಸಭೆಯಲ್ಲಿ ಮೊಳಗುವಂತೆ, ಪ್ರತಿನಿಧಿಗಳನ್ನು ಆರಿಸಬೇಕಾಗಿದೆ. ○

ಸಿಪಿಐ(ಎಂ) ಅಭ್ಯರ್ಥಿಗಳನ್ನು ಗೆಲ್ಲಿಸಲು ಮತದಾರರಲ್ಲಿ ಮನವಿ - ಜಿ.ವಿ.ಶ್ರೀರಾಮರೆಡ್ಡಿ

ದಿನಾಂಕ:12.05.2008ರಂದು ಕಂಡ್ಲೂರಿನಲ್ಲಿ ಸಿಪಿಐ(ಎಂ) ಅಭ್ಯರ್ಥಿ ಪರವಾಗಿ ಪ್ರಚಾರ ಸಭೆಯನ್ನುದ್ದೇಶಿಸಿ ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿಯ ಸದಸ್ಯ ಹಾಗೂ ಮಾಜಿಕ ಶಾಸಕರಾದ ಶ್ರೀಯುತ ಜಿ.ವಿ.ಶ್ರೀರಾಮರೆಡ್ಡಿಯವರು ಭಾಷಣ ಮಾಡಿ, ಈ ಬಾರಿ ಸುಮಾರು ಒಂದು ವರ್ಷ ಮೊದಲೇ ರಾಜ್ಯ ವಿಧಾನಸಭೆಗೆ ಚುನಾವಣೆ ನಡೆಸಲು ಕಾಂಗ್ರೆಸ್, ಬಿಜೆಪಿ ಮತ್ತು ಜೆಡಿ(ಎಸ್) ಪಕ್ಷಗಳೇ ಕಾರಣ. 5 ವರ್ಷ ಅವಧಿಗಾಗಿ ಆಯ್ಕೆಯಾಗಿದ್ದ ಹಿಂದಿನ ವಿಧಾನಸಭೆ ತನ್ನ ಅವಧಿ ಪೂರ್ಣ ಆಡಳಿತ ನಡೆಸಲು ವಿಫಲವಾಯಿತು. ಈ ವಿಫಲತೆಗೆ ಆಡಳಿತ ನಡೆಸುತ್ತಿದ್ದ ಮೂರು ಪಕ್ಷಗಳ ಅಧಿಕಾರದಾಹ ಮತ್ತು ಕೀಳು ಮಟ್ಟದ ಸಂದರ್ಭ ಸಾಧಕತನವೇ ಕಾರಣವಾಗಿದೆ. ಜನರ ಬದುಕಿನೊಂದಿಗೆ ಚೆಲ್ಲಾಟ ಆಡುವ ಈ ಪಕ್ಷಗಳು ಈಗ ಮತ್ತೆ ಮತದಾರರ ಬಳಿಗೆ ಬಂದು ಓಟು ಕೇಳುತ್ತಿವೆ. ಅಧಿಕಾರದಲ್ಲಿದ್ದಾಗ ನೆನಪಾಗದ ಎಲ್ಲಾ ಜನಹಿತ ಕಾರ್ಯಗಳು ಈಗ ಅವುಗಳಿಗೆ ನೆನಪಾಗಲಾರಂಭಿಸಿದೆ. ಈಗ ಅವುಗಳನ್ನು ಭರವಸೆಗಳಾಗಿ ಮತದಾರರ ಮುಂದಿಟ್ಟು ಜೊತೆಯಲ್ಲಿ ಹಣ, ಹೆಂಡ, ಸೀರೆ, ರವಿಕೆ ಮೊದಲಾದ ಆಮಿಷಗಳನ್ನೊಡ್ಡಿ ಅವರ ಮತಗಳನ್ನು ಅಪಹರಿಸಲು ಹುನ್ನಾರ ನಡೆಸುತ್ತಿವೆ.

ಅಧಿಕಾರದಲ್ಲಿದ್ದಾಗ ಇವರು ಬಡವರಿಗೆ ಕನಿಷ್ಟ ರೇಷನ್ ವ್ಯವಸ್ಥೆಯನ್ನು ಒದಗಿಸಲಿಲ್ಲ. ರೇಷನ್ ಕಾರ್ಡ್ ಹಂಚಲಾಗದವರು ರಾಜ್ಯ ಆಡಳಿತ ನಡೆಸುತ್ತಾರೋ? ಎಂದು ಹೇಳಿ ಕ್ಷೇತ್ರದ ಹಾಗೂ ಜನರ ಅಭಿವೃದ್ಧಿ ಕೆಲಸ ಬಂಡವಾಳಶಾಹಿ ಪಕ್ಷಗಳು ಮಾಡುವುದಿಲ್ಲ ಎಂದು ವಿವರಿಸಿದರು.

ಆದ್ದರಿಂದ ಮತದಾರ ಬಾಂಧವರು ಈ ಬಾರಿ ತಮ್ಮ ಅಮೂಲ್ಯವಾದ ಮತಗಳನ್ನು ಬೈಂದೂರು ಕ್ಷೇತ್ರದಲ್ಲಿನ ಸಿಪಿಐ(ಎಂ) ಪಕ್ಷದ ಅಭ್ಯರ್ಥಿ ದಾಸ ಭಂಡಾರಿ ಅವರಿಗೆ ನೀಡಿ ಬಹುಮತದಿಂದ ಗೆಲ್ಲಿಸಿ, ಕ್ಷೇತ್ರ ಅಭಿವೃದ್ಧಿಗೆ ಹಾಗೂ ಜನ ಸಾಮಾನ್ಯರ ಸಂಘಟನೆ ಮತ್ತು ಹೋರಾಟವನ್ನು ಬಲಪಡಿಸುವಂತೆ ಮನವಿ ಮಾಡಿಕೊಂಡರು.

ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿಯ ಸದಸ್ಯರಾದ ನಿತ್ಯಾನಂದಸ್ವಾಮಿಯವರು ಸಭೆಯಲ್ಲಿ ಮಾತನಾಡಿ ಜನ ಸಾಮಾನ್ಯರ ಬದುಕಿನ ಬಗ್ಗೆ ಅಪಾರ ಕಾಳಜಿ ಇರುವ, ಸರಳ, ಸಜ್ಜನಿಕೆಯ ಮುಖಂಡರಾದ ದಾಸ ಭಂಡಾರಿಯವರನ್ನು ಮತದಾರರು ಗೆಲ್ಲಿಸಿ, ಬೈಂದೂರು ಕ್ಷೇತ್ರದ ಎಲ್ಲಾ ವಿಭಾಗದ ಜನರ ಬೇಡಿಕೆಗಳ ಕುರಿತು ವಿಧಾನಸಭೆಯೊಳಗೆ ಎತ್ತಿ ಪರಿಹಾರವನ್ನು ಕಂಡುಕೊಳ್ಳಲು ಸಾಧ್ಯವಾಗಬೇಕೆಂದು ವಿವರಿಸಿದರು.

ಸಾರ್ವಜನಿಕ ಸಭೆಯ ಅಧ್ಯಕ್ಷತೆ ವಹಿಸಿದ ಪಕ್ಷದ ಜಿಲ್ಲಾ ಕಾರ್ಯದರ್ಶಿಯವರಾದ ಕೆ.ಶಂಕರ್ ಮತ್ತು ಅಭ್ಯರ್ಥಿ ದಾಸ ಭಂಡಾರಿಯವರು ಮಾತನಾಡಿದರು. ವೇದಿಕೆಯಲ್ಲಿ ಪಕ್ಷದ ಮುಖಂಡರಾದ ಬಾಲಕೃಷ್ಣ ಶೆಟ್ಟಿ, ಮಹಾಬಲ ವಡೇರಹೋಬಳಿ, ಎ.ಎಸ್. ಆಚಾರ್ಯ ಮತ್ತು ಚಂದ್ರಶೇಖರ ಇವರು ಉಪಸ್ಥಿತರಿದ್ದರು.

ಅಂಪಾರ್‌ನಲ್ಲಿಯೂ ಸಭೆ

ಅಂಪಾರ್‌ನಲ್ಲಿ ನಡೆದ ಸಭೆಯನ್ನುದ್ದೇಶಿಸಿ ಜಿ.ವಿ.ಶ್ರೀರಾಮರೆಡ್ಡಿಯವರು ಮಾತನಾಡಿ, 5 ವರ್ಷದ ಅವಧಿಗಾಗಿ ಆಯ್ಕೆಯಾಗಿದ್ದ ಹಿಂದಿನ ವಿಧಾನಸಭೆ ತನ್ನ ಅವಧಿ ಪೂರ್ಣ ಆಡಳಿತ ನಡೆಸಲು ವಿಫಲವಾಯಿತು. ಈ ವಿಫಲತೆಗೆ ಆಡಳಿತ ನಡೆಸುತ್ತಿದ್ದ ಕಾಂಗ್ರೆಸ್, ಬಿಜೆಪಿ ಮತ್ತು ಜೆಡಿ(ಎಸ್) ಪಕ್ಷಗಳೇ ಕಾರಣವೆಂದರು. ಅಧಿಕಾರದಾಹ ಮತ್ತು ಕೀಳು ಮಟ್ಟದ ಸಂದರ್ಭ ಸಾಧಕತವೇ ಕಾರಣವಾಯಿತು.

ಬಿಜೆಪಿ ಅಧಿಕಾರದಲ್ಲಿ ಪಾಲ್ಗೊಂಡಿದ್ದ ಈ ಅವಧಿಯಲ್ಲಿ ಕೋಮುಗಲಭೆಗಳು ಹೆಚ್ಚಾದವು. ಅಲ್ಪಸಂಖ್ಯಾತ ಮುಸಲ್ಮಾನರ ಮೇಲೆ, ಕ್ರೈಸ್ತರ ಮೇಲೆ ದಾಳಿ, ದೌರ್ಜನ್ಯಗಳು ಹೆಚ್ಚಾದವು. ಜನರ ನೆಮ್ಮದಿಗೆ ಭಂಗ ಉಂಟಾಯಿತು.

ಅಧಿಕಾರದಲ್ಲಿದ್ದಾಗ ಇವರು ಬಡವರಿಗೆ ಕನಿಷ್ಟ ರೇಷನ್ ವ್ಯವಸ್ಥೆಯನ್ನು ಒದಗಿಸಲಿಲ್ಲ. ರೈತರ ಸಂಕಷ್ಟಗಳನ್ನು ಬಗೆಹರಿಸಲಿಲ್ಲ. ವಸತಿ, ಉದ್ಯೋಗ, ಶಿಕ್ಷಣ, ಆರೋಗ್ಯ ಮೊದಲಾದ ಮೂಲಭೂತ ಸಮಸ್ಯೆಗಳನ್ನು ಇತ್ಯರ್ಥಪಡಿಸಲಿಲ್ಲ. ಬದಲಾಗಿ ಎಲ್ಲಾ ಕಡೆ ಭ್ರಷ್ಟಾಚಾರ ಹೆಡೆ ಎತ್ತುವಂತಾಯಿತು. ಅಕ್ರಮ ಗಣಿ ಹಣದ ಪಾಲಿಗಾಗಿ ಕಿತ್ತಾಟ ನಡೆಯಿತು. ಆಡಳಿತದಲ್ಲಿ ಭೂ ಮಾಫಿಯಾಗಳ ಹಿಡಿತ ಗಟ್ಟಿಯಾಯಿತು. ಜನರ ಕಣ್ಣಿಗೆ ಮಣ್ಣೆರಚಲು ಜನರನ್ನು ಮರಳುಗೊಳಿಸುವ ಕೆಲವು ಕಾರ್ಯಕ್ರಮಗಳನ್ನು ಮಾತ್ರ ತರಲಾಯಿತು.

ಸಿಪಿಐ(ಎಂ) ಪಕ್ಷವು ರೈತರ, ಕಾರ್ಮಿಕರ ಹಕ್ಕುಗಳಿಗಾಗಿ ಹೋರಾಡುವ ಪಕ್ಷವಾಗಿದೆ. ಎಲ್ಲ ವಿಧದ ಜಾತಿ ತಾರತಮ್ಯ ಹಾಗೂ ಕೋಮುದ್ವೇಷವನ್ನು ತಡೆಗಟ್ಟಲು ಅದು ಬದ್ಧವಾಗಿದೆ ಎಂದು ವಿವರಿಸಿದರು. ಜನಸಾಮಾನ್ಯರ ಹಾಗೂ ದುಡಿಯುವ ಜನರ ಪರವಾಗಿ ಸಂಘಟನೆ ಮತ್ತು ಹೋರಾಟವನ್ನು ನಿರಂತರ ಮಾಡಿಕೊಂಡು ಬಂದಂತಹ ಪಕ್ಷದ ಅಭ್ಯರ್ಥಿ ದಾಸ ಭಂಡಾರಿಯವರನ್ನು ಗೆಲ್ಲಿಸಬೇಕೆಂದು ಮತದಾರರಲ್ಲಿ ಮನವಿ ಮಾಡಿಕೊಂಡರು.

ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿಯ ಸದಸ್ಯರಾದ ನಿತ್ಯಾನಂದ ಸ್ವಾಮಿ ಮತ್ತು ರಾಜ್ಯ ಸಮಿತಿ ಸದಸ್ಯರಾದ ಬಾಲಕೃಷ್ಣಶೆಟ್ಟಿಯವರು ಮಾತನಾಡಿ, ದಾಸ ಭಂಡಾರಿಯವರು ಸುದೀರ್ಘ ಕಾಲದಿಂದ ಜನಪರ ಚಳುವಳಿಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದು, ಕ್ಷೇತ್ರದ ಯಾವುದೇ ಅಭ್ಯರ್ಥಿಗಿಂತಲೂ ಭಿನ್ನವಾಗಿ ಗೆಲುವಿಗೆ ಅರ್ಹವಾದ ಅಭ್ಯರ್ಥಿಯಾಗಿದ್ದಾರೆ ಎಂದು ವಿವರಿಸಿದರು ದುಡಿಯುವ ಕಾರ್ಮಿಕರ, ರೈತರ ಮತ್ತು ಕೃಷಿಕರ ಪ್ರಶ್ನೆಗಳನ್ನು ವಿಧಾನಸಭೆಯೊಳಗೆ ಎತ್ತಿ ಪರಿಹಾರವನ್ನು ಕಂಡುಕೊಳ್ಳಲು ಸಾಧ್ಯವಾಗುವಂತೆ ಬಹುಮತದಿಂದ ಅವರನ್ನು ಗೆಲ್ಲಿಸಬೇಕೆಂದು ವಿನಂತಿ ಮಾಡಿಕೊಂಡರು. ಅಭ್ಯರ್ಥಿಯಾದ ದಾಸ ಭಂಡಾರಿಯವರು ಸಭೆಯಲ್ಲಿ ಮಾತನಾಡಿದರು.

ಸಿಪಿಐ(ಎಂ) ಉಡುಪಿ ಜಿಲ್ಲಾ ಕಾರ್ಯದರ್ಶಿಯವರಾದ ಕೆ.ಶಂಕರ್, ಜಿಲ್ಲಾ ಸಮಿತಿಯ ಸದಸ್ಯರಾದ ಎ.ಎಸ್. ಆಚಾರ್ಯ, ಮಹಾಬಲ ವಡೇರಹೋಬಳಿ ಮತ್ತು ಚಂದ್ರಶೇಖರ್‌ರವರು ಉಪಸ್ಥಿತರಿದ್ದರು.

ಎಲ್ಲರಂತಹುದಲ್ಲವೋ ಅಣ್ಣ ಈ ಸಭೆ

ಅದೊಂದು ಬಹಿರಂಗ ಸಭೆ. ಕೆ.ಆರ್.ಪುರಂ ನಿಲ್ದಾಣದ ಸಮೀಪ ಮುಖ್ಯರಸ್ತೆಯ ಬದಿಯಲ್ಲಿ ವೇದಿಕೆ. ಕಾಂಗ್ರೆಸ್, ಬಿಜೆಪಿ, ಜೆಡಿ(ಎಸ್) ಸಭೆಗಳಲ್ಲಿ ಏಳಬಹುದಾದ ಧೂಳು, ಧಾಂ ಧೂಂ ಅಲ್ಲಿಲ್ಲ. ಹಾಕಿರುವ ಕುರ್ಚಿಗಳಲ್ಲಿ ಜನರು ಬಹುತೇಕ ಕಾರ್ಮಿಕರು, ದುಡಿಯುವ ವರ್ಗದ ಜನ ಕುಳಿತಿದ್ದಾರೆ. ಕುರ್ಚಿ ಸಿಗದವರು. ಅಕ್ಕಪಕ್ಕ ಅಂಗಡಿಗಳ ಮುಂದಿನ ಕಟ್ಟೆಗಳ ಮೇಲೆ ಕುಳಿತಿದ್ದಾರೆ. ಹಲವರು ನಿಂತಿದ್ದಾರೆ. ಅವರೆಲ್ಲಾ ಭಾಷಣಕಾರರ ಮಾತಿಗೆ ಕಿವಿಗೊಟ್ಟಿದ್ದಾರೆ.



ಒಂದು ಕಂಚಿನ ಕಂಠ, ಮಹಿಳೆಯ ಕಂಠ ಸಭಿಕರ ಹಾಗೂ ದಾರಿ ಹೋಕರ ಗಮನ ಸೆಳೆಯುತ್ತಿದೆ. ಹೌದು. ಅವರು ಬೃಂದಾಕಾರಟ್. ಸಿಪಿಐ(ಎಂ) ಪಕ್ಷದ ಪಾಲಿಟ್ ಬ್ಯೂರೋ ಸದಸ್ಯರು. ಕೆ.ಆರ್.ಪುರಂ ಕ್ಷೇತ್ರದ ಸಿಪಿಐ(ಎಂ) ಅಭ್ಯರ್ಥಿ ಕಾಂ:ಗೌರಮ್ಮ ಅವರ ಪರವಾಗಿ ಮತ ಕೇಳಿ ಮಾತನಾಡುತ್ತಿದ್ದಾರೆ. ಅಂಥ ಬಾರಿ ದೊಡ್ಡ ಸಭೆಯೇನಲ್ಲ. ಆದರೆ ಅರ್ಥಪೂರ್ಣವಾದ ಸಭೆ ಅದು.

ಮುಖಂಡರಿಗೆ ಹಾರಹಾಕಲು ವೇದಿಕೆಗೆ ನುಗ್ಗುವವರಿಲ್ಲ. ವೇದಿಕೆಯನ್ನೇರಲು ಪೈಪೋಟಿ ಏನಿಲ್ಲ. ಈಗ ಅಗತ್ಯವಾಗಿ ಬರೆಯಬೇಕಾಗಿದೆ. ಏಕೆಂದರೆ ಅಲ್ಲಿ ನೋಡಿ, ಕರ್ನಾಟಕ ರಾಜಕಾರಣದ ತೊರೆಯೊಳಗಿನ ಸುಳಿಯಾಗಿರುವ ಬಳ್ಳಾರಿಯಲ್ಲಿ ಏನು ನಡೆದಿದೆ. ಕಡಲೆ ಪುರಿಯಂತೆ ದುಡ್ಡು ಎರಚುವ ಪುರಿಯಾಳುಗಳು . ಕೈ ಎತ್ತುವವರು, ಮತ್ತೊಂದು ಪಕ್ಷದ ಕಾರ್ಯಕರ್ತರ ಮೇಲೆ ಹಲ್ಲೆ ಮಾಡುವವರು ಇಲ್ಲಿನ ಮುಖಂಡರುಗಳು.

ಸ್ವತಃ ತಾನೇ ತನ್ನ ಕೈಯಾರೆ ಕಾಂಗ್ರೆಸ್ ಕಾರ್ಯಕರ್ತರ ಮೇಲೆ ಹಲ್ಲೆ ಮಾಡಿ ಓಡಿ ಹೋಗಿ ನಿರೀಕ್ಷಣಾ ಜಾಮೀನು ಪಡೆದುಕೊಂಡು ಬರುವ ಮಾಜಿ ಮಂತ್ರಿ, ಬಿಜೆಪಿ ಮುಖಂಡ ಶ್ರೀರಾಮುಲು ಒಂದು ಕಡೆ. ಈ ಪ್ರಕರಣದಲ್ಲಿ ಅಪರಾಧಿಯಾಗಿ ಪೋಲಿಸರಿಂದ ಬಂಧನಕ್ಕೆ ಗುರಿಯಾಗಿ ನಿಂತಿರುವ ಮಾಜಿ ವಿಧಾನ ಸಭಾ ಸದಸ್ಯ ಜರ್ನಾಧನರೆಡ್ಡಿ. ಇವರೆಲ್ಲಾ ರಾಜ್ಯವನ್ನು ಆಳ ಬಯಸುವ ರಾಜಕಾರಣಿಗಳು.

ಇಲ್ಲಿಯೂ ಒಬ್ಬ ಅಭ್ಯರ್ಥಿ ಇದ್ದಾರೆ. ಅವರು ಬೆಂಗಳೂರಿನ ಗಾರ್ಮೆಂಟ್ಸ್ ಒಂದರಲ್ಲಿ ಕಾರ್ಮಿಕರಾಗಿ ದುಡಿಯುತ್ತಿದ್ದು, ಮಾಲೀಕರ ದೌರ್ಜನ್ಯ ಶೋಷಣೆ ವಿರುದ್ಧ ಕಾರ್ಮಿಕರನ್ನು ಸಂಘಟಿಸಲು ಹೋದಾಗ ಕೆಲಸ ಕಳೆದುಕೊಂಡವರು. ಕೆಲಸ ಹೋಯ್ತೆಂದು ಸುಮ್ಮನೆ ಕೂರಲಿಲ್ಲ. ಜನರನ್ನು ಸಂಘಟಿಸಿ ಜನಪರ ಹೋರಾಟ ನಡೆಸುವುದು ಪೂರ್ಣಾವಧಿ ಕೆಲಸವಾಯಿತು. ಅಂದರೆ ಗೌರಮ್ಮ ಸಿಪಿಐ(ಎಂ) ಪಕ್ಷದ ಪೂರ್ಣಾವಧಿ ಕಾರ್ಯಕರ್ತೆಯಾದರು.



....ನೋಡಿ ನಮ್ಮ ಅಭ್ಯರ್ಥಿ ದಿನನಿತ್ಯ ಕಾರ್ಮಿಕರು, ಮಹಿಳೆಯ ಜನರ ಸಲುವಾಗಿ ಹೋರಾಟ ನಡೆಸುವ ಪೂರ್ಣಾವಧಿ ಕಾರ್ಯಕರ್ತರು. ಅದೇ ನಮಗೆ ಹೆಮ್ಮೆ... ಬೃಂದಾ ಅಭ್ಯರ್ಥಿಯನ್ನು, ಜೊತೆಗೆ ಸಿಪಿಐ(ಂಎ)ನ ಭಿನ್ನ ರಾಜಕೀಯವನ್ನು ಪರಿಚಯಿಸುತ್ತಿದ್ದರು. ತಮ್ಮದು ಭಿನ್ನ ರಾಜಕೀಯ ಎನ್ನುವ ಬಿಜೆಪಿಯಲ್ಲಿ ಇಂತಹ ಅಭ್ಯರ್ಥಿಗಳು ಎಷ್ಟಿದ್ದಾರೆ.

ಕೆ.ಆರ್.ಪುರಂ ಎಂಬುದು ಕಾರ್ಮಿಕ ವರ್ಗದ ಕ್ಷೇತ್ರ. ಸಾರ್ವಜನಿಕ ಹಾಗೂ ಖಾಸಗಿ ಕ್ಷೇತ್ರದ ಕೈಗಾರಿಕೆಗಳು ದೊಡ್ಡ ಸಂಖ್ಯೆಯಲ್ಲಿ ಇವೆ. ಕಾರ್ಮಿಕರು ದೊಡ್ಡ ಸಂಖ್ಯೆಯಲ್ಲಿ ಹಿಂದೆ ಒಮ್ಮೆ ಕಾರ್ಮಿಕ ಮುಖಂಡ ಎಸ್.ಸೂರ್ಯನಾರಾಯಣ ರಾವ್ ಅವರನ್ನು ಗೆಲ್ಲಿಸಿದ್ದ ಕ್ಷೇತ್ರ ಇದು. ... ಬಿಜೆಪಿ ಸರ್ಕಾರ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದಾಗ ಸಾರ್ವಜನಿಕ ಉದ್ದಿಮೆಗಳ ಷೇರು ಬಂಡವಾಳ ವಾಪಸ್ಸು ತೆಗೆಯಲು ಒಬ್ಬ ಸಚಿವರನ್ನು ನೇಮಿಸಿತ್ತು. ಸರ್ಕಾರಿ ಕಂಪನಿಗಳನ್ನು ಮೂರು ಕಾಸಿಗೆ ಮಾರಲು ಹೊರಟ್ಟಿದ್ದು, ಹೀಗೆ ಬೃಂದಾ ಸ್ಪರ್ಧೆಯಲ್ಲಿರುವ ವಿವಿಧ ಪಕ್ಷಗಳ ಇತಿಹಾಸವನ್ನು ಜಾಲಾಡಿದರು. ಬಂದಾ ಹೋರಾಟದ ಮೂಲಕ ಅಂತಹ ಸಚಿವ ಖಾತೆಯನ್ನು ಕಿತ್ತು ಹಾಕಿದ ಹೆಮ್ಮೆ ಸಿಪಿಐ(ಎಂ)ನದ್ದು ಬೃಂದಾ ವಿವರಿಸಿದರು. ಮಧ್ಯಪ್ರದೇಶ ಛತ್ತಿಸ್‌ಗಡ, ಜಾರ್ಖಂಡ್, ಗುಜರಾತ್ ರಾಜ್ಯಗಳಲ್ಲಿ ಬಿಜೆಪಿಯು ಶ್ರೀಮಂತರು ಬಂಡವಾಳಗಾರರು, ಭೂ ಮಾಲೀಕರು ಪರವಾಗಿ ಆಡಳಿತ ಮಾಡುತ್ತಿರುವುದನ್ನು ಅವರು ಬಯಲಿಗಿಟ್ಟರು.

....ಈ ಕ್ಷೇತ್ರದಲ್ಲಿ ಕುಡಿಯುವ ನೀರಿಗಾಗಿ, ಬಡವರಿಗೆ ಭೂಮಿ ಹಂಚಿ ಎಂಬ ಬೇಡಿಕೆಗಾಗಿ, ಅಕ್ರಮ ಸಕ್ರಮದ ವಿರುದ್ಧ ಬೆಲೆ ಏರಿದ್ದು, ಬಿಪಿಎಲ್ ರೇಷನ್ ಕಾರ್ಡ್ ಕಿತ್ತುಕೊಳ್ಳುವ ಸರ್ಕಾರಗಳ ಧೋರಣೆಯ ವಿರುದ್ಧ ನಡೆದಿರುವ ಹೋರಾಟಗಳಲ್ಲಿ ಮುಂಚೂಣಿಯಲ್ಲಿರುವ ಗೌರಮ್ಮರಿಗೆ ನಿಮ್ಮ ಮತ ಕೊಡಿ... ಬೃಂದಾ ಮನವಿ ಮಾಡಿದರು.

ಇದಕ್ಕೂ ಮೊದಲು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಕಾಂ: ವಿ.ಜೆ.ಕೆ. ನಾಯರ್ ಮಾತನಾಡಿರು.ರಾಜ್ಯದಲ್ಲಿ ಬೆಂಗಳೂರಿನಲ್ಲಿ ದುಡಿಯುವ ಜನರ ಪರಿಸ್ಥಿತಿ. ಬೆಲೆ ಏರಿಕೆಯ ಪರಿಣಾಮ, ಎಲ್ಲವನ್ನೂ ವಿವರಿಸಿ ದುಡಿಯುವ ಜನರ ಪ್ರತಿನಿಧಿ ಗೌರಮ್ಮ ಅವರನ್ನು ಗೆಲ್ಲಿಸಬೇಕೆಂದು ಮನವಿ ಮಾಡಿದರು. ಸಿಪಿಐ(ಎಂ) ಕಛೇರಿಯ ಮೇಲೆ ಅಲ್ಪಸಂಖ್ಯಾತರು ದಲಿತರ ಮೇಲೆ ನಡೆಸಲಾಗುತ್ತಿರುವ ದೌರ್ಜನ್ಯಗಳ ಕುರಿತು ಸಹ ವಿಜೆಕೆ ನಾಯರ್ ಬಿಡಿಸಿಟ್ಟರು. ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ:ಗೋಪಾಲಗೌಡ, ಅಭ್ಯರ್ಥಿ ಕಾಂ:ಗೌರಮ್ಮ ಮುಂತಾದವರು ಮಾತನಾಡಿದರು. ಕೆ.ಎಸ್. ಉಮೇಶ್‌ರವರು ಬೃಂದಾರವರ ಮಾತುಗಳನ್ನು ಕನ್ನಡಕ್ಕೆ ಅನುವಾದಿಸಿದರು. ಮೀನಾಕ್ಷಿಸುಂದರಂ, ಇತರರು ಸಭೆಯಲ್ಲಿ ಪಾಲ್ಗೊಂಡಿದ್ದರು.

ಕರ್ನಾಟಕದ ಕರಾವಳಿಯಲ್ಲಿ ನಡೆದ ಇಂತಹ ಪ್ರಚಾರ ಸಭೆಗಳಿಗೆ ಸಿಪಿಐ(ಎಂ) ಪಕ್ಷದ ಪಾಲಿಟ್‌ಬ್ಯುರೋ ಸದಸ್ಯರಾದ ಕೋಡಿಯೇರಿ ಬಾಲಕೃಷ್ಣನ್, ಕೇಂದ್ರ ಸಮಿತಿ ಸದಸ್ಯರಾದ ಅಬ್ದುಲ್ಲಾ ಕುಟ್ಟಿ, ಕಾಸರಗೋಡು ಸಂಸದರಾದ ಕರುಣಾಕರನ್, ಮಂಜೇಶ್ವರದ ಶಾಸಕರಾದ ಕುಞಂಬು ಮುಂತಾದವರು ಬಂದು ತಮ್ಮ ವಿಚಾರಪೂರಿತ ಮಾತುಗಳನ್ನು ಆಡಿ ಹೋಗಿದ್ದಾರೆ. ಇತ್ತ ಕೆಜಿಎಫ್ ಕ್ಷೇತ್ರಕ್ಕೆ ಪೊಲಿಟ್‌ಬ್ಯೂರೋ ಸದಸ್ಯರಾದ ಕೆ.ವರದರಾಜನ್, ಕೇಂದ್ರ ಸಮಿತಿ ಸದಸ್ಯರಾದ ರಂಗರಾಜನ್, ವಾಸುಕಿ ಮುಂತಾದವರು ಭೇಟಿ ನೀಡಿ ಮಾತನಾಡಿದ್ದಾರೆ.

ಗುಲ್ಬರ್ಗಾ ಗ್ರಾಮಾಂತರ ಕ್ಷೇತ್ರದ ಅಭ್ಯರ್ಥಿ ಮಾರುತಿ ಮಾನ್ಪಡೆಯವರ ಪರವಾಗಿ ಬೃಂದಾಕಾರಟ್, ಸೀತಾರಾಂಯೆಚೂರಿ, ಆಂಧ್ರಪ್ರದೇಶದ ಅಬ್ದುಲ್ ಗಫೂರ್ ಮೊದಲಾದವರು ಪ್ರಚಾರದಲ್ಲಿ ಪಾಲ್ಗೊಂಡಿದ್ದಾರೆ.ಎಲ್ಲ ಕಡೆಯೂ ಅರ್ಥಪೂರ್ಣ ಪ್ರಚಾರ ಸಭೆಗಳು.

ಜೈಪುರ : ಸರಣಿ ಬಾಂಬ್ ಸ್ಫೋಟ

ಭಯೋತ್ಪಾದಕರಿಂದ ಮತ್ತೆ ಕಿಚ್ಚು ಹಚ್ಚುವ ಪ್ರಯತ್ನ

ಮತ್ತೊಮ್ಮೆ ಭಯೋತ್ಪಾದಕರು ಕಿಚ್ಚು ಹಚ್ಚಿ ಭಾರತವನ್ನು ನಡುಗಿಸಿದ್ದಾರೆ. ಈ ಬಾರಿ ರಾಜಸ್ತಾನದ ರಾಜಧಾನಿ ಜೈಪುರದಲ್ಲಿ- ಹದಿನೈದು ನಿಮಿಷಗಳ ಅಂತರದಲ್ಲಿ ಸಂಭವಿಸಿದ ಏಳು ಸರಣಿ ಸ್ಫೋಟಗಳಲ್ಲಿ ಮತ್ತೊಮ್ಮೆ ಮುಗ್ಧ ಜನಗಳ ರಕ್ತ ಹರಿದಿದೆ. ಈ ಹೀನ ಕೃತ್ಯ ಇದುವರೆಗೆ 60 ಜನರ ಬಲಿ ತೆಗೆದುಕೊಂಡಿದೆ, 150 ಜನ ಗಾಯಗೊಂಡಿದ್ದಾರೆ. ಈ ಸಂಖ್ಯೆ ಇನ್ನಷ್ಟು ಹೆಚ್ಚುವ ಆತಂಕವೂ ಇದೆ.

ಈ ಭಯೋತ್ಪಾದಕ ಧಾಳಿಗಳನ್ನು ಬಲವಾಗಿ ಖಂಡಿಸುತ್ತಾ ಭಾರತ ಒಂದು ದೇಶವಾಗಿ ಈ ಸವಾಲನ್ನು ಎದುರಿಸಲು ಒಟ್ಟಾಗಿ ಎದ್ದು ನಿಲ್ಲಬೇಕು. ಭಾರತ ಸಮೃದ್ಧಿ ಹೊಂದದಂತೆ ಮಾಡಬೇಕೆಂದು ಬಯಸುವವರ ಬಯಕೆ ಈಡೇರಲು ಬಿಡಬಾರದು.

ನಿರೀಕ್ಷಿಸಿದಂತೆ ಅಡ್ವಾಣಿ ಮತ್ತು ಇತರ ಬಿಜೆಪಿ ಮುಖಂಡರ ಆರಂಭದ ಪ್ರತಿಕ್ರಿಯೆ- ಪೋಟಾ ಜಾರಿಯಲ್ಲಿದ್ದಿದ್ದರೆ ಇದು ಸಂಭವಿಸುತ್ತಿರಲಿಲ್ಲ! ಯುಪಿಎ ಸರಕಾರ ಭಯೋತ್ಪಾದನೆಯ ಬಗ್ಗೆ ಮೃದು ಧೋರಣೆ ತಳೆದಿರುವುದರಿಂದ ಹೀಗಾಗುತ್ತಿದೆ ಎಂಬ ಅವರ ತರ್ಕವನ್ನು ಪುನರುಚ್ಚರಿಸಿದ್ದಾರೆ. ಇಂತಹ ಪ್ರತಿಕ್ರಿಯೆಯ ಹಿಂದೆ ಕೋಮುವಾದಿ ಭಾವನೆಗಳನ್ನು ಉದ್ರೇಕಿಸುವ ತಂತ್ರವಂತೂ ಇದೆ ಎಂದು ಹೇಳಬೇಕಾಗುತ್ತದೆ.

ಏಕೆಂದರೆ ಇವರ ಪೋಟಾ ದೇಶದ ಕಾನೂನು ಪುಸ್ತಕಗಳಲ್ಲಿ ರಾರಾಜಿಸುತ್ತಿದ್ದಾಗಲೂ ಭಾರತ ಇಂತಹ ಹೀನ ಕೃತ್ಯಗಳನ್ನು ಎದುರಿಸಬೇಕಾಗಿ ಬಂದಿತ್ತು. ಆಗ ಇಡೀ ದೇಶ ಇಂತಹ ಸವಾಲುಗಳನ್ನು ಎದುರಿಸುವಲ್ಲಿ ಆಗಿನ ಎನ್‌ಡಿಎ ಸರಕಾರ ಮತ್ತು ಉಪಪ್ರಧಾನಿ ಹಾಗೂ ಗೃಹಮಂತ್ರಿಯೂ ಆಗಿದ್ದ ಇದೇ ಅಡ್ವಾಣಿಯವರ ಬೆಂಬಲಕ್ಕೆ ನಿಂತಿತ್ತು, ರಾಜಕೀಯ ಪಕ್ಷಗಳೆಲ್ಲಾ ತಮ್ಮ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ಬೆಂಬಲಿಸಿದ್ದವು. ಸಂಸತ್ತಿನ ಮೇಲೆ ಧಾಳಿ, ಕೆಂಪುಕೋಟೆಯ ಮೇಲೆ ಧಾಳಿ, ಎರಡು ಬಾರಿ ರಘುನಾಥ ದೇವಸ್ಥಾನದ ಮೇಲೆ ಧಾಳಿಗಳು, ಅಹಮದಾಬಾದಿನ ಅಕ್ಷರಧಾಮ ದೇವಸ್ಥಾನದ ಮೇಲೆ ಧಾಳಿ-ಇವೆಲ್ಲ ನಡೆದದ್ದು ವಾಜಪೇಯಿ ನೇತೃತ್ವದ ಎನ್‌ಡಿಎ ಸರಕಾರ ಅಧಿಕಾರದಲ್ಲಿದ್ದಾಗಲೇ ತಾನೇ! ಅದೆಲ್ಲ ನಡೆದದ್ದು ಎನ್‌ಡಿಎ ಸರಕಾರ ಭಯೋತ್ಪಾದನೆಯ ಬಗ್ಗೆ ಮೃದು ಧೋರಣೆ ತಳೆದದ್ದರಿಂದ ಎನ್ನಬಹುದೇ?



ರಣಹದ್ದುಗಳೇಕೆ ಎರಗುತ್ತಿವೆ?

ನಿಜ ಸಂಗತಿಯೆಂದರೆ ಭಾರತ ಇಂತಹ ಭಯೋತ್ಪಾದಕ ಸಂಘಟನೆಗಳ ಕುತಂತ್ರಗಳಿಗೆ ಬಲಿಯಾಗುವ ಸ್ಥಿತಿಯಲ್ಲಿದೆ. ಮಾರ್ಚ್ 2004ರಿಂದ 2007ರ ನಡುವೆ ಇರಾಕ್ ಮತ್ತು ಅಫಘಾನಿಸ್ತಾನದಂತಹ ನೇರ ಯುದ್ಧ ನಡೆಯುತ್ತಿರುವ ವಲಯಗಳಲ್ಲದೆ, ವಿಶ್ವಾದ್ಯಂತ ಭಯೋತ್ಪಾದಕ ಧಾಳಿಗಳಲ್ಲಿ 3280 ಮಂದಿ ಜೀವ ಕಳಕೊಂಡರು. ಇದರಲ್ಲಿ ಭಾರತದ ಸಂಖ್ಯೆ ಸೇರಿಲ್ಲ. ಭಾರತವೊಂದರಲ್ಲೆ ಈ ಅವಧಿಯಲ್ಲಿ 3674ಜೀವಗಳ ಬಲಿಯಾಯ್ತು. ಭಾರತದಲ್ಲಿ ಇಂತಹ ಸ್ಥಿತಿ ಏಕೆ ಏರ್ಪಟ್ಟಿದೆ, ಇದನ್ನು ಎದುರಿಸುವುದು ಹೇಗೆ ಎಂದು ಚಿಂತಿಸಬೇಕಾಗಿದೆ.

ನಮ್ಮ ದೇಶದ, ಜನತೆಯ ಪ್ರಗತಿಯನ್ನು ತಡೆಯಲು, ಅದನ್ನು ಅಸ್ಥಿರಗೊಳಿಸಲಿಕ್ಕಾಗಿ ಇಂತಹ ಕೃತ್ಯಗಳಿಗಿಳಿಯುವ ಶತ್ರುಗಳಿದ್ದಾರೆ. ಇದನ್ನು ಕಡಿಮೆ ತೀವ್ರತೆಯ ಯುದ್ಧ ಎಂದು ಹೇಳಲಾಗುತ್ತದೆ. ಆದರೆ ನಮ್ಮೊಳಗೇ ವೈಷಮ್ಯ ಇದ್ದಾಗ ಮಾತ್ರವೇ ಇದರ ಉದ್ದೇಶ ಈಡೇರುತ್ತದೆ. ರಣಹದ್ದು ಕೂಡಾ ರಕ್ತದ ವಾಸನೆ ಹೊಡೆದಾಗಲೇ ಹೆಣದ ಮೇಲೆ ಎರಗುವುದು. ಈ ರೀತಿ ದೇಶದೊಳಗೇ ರಕ್ತ ಹರಿಸುವ ಕ್ರಿಯೆಗಳನ್ನು ನಿಲ್ಲಿಸಬೇಕಾಗಿದೆ.

ಹಾಗೆ ಮಾಡುವಾಗಲೇ ನಮ್ಮ ಆಂತರಿಕ ಭದ್ರತೆಯನ್ನು ರಕ್ಷಿಸಲು ಯುಪಿಎ ಸರಕಾರ ಸಮರೋಪಾದಿಯಲ್ಲಿ ಸಕಲ ಕ್ರಮಗಳನ್ನೂ ಕೈಗೊಳ್ಳಬೇಕು ಎಂದು ಬೇರೆ ಹೇಳಬೇಕಾಗಿಲ್ಲ. ಕಾನೂನು ಸುವ್ಯವಸ್ಥೆಯ ಹೊಣೆ ಸಂವಿಧಾನಿಕವಾಗಿ ರಾಜ್ಯ ಸರಕಾರಗಳ ಮೇಲಿರುವುದರಿಂದ ಅವು- ಇತ್ತೀಚಿನ ಈ ಘಟನೆಯ ಸಂದರ್ಭದಲ್ಲಿ ಅಲ್ಲಿನ ಬಿಜೆಪಿ ಸರಕಾರ-ಈ ಹೊಣೆಯನ್ನು ನಿಭಾಯಿಸಲು ತಮ್ಮ ಪ್ರಯುತ್ನಗಳನ್ನು ದ್ವಿಗುಣಗೊಳಿಸ ಬೇಕಾಗುತ್ತದೆ. ಎಲ್ಲಾ ಲೋಪಗಳನ್ನು ಪತ್ತೆ ಹಚ್ಚಿ ಅವನ್ನು ನಿವಾರಿಸಲು ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ.

ವಿಷಬೀಜ ಬಿತ್ತುವ ವಿಷಾಣುಗಳು

ಆದರೆ ಇಷ್ಟೇ ಸಾಲದು. ಒಂದು ದೇಶವಾಗಿ ನಾವು ಆತ್ಮ ಪರೀಕ್ಷಣೆ ಮಾಡಿಕೊಳ್ಳುವುದೂ ಅಷ್ಟೇ ಆವಶ್ಯಕ- ನಮ್ಮೊಳಗೇ ವಿಭಜನೆಯ ವಿಷಬೀಜ ಬಿತ್ತುವ ವಿಷಾಣುಗಳನ್ನೆಲ್ಲಾ ನಿರ್ಮೂಲ ಮಾಡಬೇಕಾಗಿದೆ. ಈ ನಿಟ್ಟಿನಲ್ಲಿ ಬಿಜೆಪಿ/ಆರೆಸ್ಸೆಸ್‌ನ ಪ್ರತಿಕ್ರಿಯೆಗಳು ಆತಂಕಕಾರಿ. ದೇಶದಲ್ಲಿ ಮಾಯವಾಗುತ್ತಿರುವ ಬಿಜೆಪಿಯ ನೆಲೆಗಳನ್ನು ಮತ್ತೆ ಪಡೆಯಲು, ಕರ್ನಾಟಕದಲ್ಲಿ ಈಗ ನಡೆಯುತ್ತಿರುವ ಚುನಾವಣೆಗಳನ್ನು ಮತ್ತು ಅದೇ ರಾಜಸ್ತಾನವೂ ಸೇರಿದಂತೆ ಮಧ್ಯಪ್ರದೇಶ ಮತ್ತು ಛತ್ತೀಸಘಡದಲ್ಲಿನ ಮುಂಬರುವ ಚುನಾವಣೆಗಳನ್ನು ಗಮನದಲ್ಲಿಟ್ಟುಕೊಂಡು ಈ ಹೀನ ಕೃತ್ಯವನ್ನು ಒಂದು ಅವಕಾಶವಾಗಿ ಕಾಣುವುದು, ಕೋಮುವಾದಿ ಭಾವೋದ್ರೇಕವನ್ನು ಬಡಿದೆಬ್ಬಿಸುವುದು ದುರದೃಷ್ಟಕರ ಮಾತ್ರವಲ್ಲ, ಅತ್ಯಂತ ವಿನಾಶಕಾರೀ ನಿಲುವು ಕೂಡಾ.

> **ಆದಕ್ಕೆ ಕೋಮುವಾದಿಗಳು ತುಪ್ಪ ಸುರಿಯುವ ಪ್ರಯತ್ನ ನಡೆಸಿದ್ದಾರೆ. ದೇಶದಲ್ಲಿ ಮಾಯವಾಗುತ್ತಿರುವ ಬಿಜೆಪಿಯ ನೆಲೆಗಳನ್ನು ಮತ್ತೆ ಪಡೆಯಲು, ಕರ್ನಾಟಕದಲ್ಲಿ ಈಗ ನಡೆಯುತ್ತಿರುವ ಚುನಾವಣೆಗಳನ್ನು ಮತ್ತು ರಾಜಸ್ತಾನ, ಮಧ್ಯಪ್ರದೇಶ ಮತ್ತು ಛತ್ತೀಸಘಡದಲ್ಲಿನ ಮುಂಬರುವ ಚುನಾವಣೆಗಳನ್ನು ಗಮನದಲ್ಲಿಟ್ಟುಕೊಂಡು ಈ ಹೀನ ಕೃತ್ಯವನ್ನು ಓಟಿನ ಗಳಿಕೆಗೆ ಒಂದು ಅವಕಾಶವಾಗಿ ಕಾಣುವುದು, ಕೋಮುವಾದಿ ಭಾವೋದ್ರೇಕ ವನ್ನು ಬಡಿದೆಬ್ಬಿಸುವುದು ದುರದೃಷ್ಟಕರ ಮಾತ್ರವಲ್ಲ, ಅಕ್ಷಮ್ಯ ವಿನಾಶಕಾರೀ ನಿಲುವು ಕೂಡಾ.**

ಈಗ ಮಾಡಬೇಕಾದ ಪ್ರಥಮ ಕೆಲಸವೆಂದರೆ ಭಯೋತ್ಪಾದನೆಯನ್ನು ಎದುರಿಸುವಲ್ಲಿ ಒಂದಾಗುವುದು. ಅದರ ಬದಲು ಭಯೋತ್ಪಾದಕ ಧಾಳಿಗಳನ್ನು ಕೋಮು ಧೃವೀಕರಣವನ್ನು ತೀವ್ರಗೊಳಿಸಲಿಕ್ಕಾಗಿ ಬಳಸಿಕೊಳ್ಳುವುದು ಅಕ್ಷಮ್ಯ. ಇದು ನಮ್ಮ ದೇಶದ ಐಕ್ಯತೆಯನ್ನು, ಸಮಗ್ರತೆಯನ್ನು ಮತ್ತು ಸಾಮಾಜಿಕ ಸಾಮರಸ್ಯವನ್ನೆ ನಾಶ ಮಾಡುವ ಪ್ರಯತ್ನವಾಗುತ್ತದೆ.

ಕೆಲವು ಇಸ್ಲಾಮೀ ಭಯೋತ್ಪಾದಕ ಗುಂಪುಗಳ ಕೈವಾಡ ಇದರಲ್ಲಿ ಇದೆ ಎಂಬುದು ಸ್ಪಷ್ಟ. ಇಂತಹ ಸಂಘಟನೆಗಳನ್ನು ಪತ್ತೆ ಹಚ್ಚಬೇಕು, ಅವನ್ನು ಜನಗಳಿಂದ ದೂರ ಸರಿಸಿ ಎದುರಿಸಬೇಕು ಹಾಗೂ ಭಾರತದ ರಾಜಕೀಯ ಹಾಗೂ ಸಾಮಾಜಿಕ ಜೀವನದಿಂದ ಹೊರಗಟ್ಟಬೇಕು. ಈ ಸಂದರ್ಭದಲ್ಲಿ ಭಯೋತ್ಪಾದನೆ 'ಇಸ್ಲಾಂ-ವಿರೋಧಿ' ಎಂಬ ದೇವಬಂದ್‌ನ 'ಫತ್ವಾ' ವನ್ನು ನೆನಪಿಸಿಕೊಳ್ಳಬೇಕು.

ಪರಸ್ಪರ ಪೋಷಣೆ!

ಎಲ್ಲಾ ರೀತಿಗಳ ಮೂಲಭೂತ ವಾದಗಳು ಪರಸ್ಪರ ಪೋಷಿಸಿಕೊಳ್ಳುತ್ತವೆ ಎಂಬುದನ್ನೂ ಇಲ್ಲಿ ನೆನಪಿಟ್ಟುಕೊಳ್ಳಬೇಕು. ಅಲ್ಪಸಂಖ್ಯಾತ ಮೂಲಭೂತವಾದ ಮತ್ತು ಬಹುಸಂಖ್ಯಾತರ ಕೋಮುವಾದ ಒಂದನ್ನೊಂದು ಬಿಟ್ಟಿರಲು ಸಾಧ್ಯವಿಲ್ಲ. ಅವು ಸತತವಾಗಿ ಒಂದನ್ನೊಂದು ಪೋಷಿಸಿ ಕೊಳ್ಳುತ್ತವೆ, ಬಲಪಡಿಸಿಕೊಳ್ಳುತ್ತವೆ.

ಕೆಲವು ಮಾಧ್ಯಮಗಳು ಗಮನಿಸಿದಂತೆ, ಧಾರ್ಮಿಕ ಸ್ಥಳಗಳ ಮೇಲೆ ಧಾಳಿ ಮಾಡುವ ಉದ್ದೇಶ ಗರಿಷ್ಠ ಪ್ರಮಾಣದಲ್ಲಿ ಪ್ರಾಣನಷ್ಟ ಉಂಟುಮಾಡುವುದಷ್ಟೇ ಅಲ್ಲ, ಕೋಮುವಾದಿ ಭಾವೋದ್ರೇಕಗಳನ್ನು ಬಡಿದೆಬ್ಬಿಸುವುದು ಹಾಗೂ ಕೋಮುಗಳ ನಡುವೆ ರಕ್ತ ಹರಿಯುವಂತೆ ಮಾಡುವುದು ಕೂಡ ಅವುಗಳ ಉದ್ದೇಶ. ವಾರಾಣಸಿಯ ಸಂಕಟಮೋಚನ ದೇವಸ್ಥಾನದಲ್ಲಿ ಸ್ಫೋಟ ನಡೆದದ್ದು ಮಾರ್ಚ್7, 2006ರಂದು. ಅಂದು ಮಂಗಳವಾರ. ದಿಲ್ಲಿಯ ಜಾಮಾ ಮಸೀದಿಯಲ್ಲಿ ಸ್ಫೋಟಗಳು ನಡೆದದ್ದು ಎಪ್ರಿಲ್ 14, 2006 ರಂದು- ಅಂದು ಶುಕ್ರವಾರ. ಅದೇರೀತಿ ಮಲೇಗಾಂವ್ ನ ನೂರಾಣಿ ಮಸೀದಿಯಲ್ಲಿ ಸ್ಫೋಟ ಸಂಭವಿಸಿದ್ದು ಶುಕ್ರವಾರ ಸಪ್ಟೆಂಬರ್ 8, 2006ರಂದು. ಹೈದರಾಬಾದಿನ ಮಕ್ಕಾ ಮಸೀದಿಯಲ್ಲಿಯೂ ಸ್ಫೋಟಗಳು ನಡೆದದ್ದು ಮೇ18, 2007ರ ಶುಕ್ರವಾರದಂದು. ಅಜ್ಮೇರ್ ಶರೀಫ್ ದರ್ಗಾದ ಮೇಲೆ ಧಾಳಿ ನಡೆದದ್ದು ಅಕ್ಟೋಬರ್ 11,2007ರಂದು-ಅಂದು ಶ್ರದ್ಧಾಳುಗಳು ಶುಕ್ರವಾರದ ನಮಾಜಿನ ಹಿಂದಿನ ದಿನ ರಂಜಾನ್‌ನ ಉಪವಾಸ ಮುಗಿಸುವ ದಿನ. ಈಗ ಜೈಪುರದಲ್ಲಿ ಎರಡು ಹನುಮಾನ್ ದೇವಸ್ಥಾನಗಳ ಬಳಿ ಈ ಸ್ಫೋಟಗಳು ನಡೆದದ್ದು ಮಂಗಳವಾರದಂದು. ಅಂದರೆ ಮಂದಿರಗಳಿಗೆ ಮಂಗಳವಾರ ಮತ್ತು ಮಸೀದಿಗಳಿಗೆ ಶುಕ್ರವಾರ! ಕೋಮುಧೃವೀಕರಣವನ್ನು ತೀಕ್ಷ್ಣಗೊಳಿಸಲು ಎಂತಹಾ ಆಹಾರ!

ಇಂತಹ ಸಂದರ್ಭದಲ್ಲಿ 1999ರ ಚುನಾವಣೆಗಳ ಮೊದಲು ಒಂದು ಇಸ್ಲಾಮೀ ಮೂಲಭೂತವಾದೀ ಸಂಘಟನೆಯಾದ ಲಷ್ಕರ್-ಎ-ತಯ್ಯಬಾ ಮಾಹಿತಿ ಕಾರ್ಯದರ್ಶಿ ಹೇಳಿದ್ದನ್ನು ನೆನಪಿಸಿ ಕೊಳ್ಳುವುದು ಒಳ್ಳೆಯದು. "ಬಿಜೆಪಿ ನಮಗೆ ಹೊಂದುತ್ತದೆ. ಒಂದೇ ವರ್ಷದೊಳಗೆ ಅವರು ನಮ್ಮನ್ನು ಒಂದು ಪರಮಾಣು ಮತ್ತು ಕ್ಷಿಪಣಿ ಶಕ್ತಿಯಾಗಿ ಮಾಡಿದ್ದಾರೆ. ಲಷ್ಕರ್-ಎ-ತಯ್ಯಬಾ ಬಿಜೆಪಿಯ ಹೇಳಿಕೆಗಳಿಂದಾಗಿ ಉತ್ತಮ ಸ್ಪಂದನ ಪಡೆಯುತ್ತಿದೆ. ಪರಿಸ್ಥಿತಿ ಮೊದಲಿಗಿಂತ ಎಷ್ಟೋ ಉತ್ತಮ. ಅವರು ಮತ್ತೆ ಅಧಿಕಾರಕ್ಕೆ ಬರಲಿ ಎಂದು ದೇವರನ್ನು ಪ್ರಾರ್ಥಿಸಿಕೊಳ್ಳುತ್ತೇವೆ. ಆಗ ನಾವು ಇನ್ನೂ ಬಲಶಾಲಿಗಳಾಗಿ ಮೂಡಿಬರಬಹುದು" ಎಂದು ಆತ ಹೇಳಿದ್ದ.

ಈಗಿನ ಆತಂಕದ, ನಿರ್ಣಾಯಕ ಕ್ಷಣದಲ್ಲಿ ನೋವು, ಬೇಸರ ಮತ್ತು ಕ್ರೋಧವನ್ನು ವ್ಯಕ್ತಪಡಿಸುತ್ತಲೇ, ನಾವು ಒಂದು ಜನತೆಯಾಗಿ, ದೇಶವಾಗಿ ಈರೀತಿ ಪರಸ್ಪರ ಪೋಷಿಸಿಕೊಂಡು ನಮ್ಮ ಗಣತಂತ್ರದ ಬಲವನ್ನು ಬುಡಮೇಲು ಮಾಡುವ ಶಕ್ತಿಗಳನ್ನು ಕಿತ್ತೆಸೆಯುವ ನಮ್ಮ ನಿರ್ಧಾರವನ್ನು ಇನ್ನಷ್ಟು ದೃಢಗೊಳಿಸಬೇಕು.

ನಾವು ಮುಂದು ಎಂದು ತೋರಿಸುವ ಸ್ಪರ್ಧೆಯ ಮಾತು

ಆಳುವವರ್ಗದ ರಾಜಕೀಯ ಪಕ್ಷಗಳು ತಾವೇ ಸೃಷ್ಟಿಸಿದ ಬಿಕ್ಕಟ್ಟುಗಳಿಗೆ ಕೊಂಚ ಪರಿಹಾರವೆಂಬಂತೆ ಚುನಾವಣಾ ಪ್ರಣಾಳಿಕೆ ಘೋಷಿಸಿವೆ. ಇದರ ಬಗೆಗೆ ನಿರಾಶವಾದ, ಅಪಹಾಸ್ಯ ಪ್ರವೃತ್ತಿ ಬಿಟ್ಟು ಸಕಾರಾತ್ಮಕವಾಗಿರುವುದರ ಜೊತೆಗೆ ಅದರಲ್ಲಿನ ಜನಪರ ಅಂಶಗಳ ಜಾರಿಗೆ ಒತ್ತಾಯಿಸಬೇಕು. ಜನರ ಸಮಸ್ಯೆಗಳಿಗೆ ಮೂಲಭೂತ ಪರಿಹಾರ ಇಲ್ಲವಾದರೂ ಘೋಷಿಸಿರುವ ಪರಿಹಾರವನ್ನಾದರೂ ದಕ್ಕಿಸಿಕೊಳ್ಳಲು ಯತ್ನಿಸಬೇಕು.

ಪ್ರಣಾಳಿಕೆಗಳ ಸ್ಪರ್ಧೆ

ಅಪಹಾಸ್ಯ ಸಲ್ಲದು

ನನ್ನಾಗ ಕಣ್ಣು ನವರ ಮುಗಿಲಿನಲಿ
ತ್ರಿಪುರ ಕನಸುಗಳ ತೋರ್‍ಯಾನ
ಮಾತಿನ ಏಣಿಯು ಗಟ್ಟಿ ಮುಟ್ಟ ಅಂಟಿಸಿ
ತೋರುದಕೇರೇರಿ ಇಳಿದಾನ
-ಚಂದ್ರಶೇಖರ ಕಂಬಾರ

ಜಿ.ಎನ್.ನಾಗರಾಜ್

ಕಾಂಗ್ರೆಸ್ ಉದ್ಘಾಟಿಸಿದ ಪ್ರಣಾಳಿಕೆಗಳ ಸ್ಪರ್ಧೆ ಬಿಜೆಪಿ, ಜೆಡಿ(ಎಸ್)ಗಳು ಸೇರಿ ಪರಸ್ಪರ ಮೇಲಾಟಕ್ಕೆ ಎಳೆದಿದೆ. ನಾಮುಂದು ತಾಮುಂದು ಎಂದು ಜನಪ್ರಿಯ ಪಾಪುಲಿಸ್ಟ್ ಎಂದು ಕರೆಯಲಾಗುವ ಕಾರ್ಯಕ್ರಮಗಳನ್ನು ತಮ್ಮ ಪ್ರಣಾಳಿಕೆಗಳಲ್ಲಿ ಘೋಷಿಸಿದ್ದಾರೆ. 2 ರೂ.ಗೆ ಒಂದು ಕೆ.ಜಿ. ಅಕ್ಕಿ, ಗೋಧಿ, ರಾಗಿ, ಜೋಳ, ವಾಸಕ್ಕೆ ಮನೆಗಳು ಮನೆಗೆ ಕಲರ್ ಟಿ.ವಿ., ಶೇ.3 ಬಡ್ಡಿಯಲ್ಲಿ ಸಾಲ, ಸಾಲಮನ್ನಾ, ಸ್ತ್ರೀ ಶಕ್ತಿ ಗುಂಪುಗಳಿಗೆ ಸಹಾಯಧನ ಏರಿಕೆ ಇತರ ಅನುಕೂಲ, ಆರೋಗ್ಯ ವಿಮೆಯ ಯೋಜನೆಗಳು ಇತ್ಯಾದಿ ಅನೇಕ ಯೋಜನೆಗಳನ್ನು ಜಾರಿಗೆ ತರುವ ಭರವಸೆಗಳು ಉದುರುತ್ತಿದ್ದಾವೆ.

ಇಂತಹ ಯೋಜನೆಗಳು ಚಂದ್ರಶೇಖರ ಕಂಬಾರರ ಕಪನದ ಮೇಲಿನ ಸಾಲುಗಳನ್ನು ನೆನಪಿಗೆ ತರುತ್ತವೆ. ತ್ರಿಪುರ ಕನಸುಗಳನ್ನು ಜನರ ಮನಸ್ಸಿನಲ್ಲಿ ಮೊಳೆಯಿಸುವ ಪ್ರಯತ್ನ ನಡೆದಿದೆ. ಇಂತಹ ಚುನಾವಣಾ ಕಾಲದ ಭರವಸೆಗಳು ಎಷ್ಟರ ಮಟ್ಟಿಗೆ ಜಾರಿಗೆ ಬರುತ್ತವೆ ಎಂಬುದು ಮತದಾರರೆಲ್ಲರಿಗೂ ಇರುವ ಸಂಶಯ. ನಯಾಜೀವನ್ ಎಂದು ಘೋಷಿಸಿದ 1952 ರ ಮೊದಲ ಮಹಾಚುನಾವಣೆಗಳ ಕಾಲದಿಂದಲೂ ಬಂಡವಾಳಶಾಹಿ ರಾಜಕೀಯ ಪಕ್ಷಗಳನ್ನು ನೋಡಿದ ಜನತೆ ಪ್ರಣಾಳಿಕೆಗಳ ಪೊಳ್ಳುತನವನ್ನು ಅನುಭವಿಸಿದ್ದಾರೆ. 'ಗರೀಬಿ ಹಠಾವೋ' ಘೋಷಣೆಯ ಮಹಾ ಮೋಸವನ್ನು ಕಂಡಿದ್ದಾರೆ. ಇದೇ ನೆಲೆಯಲ್ಲಿಯೇ ಕಂಬಾರರ "ಮಾತಿನ ಏಣಿಯ ಗಟ್ಟಿ ಮುಟ್ಟ ಅಂಟಿಸಿ ತೋರುದ ಕೇರೇರಿ ಇಳಿದಾನ" ಎಂಬ ಉದ್ಗಾರ ಹೊರಟಿದೆ. ಈ ಭರವಸೆಗಳು ನಿಜವಾಗುತ್ತವೆಯೇ ಎಂಬ ಸಂಶಯದ ಹಿಂದೆ ಅವು ನಿಜವಾಗಬೇಕು ಎಂಬ ಜನ ಸಾಮಾನ್ಯರ ಬಯಕೆ ಅವಿತಿದೆ.

ಅಪಹಾಸ್ಯ ಸಲ್ಲದು

ಪ್ರಣಾಳಿಕೆಗಳಲ್ಲಿ ಕೊಡ ಮಾಡಿರುವ ಕೊಡುಗೆಗಳ ಬಗ್ಗೆ ಅನೇಕ ಪತ್ರಿಕೆಗಳು, ಟಿ.ವಿ.ಗಳ ವಾಖ್ಯಾನ ಕೋರರು ಅಪಹಾಸ್ಯ ಮಾಡಿದ್ದಾರೆ, ಇದು ಸಾಧ್ಯವೆ, ಇವುಗಳಿಗೆ ಹಣ ಎಲ್ಲಿಂದ ಎಂಬೆಲ್ಲಾ ಪ್ರಶ್ನೆಗಳನ್ನು ಎತ್ತಿದ್ದಾರೆ. ಇದು ವಿವಿಧ ಪ್ರಣಾಳಿಕೆಗಳಲ್ಲಿ ಸೇರಿಸಲಾಗಿರುವ ಅನೇಕ ಕೊಡುಗೆಗಳು ಬಡತನದ ದವಡೆಗೆ ದೂಡಲ್ಪಟ್ಟಿರುವ ಜನ ಸಮುದಾಯದ ಜೀವನದ ಅಗತ್ಯಗಳು ಎಂಬುದರಲ್ಲಿ ಸಂಶಯವಿಲ್ಲ. ಮೂಲಭೂತ ಅಗತ್ಯಗಳಿಂದ ಆಹಾರ, ಆರೋಗ್ಯ, ಮನೆ ಇವುಗಳಿಗೆ ನೇರ ಸಂಬಂಧಿಸಿದವು. ಒಂದು ಕಡೆ ಬೆಲೆ ಏರಿಕೆ, ಇನ್ನೊಂದು ಕಡೆ ನಿರುದ್ಯೋಗ, ಅರೆ ಉದ್ಯೋಗ, ಅಭದ್ರ ಉದ್ಯೋಗಗಳ ಅರೆ ಬರೆ ಸಂಬಳದಿಂದ ಎರಡು ಹೊತ್ತಿನ ಊಟಕ್ಕೂ ಪರದಾಟವಾಗಿರುವ ಜನತೆಗೆ 2 ರೂ.ಗೆ ಅಕ್ಕಿ ಮೊದಲಾದವುಗಳು ಅಗತ್ಯವಿರುವ ಸಂಗತಿಗಳೇ ಆಗಿವೆ. ಭೂಮಿಯ ಬೆಲೆ, ಮನೆ ನಿವೇಶನಗಳ ಬೆಲೆ ಏರಿಕೆ, ಬಾಡಿಗೆಗಳ ಏರಿಕೆ, ಕಟ್ಟಡ ಸಾಮಗ್ರಿಗಳ ಬೆಲೆ ಏರಿಕೆಯ ಸಂದರ್ಭದಲ್ಲಿ ಯೋಗ್ಯವಾದ ಮನೆಯ ಅಗತ್ಯವೂ ಇದೆ. ಸರ್ಕಾರಿ ಆರೋಗ್ಯ ವ್ಯವಸ್ಥೆಯನ್ನು ದುರ್ಬಲಗೊಳಿಸಿ ಖಾಸಗಿ ನರ್ಸಿಂಗ್ ಹೋಮ್‌ಗಳ ಸುಲಿಗೆಗೆ ಜನರನ್ನು ಈಡು ಮಾಡಿದ ಮೇಲೆ ಒಂದು ಆಪರೇಷನ್‌ಗೆ ಲಕ್ಷ, ದಶಲಕ್ಷಗಳನ್ನು ಕಕ್ಕಬೇಕು ಎನ್ನುವ ಪರಿಸ್ಥಿತಿಯನ್ನು ನಿರ್ಮಿಸಿದ ಮೇಲೆ ಆರೋಗ್ಯವಿಮೆಯ, ಯಶಸ್ವಿನಿ ಯೋಜನೆಗಳ ಅಗತ್ಯವೂ ಇದೆ.






ಕೃಷಿ ಬಿಕ್ಕಟ್ಟನ್ನು ಉಂಟುಮಾಡಿ ಹತ್ತಾರು ಸಾವಿರ ರೈತರ ಆತ್ಮಹತ್ಯೆಗಳಿಗೆ ಕಾರಣವಾದ ಮೇಲೆ ಕಡಿಮೆ ಬಡ್ಡಿ ಸಾಲ, ವಿದ್ಯುತ್ ದರಗಳ ಇಳಿಕೆ, ಸಾಲ ಮನ್ನಾಗಳ ಅಗತ್ಯವೂ ಇದೆ. ನಿರುದ್ಯೋಗವನ್ನು ಅಪಾರ ಪ್ರಮಾಣದಲ್ಲಿ ಸೃಷ್ಟಿಸಿದ ಮೇಲೆ ನಿರುದ್ಯೋಗ ಭತ್ಯೆ, ತರಬೇತಿ ಕಾರ್ಯಕ್ರಮಗಳ ಅಗತ್ಯವೂ ಇದೆ.

ಈ ಪರಿಹಾರ ಕಾರ್ಯಕ್ರಮಗಳು ಮತ್ತಷ್ಟು ಹೆಚ್ಚಾಗಬೇಕು

ಆದ್ದರಿಂದ ಆಳುವ ಪಕ್ಷಗಳು ಅದರಲ್ಲಿ ಭಾರತ ಮಟ್ಟದಲ್ಲಿ ಆಳಿದ, ಆಳುತ್ತಿರುವ ಪಕ್ಷಗಳಾದ ಬಿಜೆಪಿ, ಕಾಂಗ್ರೆಸ್ ಪಕ್ಷಗಳೇ ಅವರ ನೀತಿಗಳಿಂದ ಈ ಎಲ್ಲಾ ಸಮಸ್ಯೆಗಳನ್ನು ಸೃಷ್ಟಿಸಿವೆ. ಹೀಗಾಗಿ ವಿವಿಧ ರೀತಿಯ ಸಂಕಟಕ್ಕೊಳಗಾಗಿರುವ ಜನರಿಗೆ ಸ್ವಲ್ಪವಾದರೂ ಪರಿಹಾರವನ್ನೊದಗಿಸುವುದು ಯಾವುದೇ ರೀತಿಯಲ್ಲಿ ವ್ಯಂಗ್ಯ, ಪರಿಹಾಸ್ಯಕ್ಕೆ ಈಡುಮಾಡುವಂತಹದಲ್ಲ. ಕಲರ್ ಟಿ.ವಿ. ಗ್ಯಾಸ್‌ಸ್ಟೋವ್ ನೀಡುವ ಯೋಜನೆಗಳೂ ಕೂಡ ಇವೆಲ್ಲಾ ಪಾಪುಲಿಸ್ಟ್ ನೀತಿಗಳು ಅಗ್ಗದ ಜನಪ್ರಿಯತೆಯನ್ನು ಗಳಿಸುವುದಕ್ಕಾಗಿ, ಅಹಹಾ ಟೀವಿ ಕೊಡುತ್ತಾರಂತೆ! ಎನ್ನುವವರು ಟಿ.ವಿ.ಎಂಬುದು ಮನರಂಜನೆಯ ಮಾಧ್ಯಮ ಮಾತ್ರವಲ್ಲ. ಅನಕ್ಷರಸ್ಥರಿಗೆ ಸುದ್ದಿ, ಮಾಹಿತಿ ನೀಡುವ ಮಾಧ್ಯಮವೂ ಹೌದು ಎಂಬುದನ್ನು ಮರೆಯದಿರೋಣ. ಆದ್ದರಿಂದ ಇವು ಅಗ್ಗದ ಜನಪ್ರಿಯತೆ ಗಳಿಸಿಕೊಳ್ಳುವ ಕೇವಲ ಚುನಾವಣೆಯಲ್ಲಿ ಗೆಲ್ಲುವುದಕ್ಕಾಗಿ ಮಾತ್ರವೇ ರೂಪಿಸಿದ ಕಾರ್ಯಕ್ರಮಗಳೆಂದು ಹೀಗಳೆಯುವುದಕ್ಕೆ ಬದಲಾಗಿ ಬಡತನ ಸೃಷ್ಟಿಸಿದ ಪಕ್ಷಗಳೇ ಅವರಿಗೆ ನೀಡಿದ ಕೆಲವು ಪರಿಹಾರ ಕಾರ್ಯಕ್ರಮಗಳು ಎಂದೇ ಕಾಣಬೇಕು. ಈ ಪರಿಹಾರ ಕಾಯಕ್ರಮಗಳು ಇನ್ನಷ್ಟು ಹೆಚ್ಚಾಗಬೇಕು. ಸಮಗ್ರವಾಗಬೇಕು ವೈಜ್ಞಾನಿಕ ಅಧ್ಯಯನಗಳ ಆಧಾರದಲ್ಲಿ ರೂಪುಗೊಳ್ಳಬೇಕು ಎಂಬುದೇ ಜನಪರ ದೃಷ್ಟಿಯ ಒತ್ತಾಯ. ಜನರ ಜೀವನ ಮಟ್ಟದ ಸುಧಾರಣೆಗೆ ಇವು ಸೋಪಾನಗಳಾಗುತ್ತವೆ.



ಹಣ ಎಲ್ಲಿಂದ ?

ಪಕ್ಷಗಳು ಪರಸ್ಪರ ಸ್ಪರ್ಧಿಸುತ್ತಾ ಈ ಪರಿಯಲ್ಲಿ ಕಾರ್ಯಕ್ರಮಗಳನ್ನು ರೂಪಿಸಿದರೆ ಅದಕ್ಕೆ ಆ ಅಗಾಧ ಹೊರೆಯನ್ನು ರಾಜ್ಯ ಸರ್ಕಾರದ ಬಜೆಟ್ ಹೊತ್ತುಕೊಳ್ಳಲು ಸಾಧ್ಯವೇ? ರಾಜ್ಯದ ಹಣಕಾಸು ವ್ಯವಸ್ಥೆ ಅಲ್ಲೋಲ ಕಲ್ಲೋಲವಾಗುತ್ತದೆ. ಆದ್ದರಿಂದ ಇದು ಅಸಾಧ್ಯ. ರಾಜ್ಯದ ಅಭಿವೃದ್ಧಿ ಕಾರ್ಯಕ್ರಮಗಳಿಗೆ ವೆಚ್ಚವಾಗಬೇಕಾದ ಹಣ ಸೋರಿ ಹೋಗುತ್ತದೆ ಇತ್ಯಾದಿ ಟೀಕೆಗಳು ಎದ್ದು ಬಂದಿವೆ.

ಬಿಜೆಪಿಯ ಮಾರಕ ಭೂ ನೀತಿ

2 ರೂ.ಗೆ ಅಕ್ಕಿ, ನಿರುದ್ಯೋಗಿಗಳಿಗೆ ತರಬೇತಿ ಭತ್ಯೆ, ಪ್ರತಿ ಗ್ರಾಮಕ್ಕೆ ಕಂಪ್ಯೂಟರ್ ಹಾಗೂ ಟಿ.ವಿ. ಶೇ.3 ರ ಬಡ್ಡಿಯಬ್ಯಾಂಕ್ ಸಾಲ, ಸಹಕಾರಿ ಸಂಘಗಳ ಕೃಷಿ ಸಾಲ ಇತ್ಯಾದಿ ಘೋಷಣೆಗಳ ಮರೆಯಲ್ಲಿ ರಾಜ್ಯದ ರೈತರಿಗೆ, ಕೃಷಿ, ಆಹಾರ ಉತ್ಪಾದನೆಗಳಿಗೆ ಮಾರಕವಾಗುವ ಭೂ ನೀತಿಯನ್ನು ಸೇರಿಸಿದೆ. ಭೂ ಸುಧಾರಣೆ ಕಾನೂನನ್ನು ತಿದ್ದುಪಡಿ ಮಾಡುತ್ತೇವೆ. ಕೃಷಿಕರಲ್ಲದ ಯಾರೇ ಆಗಲಿ ಎಷ್ಟು ಬೇಕಾದರೂ ಭೂಮಿಯನ್ನು ಕೊಳ್ಳಲು ಅವಕಾಶ ನೀಡುತ್ತೇವೆಂದು ಘೋಷಿಸಿದ್ದಾರೆ.

ಈಗಾಗಲೇ ಭೂ ಸುಧಾರಣಾ ಕಾನೂನಿಗೆ ತಂದ ಒಂದು ತಿದ್ದುಪಡಿ ಕಪ್ಪು ಹಣದ ದೊರೆಗಳೂ ಭೂಮಿಕೊಳ್ಳಲು ಅವಕಾಶ ಮಾಡಿಕೊಟ್ಟಿತು. ಈಗ ಬಿಜೆಪಿ ಕಪ್ಪು ಹಣಕ್ಕೆ ಪೂರ್ಣ ಅವಕಾಶವನ್ನು ತೆರೆಯುವುದರ ಮೂಲಕ ಕೇವಲ ಜೂಜುಕೋರ ಭೂ ದಂಧೆಕೋರರಿಗೆ ಎಷ್ಟು ಬೇಕಾದರೂ ಭೂಮಿಯನ್ನು ಕೊಳ್ಳುವ ಸ್ವಾತಂತ್ರ್ಯ ಈಗ ಕರ್ನಾಟಕದ ಎಲ್ಲಾ ನಗರ, ಪಟ್ಟಣಗಳ ಸುತ್ತಲು, ರಾಷ್ಟ್ರೀಯ ಮೊದಲಾದ ಹೆದ್ದಾರಿಗಳ ಸುತ್ತಲು ಲಕ್ಷಾಂತರ ಎಕರೆ ಭೂಮಿ ಕೃಷಿಯಿಂದ ಹೊರಹೋಗಲು ಅವಕಾಶ ಮಾಡಿಕೊಡುತ್ತದೆ. ರೈತರು, ಭೂಮಿ ಕಳೆದುಕೊಳ್ಳುತ್ತಾರೆ. ಭೂ ದಂಧೆಕೋರರು, ಕಪ್ಪು ಹಣವನ್ನು ಬಚ್ಚಿಡಲು ದಾರಿಗಳನ್ನು ಹುಡುಕುತ್ತಿರುವವರು ಅವರಿಂದ ಕಡಿಮೆ ಹಣಕ್ಕೆ ಭೂಮಿಯನ್ನು ಕೊಂಡು ಅತಿ ಹೆಚ್ಚು ಬೆಲೆ ಸಿಗುವವರೆಗೆ ಪಾಳು ಬಿಟ್ಟು ನಂತರ ಮಾರಿ ದುರ್ಲಾಭ ಮಾಡಿ ಕೊಳ್ಳುತ್ತಾರೆ. ಸಂಪತ್ತು ಹಾಗೂ ನಿವೇಶನಕೊಳ್ಳುವವರಿಂದ ರೈತರಿಂದ ಕಾಳಸಂತೆಕೋರರಿಗೆ ವರ್ಗಾವಣೆ ಮಾಡಲು ಬಿಜೆಪಿ ಬಯಸುತ್ತಿದೆ.

ಅದೇ ಸಮಯದಲ್ಲಿ ಮತ್ತೊಂದು ಬದಲಾವಣೆಯನ್ನು ಮಾಡಲು ಬಿಜೆಪಿ ಬಯಸುತ್ತಿದೆ. ಕೃಷಿ ಭೂಮಿಯನ್ನು ಕೃಷಿಯೇತರ ಉದ್ದೇಶಗಳಿಗೆ ಬಳಸಲು ಇನ್ನೂ ಯಾವ ಅನುಮತಿಯ ಅವಶ್ಯಕತೆಯೂ ಇಲ್ಲದಂತೆ ಮಾಡುತ್ತೇನೆಂದು ಹೇಳಿದೆ. ಇದು ಕೂಡ ಕೃಷಿ ಭೂಮಿಯನ್ನು ಕೃಷಿಯಿಂದ ಹೊರಗೆ ಹಾಕುವ ಮತ್ತೊಂದು ಕ್ರಮವಾಗಲಿದೆ. ಕಪ್ಪು ಹಣದ ಹಿಡಿತಕ್ಕೆ ಭೂಮಿಯನ್ನು ಸಿಕ್ಕಿಸುವ ಮತ್ತೊಂದು ಮಾರ್ಗವಾಗಲಿದೆ.

ಹೀಗೆ ಬಿಜೆಪಿ ತನ್ನ ಪಕ್ಷದೊಳಗೆ ಹೊರಗೆ ಇರುವ ಅಸಂಖ್ಯ ಬೆಂಬಲಿಗ ಭೂ ಮಾಫಿಯಾಗಳಿಗೆ ಕೃತಜ್ಞತೆಯನ್ನು ತೋರಲು, ಕೆಲ ಭೂ ಮಾಲೀಕರಿಗೆ ಅತಿ ಲಾಭವನ್ನು ಗಳಿಸಿಕೊಡಲು ಮುಂದಾಗಿದೆ. ರೈತರಿಗೆ ಇಂತಾ ಪರಿ ನಷ್ಟವನ್ನು ತಂದೊಡ್ಡಿ ಶೇ.3 ಬಡ್ಡಿ ಸಾಲ, 2 ರೂ. ಕೆ.ಜಿ. ಅಕ್ಕಿ ಎಂದು ಆಸೆ ತೋರಿಸುವುದು ಒಂದು ಕ್ರೂರ ವ್ಯಂಗ್ಯವಾಗಿದೆ.

ಪ್ರಣಾಳಿಕೆಗಳಲ್ಲಿ ಹಣ ಸಂಪನ್ಮೂಲದ ಪ್ರಶ್ನೆಗೆ ಉತ್ತರವಿಲ್ಲ

ವಿವಿಧ ರೀತಿಯ ಯೋಜನೆಗಳನ್ನು ಪ್ರಕಟಿಸಿದ ರಾಜಕೀಯ ಪಕ್ಷಗಳು ತಮ್ಮ ಪ್ರಣಾಳಿಕೆಗಳಲ್ಲಿ ಅವುಗಳಿಗೆ ಹಣವನ್ನು ಹೇಗೆ ಸಂಗ್ರಹಿಸುತ್ತವೆ ಎಂಬ ಬಗ್ಗೆ ಒಂದು ನೆಚ್ಚಬಹುದಾದ ನೀತಿಯನ್ನು ಪ್ರಕಟಿಸಿಲ್ಲ.

ರಾಜಕೀಯ ಪಕ್ಷಗಳ ಇಚ್ಛೆಯ ಪ್ರಶ್ನೆ

ಕೈಗಾರಿಕೋದ್ಯಮಿಗಳಿಗೆ, ಐಟಿ-ಬಿಟಿ ಉದ್ಯಮಿಗಳಿಗೆ ಬಹುರಾಷ್ಟ್ರೀಯ ಕಂಪನಿಗಳಿಗೆ ಹತ್ತಾರು ಸಾವಿರ ಕೋಟಿ ತೆರಿಗೆ ವಿನಾಯಿತಿ ನೀಡುವಾಗ ಪತ್ರಿಕೆ ಮಾಧ್ಯಮಗಳ ವಿಶ್ಲೇಷಕರು ಇದೇ ಪ್ರಶ್ನೆಗಳನ್ನು ಏಕೆ ಎತ್ತುವುದಿಲ್ಲ? ಹೀಗೆ ದೊಡ್ಡ ಬಂಡವಾಳಶಾಹಿಗಳಿಗೆ ನೀಡುತ್ತಿರುವ ವಿನಾಯಿತಿ ಎಂಬ ಸಹಾಯಧನವನ್ನು ಕಡಿತಗೊಳಿಸಿದರೇ ಈ ಕಾರ್ಯಕ್ರಮಗಳಿಗೆ ಆದಾಯ ಒದಗಿ ಬರುತ್ತದೆ. ಅದೇ ಸಮಯದಲ್ಲಿ ಭೂ ವ್ಯವಹಾರ, ಗಣಿ ಇವುಗಳ ಮೇಲೆ ಓಬಿರಾಯನ ಕಾಲದ ತೆರಿಗೆವನ್ನು ತೀವ್ರವಾಗಿ, ಶೀಘ್ರವಾಗಿ ಏರಿಸಿದರೆ, ಹಾಗೆಯೇ ಗ್ರಾಮೀಣ ಪ್ರದೇಶದ ಶ್ರೀಮಂತರ ಆದಾಯಕರ, ಭೂ ಕಂದಾಯಗಳನ್ನು ಹೆಚ್ಚಿಸಿದರೆ ರಾಜ್ಯದ ಅಭಿವೃದ್ಧಿಗೆ ಹಾಗೂ ಪ್ರಣಾಳಿಕೆಗಳ ಪರಿಹಾರ ಕಾರ್ಯಕ್ರಮಗಳಿಗೆ ಹಣ ರೂಢಿಸುವುದು ಕಷ್ಟವಲ್ಲ. ಜೊತೆಗೆ ಕೇಂದ್ರ ಸರ್ಕಾರದ ನೀತಿಗಳಿಂದಾಗಿ ಉದ್ಭವಿಸಿದ ಪರಿಸ್ಥಿತಿಗೆ ಪರಿಹಾರ ಕಾರ್ಯಕ್ರಮಗಳಿಗೆ ಹಣ ಒದಗಿಸಲು ಕೇಂದ್ರ ಸರ್ಕಾರವನ್ನು ಒತ್ತಾಯಿಸಬೇಕಾಗುತ್ತದೆ. ರಾಜ್ಯ ಸರ್ಕಾರಗಳ ಸಂಪನ್ಮೂಲಗಳನ್ನು ಹೆಚ್ಚಿಸಿಕೊಳ್ಳಲು ರಾಜ್ಯಗಳಿಗೆ ಹೆಚ್ಚು ಅಧಿಕಾರ, ಕೇಂದ್ರ-ರಾಜ್ಯ ಸಂಬಂಧಗಳಲ್ಲಿ ರಾಜ್ಯಗಳ ಸ್ವಾಯತ್ತತೆಯ ಪರವಾಗಿ ಮಾರ್ಪಾಡುಗಳಿಗಾಗಿ ತೀವ್ರ ಒತ್ತಾಯುವನ್ನು ತರಬೇಕಾಗುತ್ತದೆ. ಒಟ್ಟಿನಲ್ಲಿ ಈ ಪರಿಹಾರ ಕಾರ್ಯಕ್ರಮಗಳಿಗೆ ಹಣವನ್ನು ಒದಗಿಸುವುದು ಅಸಾಧ್ಯವೇನಲ್ಲ. ಆದರೆ ಸರ್ಕಾರವನ್ನು ರಚಿಸುವ ಪಕ್ಷಗಳ ರಾಜಕೀಯ ಇಚ್ಛೆಗೆ ಬಿಟ್ಟ ಪ್ರಶ್ನೆ.

ಜನತಾದಳ ಮಾತ್ರ ಗಣಿ ಹಾಗೂ ಭೂ ವ್ಯವಹಾರಗಳಿಂದ ಹೆಚ್ಚಿನ ಹಣ ಸಂಗ್ರಹಿಸುವ ಪ್ರಸ್ತಾಪ ಮಾಡಿದೆ. ಒಟ್ಟಾರೆಯಾಗಿ ಹಣವನ್ನು ರೂಢಿಸುವ ಬಗ್ಗೆ ಒಂದು ಸ್ಪಷ್ಟ ಯೋಜನೆಯಿಲ್ಲದಿರುವುದು ವಿವಿಧ ಪ್ರತಿಕ್ರಿಯೆಗಳಿಗೆ ಕಾರಣವಾಗಿದೆ. ಇಂತಹ ಜನಪ್ರಿಯ ಯೋಜನೆಗಳೆಂದರೆ ಅದಕ್ಕೆ ಹೆಚ್ಚಿನ ತೆರಿಗೆಯ ಭಾರವನ್ನು ವಿಧಿಸುತ್ತಾರೆ. ಈ ತೆರಿಗೆಯ ಭಾರದ ಹೆಚ್ಚಿನ ಭಾಗ ನಮ್ಮ ಮೇಲೇಯೇ ಬೀಳುತ್ತದೆ ಎಂಬುದು ಮಧ್ಯಮವರ್ಗಗಳ ದುಡಿಯುವ ಜನತೆಯ ಭಯ. ನಮ್ಮ ವಿನಾಯಿತಿಗಳಿಗೆ ಕತ್ತರಿ ಬೀಳುತ್ತದೆ ಎಂದು ಬಂಡವಾಳ ಶಾಹಿಗಳ ಆತಂಕ. ಆದರೆ ಅದೇ ಸಮಯದಲ್ಲಿ ವಿವಿಧ ಸೇವೆಗಳಿಗೆ ಬಸ್ ದರ, ನೀರಿನದರ, ವಿದ್ಯುತ್ ದರ, ಆಸ್ಪತ್ರೆಗಳ ದರಗಳು ಇತ್ಯಾದಿಗಳಲ್ಲಿ ತೀವ್ರ ಏರಿಕೆಯನ್ನು ಭರಿಸಬೇಕಾಗಿ ಬಂದಿರುವ ಬಡ ಜನ ಸಮುದಾಯಗಳಿಗೂ ತಮ್ಮ ಮೇಲೇಯೇ ಹೆಚ್ಚಿನ ಭಾರ ಹೊರಿಸಿ ತೆರಿಗೆ ಸಂಗ್ರಹಿಸಿ ಅದನ್ನೇ ಕೊಡುಗೆಗಳು ಎಂದು ನೀಡುತ್ತಾರೆ ಎಂಬ ಆತಂಕವಿದೆ.

ಪಕ್ಷಗಳ ನೀತಿಗೆ ವಿರುದ್ಧವಾದ ಪ್ರಣಾಳಿಕೆಗಳು

ಪ್ರಣಾಳಿಕೆಗಳಲ್ಲಿ ಘೋಷಿತವಾಗಿರುವ ಯೋಜನೆ, ಕೊಡುಗೆಗಳು ಅವರದೇ ಪಕ್ಷಗಳು ಅನುಸರಿಸುತ್ತಿರುವ, ಅವರು ಕೇಂದ್ರ ಅಥವಾ ರಾಜ್ಯ ಸರ್ಕಾರಗಳಲ್ಲಿ ಅಧಿಕಾರದಲ್ಲಿದ್ದಾಗ ಜಾರಿಗೆ ತಂದ ನೀತಿಗಳಿಗೆ ವಿರುದ್ಧವಾಗಿವೆ. ಕಾಂಗ್ರೆಸ್ ಜಾಗತೀಕರಣ, ಉದಾರೀಕರಣ, ಖಾಸಗೀಕರಣ ನೀತಿಯನ್ನು ಜಾರಿಗೆ ತಂದಿತು. ಅದರ ಭಾಗವಾಗಿ ಸಹಾಯಧನ ಕಡಿತ, ದರಗಳ ಏರಿಕೆ, ಪಡಿತರ



ಇದು ಸಿನಿಕತನದ ಒಂದು ರೂಪ

ಪದ್ಧತಿಯ ವಿನಾಶ, ನಿರುದ್ಯೋಗ, ಅರೆ ಉದ್ಯೋಗ ಗುತ್ತಿಗೆ ಉದ್ಯೋಗಗಳನ್ನು ಆ ಮೂಲಕ ಬಡತನಗಳನ್ನು ಸೃಷ್ಟಿಸಿದ್ದು, ರೈತರು ಹೆಚ್ಚು ಸಾಲ ಮಾಡಬೇಕಾದಂತಹ ಪರಿಸ್ಥಿತಿಯನ್ನು ಹಾಗೂ ಬ್ಯಾಂಕ್ ಮತ್ತು ಸಹಕಾರಗಳಿಂದ ಅವರಿಗೆ ಸಾಲ ಸಿಗದಂತಹ ಪರಿಸ್ಥಿತಿಯನ್ನು ಸೃಷ್ಟಿಸಿದ್ದು ರೈತರು ಬೆಳೆದ ಬೆಳೆಗೆ ಬೆಲೆ ಸಿಗದಂತಹ ಪರಿಸ್ಥಿತಿಯನ್ನು ಸೃಷ್ಟಿಸಿತು. ಬಿಜೆಪಿ ಪಕ್ಷ ಈ ಜಾಗತೀಕರಣ ನೀತಿಗಳು ತಮ್ಮ ಪ್ರಣಾಳಿಕೆಯಿಂದ ಕಾಂಗ್ರೆಸ್ ಕದ್ದಿದೆ ಎಂದು ಆರೋಪಿಸಿದ್ದು ಮಾತ್ರವಲ್ಲ ಕಾಂಗ್ರೆಸ್ ಜೊತೆ ಪೋಟಿ ನಡೆಸುತ್ತಾ ತಾನು ಅಧಿಕಾರದಲ್ಲಿದ್ದ ರಾಜ್ಯ ಸರ್ಕಾರಗಳಲ್ಲಿ ಮತ್ತು ಕೇಂದ್ರದಲ್ಲಿ 6 ವರ್ಷಗಳ ಕಾಲ ಅಧಿಕಾರ ನಡೆಸಿದಾಗ ಇದೇ ನೀತಿಗಳನ್ನೂ ಮತ್ತಷ್ಟು ರಭಸದಿಂದ ಮತ್ತಷ್ಟು ಆಘಾತಕಾರಿಯಾಗಿ ಜಾರಿಗೆ ತಂದಿತು. ಇದೇ ಪಕ್ಷಗಳು ಕರ್ನಾಟಕದ ವಿಧಾನಸಭಾ ಚುನಾವಣೆಯಲ್ಲಿ ರಾಜ್ಯದ ಜನತೆಯ ವಿವಿಧ ವಿಭಾಗಗಳಿಗೆ ಸಹಾಯಧನ ಹೆಚ್ಚಿಸುವ ನೀತಿಗಳನ್ನು ಪ್ರಣಾಳಿಕೆಯಲ್ಲಿ ಸೇರಿಸಿವೆ. ಅದೇ ಸಮಯದಲ್ಲಿ ಈ ಸಮಸ್ಯೆಗಳಿಗೆ ಕಾರಣವಾದ ಮೂಲ ಭೂತ ನೀತಿಗಳನ್ನು ಬದಲಾಯಿಸುವ ಅಥವಾ ತಿದ್ದಿಕೊಳ್ಳುವ ಯಾವುದೇ ಮಾತಿಲ್ಲ.

ಜೆಡಿ(ಎಸ್) ತಾನು ಅಧಿಕಾರಕ್ಕೆ ಬಂದಾಗೆಲ್ಲಾ ಕೆಲವು ಪರಿಹಾರಗಳನ್ನು ನೀಡಿದ್ದರೂ ಜಾಗತೀಕರಣದ ನೀತಿಗಳನ್ನು ರಾಜ್ಯ ಮಟ್ಟದಲ್ಲಿ ಜಾರಿಗೆ ತರುತ್ತಾ, ಕೇಂದ್ರ ಸರ್ಕಾರದ ನಿರ್ದೇಶನಗಳನ್ನು ಜಾರಿಗೆ ತರುತ್ತಾ ಬಂದಿದೆ. ಹೀಗೆ ಆ ಮೂರು ಪಕ್ಷಗಳೂ ಜನರ ಸಂಕಟಗಳನ್ನೂ ಹೆಚ್ಚಿಸುವ ನೀತಿಗಳನ್ನು ಮುಂದೆಯೂ ಜಾರಿಗೆ ತರುವುದನ್ನು ಮುಂದುವರೆಸುತ್ತಲೇ ಹೋಗುತ್ತವೆ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ.

ಜನತೆಯೇ ತಂದ ಬದಲಾವಣೆ

ತಮ್ಮ ಪಕ್ಷಗಳ ಮೂಲಭೂತ ನೀತಿಗಳಿಗೆ ವಿರುದ್ಧವಾಗಿ ಈ ಕೊಡುಗೆಗಳನ್ನು ಘೋಷಿಸುವಂತೆ ಆ ಪಕ್ಷಗಳ ಮೇಲೆ ಒತ್ತಾಯ ಹೇರಿದ್ದು ಜನತೆಯೇ. 2004ರಲ್ಲಿ 'ಭಾರತ ಪ್ರಕಾಶಿಸುತ್ತಿದೆ' ಎಂಬ ಬಿಜೆಪಿ ಘೋಷಣೆಯ ಮಾತಿಗೆ ಭಾರತದ ಪ್ರಜ್ಞಾವಂತ ಮತದಾರರು ಇಕ್ಕಿದ ರೀತಿಯಿಂದ ಭಾರತದ ಆಳುವ ವರ್ಗದ ರಾಜಕೀಯ ಪಕ್ಷಗಳೆಲ್ಲವೂ ಎಚ್ಚರಗೊಂಡಿವೆ.

2004ರ ಚುನಾವಣೆಯ ನಂತರ ಕಾಂಗ್ರೆಸ್ ನೇತೃತ್ವದ ಕೆಲವು ಸರ್ಕಾರವೇ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಂತಹ ಯೋಜನೆಗಳನ್ನು ಜಾರಿಗೆ ತರಬೇಕಾದ ಅನಿವಾರ್ಯತೆಗೆ ಒಳಗಾಗಿದೆ. ನಂತರ ತಮಿಳುನಾಡಿನ ಚುನಾವಣೆ ಸಂದರ್ಭದಲ್ಲಿ ಡಿ.ಎಂ.ಕೆ. ಇಂತಹ ಪರಿಹಾರಗಳನ್ನು ಘೋಷಿಸಿದರೆ, ಆಂಧ್ರಪ್ರದೇಶದಲ್ಲಿ ಇನ್ನೂ ದೂರವಿದ್ದರೂ ನಿರಂತರವಾಗಿ ಇಂತಹ ಕಾರ್ಯಕ್ರಮಗಳನ್ನು ಜಾರಿಗೆ ತರುವ ಒತ್ತಾಯಕ್ಕೆ ಒಳಗಾಗಿದೆ. ಕೇರಳದಲ್ಲಿ ಎಡಪಂಥೀಯ ಗೆಲುವಿನ

ಪುಟ 12ಕ್ಕೆ

ಇದು ಪ್ರಜಾವಾಣಿ ಪತ್ರಿಕೆಯ 'ಕರ್ನಾಟಕ ದರ್ಶನ'ದಲ್ಲಿ ಪ್ರಕಟವಾಗಿರುವ ವರದಿ. ನಮ್ಮ ಸರ್ಕಾರಗಳ ಅಭಿವೃದ್ಧಿ ಯಾರ್‍ಯಾರನ್ನು ತಲುಪಿದೆ, ಜನತೆ ಹೇಗೆಲ್ಲಾ ಬದುಕಿದ್ದಾರೆ ಎಂಬುದಕ್ಕೆ ಉತ್ತರ ಕನ್ನಡ ಜಿಲ್ಲೆಯ ಹಳ್ಳಿಗಳ ಕುರಿತ ಈ ವರದಿಯೇ ಒಂದು ಕನ್ನಡಿ



ಚಪ್ಪಲಿ ಕೊಳ್ಳಲು ಶಕ್ತಿಯಿಲ್ಲ.

ಬವಣೆಗಳ ಹಳಿ ಮೇಲೆ ಹಳ್ಳಿ

ರಾಜ್ಯದ ನೂರಾರು ಹಳ್ಳಿಗಳಲ್ಲಿ ಕುಡಿಯುವ ನೀರಿಲ್ಲ. ಬೆಳಕಿಲ್ಲ. ಒಳ್ಳೆಯ ರಸ್ತೆ, ಶಾಲೆ, ಆಸ್ಪತ್ರೆಗಳಿಲ್ಲ. ಒಂದಿದ್ದರೆ ಇನ್ನೊಂದಿಲ್ಲ. ನಗರ/ಪಟ್ಟಣಗಳಲ್ಲಿರುವ ಕನಿಷ್ಠ ಸೌಲಭ್ಯಗಳಾದರೂ ತಮಗೂ ಬೇಕು ಎಂದು ಅವರು ಭಾವಿಸಿದರೆ ತಪ್ಪಲ್ಲ. ಆದರೆ ಸೌಲಭ್ಯಗಳು ಸಿಕ್ಕುವುದು ಯಾವಾಗ?

ಈಗ ಚುನಾವಣಾ ಕಾಲ. ಸ್ಪರ್ಧಿಸಿರುವ ಅಭ್ಯರ್ಥಿಗಳೆಲ್ಲ ಹಳ್ಳಿಗಳ ಉದ್ಧಾರದ ಭರವಸೆ ಕೊಡುತ್ತಿದ್ದಾರೆ. ಆದರೆ ಸಮಸ್ಯೆಗಳಿಗೆ ಪರಿಹಾರ ಸಿಗುತ್ತದೆ ಎನ್ನುವ ಭರವಸೆ ಹಳ್ಳಿಗರಿಗಿಲ್ಲ. ಕನಿಷ್ಠ ಸೌಲಭ್ಯಗಳೂ ಇಲ್ಲದ ನೂರಾರು ಹಳ್ಳಿಗಳು ಪ್ರತಿಯೊಂದೂ ಜಿಲ್ಲೆಯಲ್ಲಿವೆ. ಉತ್ತರ ಕನ್ನಡ ಜಿಲ್ಲೆಯ ಕೆಲವು ಹಳ್ಳಿಗರ ಸ್ಥಿತಿಯನ್ನು ಗಮನಿಸಿ. ದೇಶಕ್ಕೆ ಸ್ವಾತಂತ್ರ್ಯ ಬಂದು ಅರವತ್ತು ವರ್ಷ ಕಳೆದರೂ ಈ ಹಳ್ಳಿಗಳಲ್ಲಿ ಕನಿಷ್ಠ ಸೌಲಭ್ಯಗಳೂ ಇಲ್ಲ.

ರಾಜ್ಯಕ್ಕೆ ಬೆಳಕು ನೀಡಿದ ಜಿಲ್ಲೆ ಎಂಬ ಹೆಗ್ಗಳಿಕೆ ಉತ್ತರ ಕನ್ನಡ ಜಿಲ್ಲೆಯದು. ಈ ಜಿಲ್ಲೆಯ ಅನೇಕ ಹಳ್ಳಿಗಳು ಇಂದಿಗೂ ಸೀಮೆಎಣ್ಣೆಯ ಬುಡ್ಡಿ ಬೆಳಕಿನಲ್ಲಿ ದಿನ ದೂಡುತ್ತಿವೆ! ಈ ಹಳ್ಳಿಗಳ ಮನೆಗಳಲ್ಲಿ ಚಿಮಣಿ ದೀಪಗಳ 'ಷೋಕೇಸ್' ಇದೆ. ಜನ ರಾತ್ರಿ ಏಳಕ್ಕೇ ಕಂಬಳಿ ಹೊದ್ದು ಮಲಗುತ್ತಾರೆ. ರಾತ್ರಿ ಉಣ್ಣಲು ಬುಡ್ಡಿ ಬೆಳಕೂ ದುಬಾರಿ. ಸೀಮೆಎಣ್ಣೆ ಖಾಲಿಯಾದರೆ ಮುಂದಿನ ರೇಷನ್ ವಿತರಣೆವರೆಗೆ ಕತ್ತಲಲ್ಲೇ ಕಳೆಯಬೇಕು. ಬಸ್ ಸೌಲಭ್ಯ ಕನಸು. ಏಳೆಂಟು ಕಿ.ಮೀ. ದೂರ ನಡೆದು ಹಳ್ಳ, ಕೊಳ್ಳ ಹತ್ತಿಳಿದು ಸಮೀಪದ ಪಟ್ಟಣಕ್ಕೆ ಹೋಗಿ ಬರಬೇಕು. ಗರ್ಭಿಣಿ ಮಹಿಳೆಯರು ಹೆರಿಗೆಗೆ ಪಟ್ಟಣದ ನೆಂಟರ ಮನೆಗಳಲ್ಲಿ ಉಳಿಯಬೇಕು. ಮಳೆಗಾಲದ ಹೆಚ್ಚಿನ ದಿನಗಳಲ್ಲಿ ಶಾಲೆಗಳಿಗೆ ಸ್ವಯಂಘೋಷಿತ ರಜೆ.!

ಶಿರಸಿ ತಾಲ್ಲೂಕಿನ ಬಂಡಲ ಗ್ರಾಮ ಪಂಚಾಯತ್ ವ್ಯಾಪ್ತಿಯ ಮುಂಡಗಾರು, ತಟಗಾರು, ಕೆರೆಗಣಿ, ತೋಟದಗದ್ದೆ, ಸಂಪೆಕಟ್ಟೆ, ಕೋಣೆಗದ್ದೆ, ಕಾರಗದ್ದೆ ಮುಂತಾದ 26ಕ್ಕೂ ಹೆಚ್ಚು ಮಜರೆಗಳ ವಾಸ್ತವ ಪರಿಸ್ಥಿತಿ ಇದು.

ಈ ಹಳ್ಳಿಗಳು ಇನ್ನೂ ವಿದ್ಯುತ್ ಕಂಡಿಲ್ಲ. ಶಿರಸಿ-ಕುಮಟ ಮಾರ್ಗದಲ್ಲಿ ರಾಗಿಹೊಸಹಳ್ಳಿಯಿಂದ ಬಲಭಾಗಕ್ಕೆ 7-8 ಕಿ.ಮೀ. ಅಂತರದಲ್ಲಿ ಮುಂಡಗಾರು. ತಟಗಾರು, ಕೆರೆಗಣಿ ಇತ್ಯಾದಿ ಕುಗ್ರಾಮಗಳನ್ನು ತಲುಪಲು ಕಲ್ಲು-ಮಣ್ಣಿನ ಕಚ್ಚಾ ರಸ್ತೆಯೇ ಗತಿ. ಈ ರಸ್ತೆಯುದ್ದಕ್ಕೂ ವಿದ್ಯುತ್ ಕಂಬಗಳಿವೆ. 1984ರಲ್ಲಿ ವಿದ್ಯುತ್ ಸಂಪರ್ಕಕ್ಕಾಗಿ ಮುಂಡಗಾರವರೆಗೂ ವಿದ್ಯುತ್ ತಂತಿ ಎಳೆಯಲಾಗಿತ್ತು. ಮುಂದೆ ಏನಾಯಿತೋ ಗೊತ್ತಿಲ್ಲ. ಕರೆಂಟ್ ಬರಲೇ ಇಲ್ಲ. ಕಂಬಗಳು ನೆಲಕ್ಕೆ ಬಿದ್ದವು. ತಂತಿಗಳು ಯಾರದೋ ಪಾಲಾದವು. ಅಳಿದುಳಿದ ಕಂಬಗಳು ಗಿಡ ಮರಗಳ ಬಳ್ಳಿ, ಬಿಳಲುಗಳ ಆಧಾರದಲ್ಲಿ ನಿಂತಿವೆ. ಹೀಗೇಕೆ ಎಂಬ ಪ್ರಶ್ನೆಗೆ ಯಾರಿಗೂ ಉತ್ತರ ಗೊತ್ತಿಲ್ಲ.

'ಇಪ್ಪತ್ತೆರಡು ವರ್ಷಗಳಿಂದ ಕರೆಂಟಿಗೆ ಕಾಯ್ತಾ ಇದ್ದೇವೆ. ಮನವಿ ಕೊಟ್ಟು ಸಾಕಾಗಿದೆ. ಚುನಾವಣೆ ಸಂದರ್ಭದಲ್ಲಿ ಕರೆಂಟ್ ಕೊಡುವ ಭರವಸೆ ನೀಡುತ್ತಾರೆ. ಇನ್ನೂ ಕರೆಂಟ್ ಬಂದಿಲ್ಲ' ಎನ್ನುತ್ತಾರೆ ಈ ಹಳ್ಳಿಗಳ ಜನ.

ಈ ಹಳ್ಳಿಗಳಿಗೆ ಕರೆಂಟ್ ಕೊಡುವ ಪ್ರಯತ್ನ ನಡೆದಿತ್ತು ಎನ್ನುವುದು ಇಂದಿನ ಹೆಸ್ಕಾಂ ಅಧಿಕಾರಿಗಳಿಗೆ ಗೊತ್ತಿಲ್ಲ. ಅಚ್ಚರಿಯ ಸಂಗತಿಯೆಂದರೆ ಎರಡು ವರ್ಷಗಳ ಹಿಂದೆ ಹಳೆಯ ಕಂಬಗಳ ಪಕ್ಕದಲ್ಲಿ ಮತ್ತೊಮ್ಮೆ ಕಂಬ ನೆಡಲು ಗುಂಡಿ ತೆಗೆಯಲಾಗಿದೆ. ಕಂಬ, ತಂತಿಗಳೂ ಬಂದಿದ್ದವು. ಆದರೆ ಅವನ್ನೆಲ್ಲ ವಾಪಸ್ಸು ಒಯ್ದರಂತೆ! ಅವು ರಾಜೀವಗಾಂಧಿ ಗ್ರಾಮೀಣ ವಿದ್ಯುತ್ ಯೋಜನೆಗಾಗಿ ತರಿಸಿದ್ದರಂತೆ. ಯೋಜನೆ ಅಂತ್ಯಗೊಂಡಿದ್ದರಿಂದ ಕಂಬ, ತಂತಿ ಒಯ್ಯಬೇಕಾಯಿತು ಎನ್ನುವುದು ಹೆಸ್ಕಾಂ ಅಧಿಕಾರಿಗಳ ವಿವರಣೆ.

ಬಟ್ಟೆಯೇ ಚಪ್ಪಲಿ! : ರಸ್ತೆಗಳ ಪರಿಸ್ಥಿತಿ ಗಂಭೀರ. ಮಣ್ಣು ಮಳೆಗೆ ಕೊಚ್ಚಿ ಹೋಗಿ ಕಲ್ಲುಗಳಷ್ಟೇ ಉಳಿದಿವೆ. ಕಿರಿದಾದ ರಸ್ತೆಯಲ್ಲಿ ದ್ವಿಚಕ್ರ ವಾಹನಗಳು ಹೋಗಬಹುದಷ್ಟೆ. ಈ ರಸ್ತೆಯಲ್ಲಿ ಬರಿಗಾಲಲಲ್ಲಿ ನಡೆದು ಹೋಗುವ ಮಕ್ಕಳು, ವೃದ್ಧರು ಕಾಲುಗಳಿಗೆ ಬಟ್ಟೆ ಕಟ್ಟಿಕೊಂಡು ಓಡಾಡುತ್ತಾರೆ! ಚಪ್ಪಲಿ ಕೊಳ್ಳಲಾಗದವರು ಕಲ್ಲು, ಮುಳ್ಳುಗಳ ಹಾದಿ ಸವೆಸಲು ಕಂಡುಕೊಂಡ ಉಪಾಯ ಇದು.

ಮಳೆಗಾಲದಲ್ಲಿ ಹಳ್ಳಗಳು ತುಂಬಿ ಸಂಪರ್ಕ ಕಡಿದು ಹೋಗುತ್ತದೆ. ಈ ಹಳ್ಳಿಗಳಲ್ಲಿ ವಾಸಿಸುವವರು ಹಿಂದುಳಿದ ವರ್ಗಗಳ ಬಡವರು. ಈ ಹಳ್ಳಿಗಳ ಮಕ್ಕಳ ಓದು ಹೆಚ್ಚೆಂದರೆ ಏಳನೇ ತರಗತಿವರೆಗೆ ಮಾತ್ರ.

ಮೂಲಸೌಲಭ್ಯಗಳಿಲ್ಲದಿದ್ದರೂ ಈ ಹಳ್ಳಿಗಳ ಮುಗ್ಧ ಜನರು ಓಟು ಹಾಕುವುದನ್ನು ನಿಲ್ಲಿಸಿಲ್ಲ! ಅವರ ಸಹನೆ ಮೆಚ್ಚಲೇಬೇಕು. ಸಹನೆಯ ಮೆಚ್ಚಲೇಬೇಕು. ಸಹನೆಯ ಹಿಂದೆ ಜನ ಪ್ರತಿನಿಧಿಗಳ ಭರಪೂರ ಭರವಸೆಗಳಿವೆ! ಈ ಹೈಟೆಕ್ ಯುಗದಲ್ಲೂ ನಮ್ಮ ಸುತ್ತಲೂ ಮುಗ್ಧ ಹಳ್ಳಿಗರು ಇಂಥ ಕನಿಷ್ಠ ಮಟ್ಟದ ಜೀವನ ನಡೆಸುತ್ತಿದ್ದಾರೆ. ಇದಕ್ಕೆ ಯಾರು ಹೊಣೆ? ಜನ ಪ್ರತಿನಿಧಿಗಳೋ ಸರ್ಕಾರವೋ?

ಇದು ಉತ್ತರ ಕನ್ನಡ ಜಿಲ್ಲೆಯೊಂದರ ಸಮಸ್ಯೆ ಅಲ್ಲ ಇಂಥ ಸಾವಿರಾರು ಹಳ್ಳಿಗಳು ರಾಜ್ಯದಲ್ಲಿವೆ.

ಚಿತ್ರ ಲೇಖನ:
ಕೃಷ್ಣ ಶಿರೂರ



ರಸ್ತೆ ಇಲ್ಲ, ಸೇತುವೆ ಇಲ್ಲ.

ಗುಲ್ಬರ್ಗಾ ಮತ್ತು ಬೀದರ್ ಜಿಲ್ಲೆಗಳಲ್ಲಿ ಉದ್ಯೋಗ ಖಾತರಿ ಯೋಜನೆಯನ್ನು ಜಾರಿಗೊಳಿಸುವಲ್ಲಿ ಜನವಾದಿ ಮಹಿಳಾ ಸಂಘಟನೆ ಯಾವ ರೀತಿ ಸಂಘಟಿತ ಯೋಜನೆಗಳನ್ನು ರೂಪಿಸಿದೆ. ಯೋಜನೆಯ ಅನುಷ್ಠಾನದ ಏಳುಬೀಳುಗಳೇನು ಎಂಬುದನ್ನು ತಿಳಿಯಲು ಹೋದ ಸಂಗಾತಿಗಳ ಅನುಭವ

ಕೋಲಾರಕ್ಕೆ ಕಡ ತಂದ ಅನುಭವ ಮತ್ತು ಅಂಥಾ ಒಂದು ಹೆರಿಗೆ

ಉದ್ಯೋಗ ಖಾತ್ರಿ ಯೋಜನೆ ಅನುಷ್ಠಾನದ ಬಗ್ಗೆ ಖುದ್ದು ತಿಳಿದುಕೊಳ್ಳಲು ನಾನು ಮತ್ತು ಗೀತಾ ಇತ್ತೀಚೆಗೆ ಗುಲ್ಬರ್ಗಾ, ಬೀದರ್ ಜಿಲ್ಲೆಗಳ ಕೆಲವು ಸ್ಥಳಗಳಿಗೆ ಭೇಟಿ ನೀಡಲು ನಿರ್ಧರಿಸಿ ಬೆಂಗಳೂರಿನಿಂದ ರೈಲಿನಲ್ಲಿ ಹೊರಡಲು ಸಿದ್ಧರಾದೆವು. ಉದ್ಯಾನ್ ಎಕ್ಸ್‌ಪ್ರೆಸ್ ಜನರಲ್ ಬೋಗಿಯಲ್ಲಿ ಪ್ರಯಾಣಿಸುತ್ತಿದ್ದಾಗ ನಡೆದ ಘಟನೆಯೊಂದು ಹಾಗೂ ರೇಗಾ ಯೋಜನೆ ಅನುಷ್ಠಾನದಲ್ಲಿ ಮಹಿಳೆಯರು ತೊಡಗಿಸಿಕೊಂಡಿರುವುದನ್ನು ಕಣ್ಣಾರೆ ಕಂಡು ಅನುಭವಿಸಿದ್ದನ್ನು ನೋಡಿದ್ದು ನನ್ನ ಮೆದುಳಿನಲ್ಲಿ ಮನೆ ಮಾಡಿತ್ತು. ಆ ಅನುಭವವನ್ನು ಇತರರೊಂದಿಗೆ ಹಂಚಿಕೊಳ್ಳುವ ಪ್ರಯತ್ನವೇ ಈ ಲೇಖನ.

ನಮ್ಮ ಸೋಮಾರಿತನದಿಂದಾಗಿ ಮುಂಗಡ ಟಿಕೆಟ್ ಕಾಯ್ದಿರಿಸಲು ಸಾಧ್ಯವಾಗಲಿಲ್ಲ. ಹಾಗಾಗಿ ಜನರಲ್ ಬೋಗಿಯಲ್ಲಿ ಪ್ರಯಾಣಿಸಲು ಅಣಿಯಾದೆವು. ಬೋಗಿಯಲ್ಲಿ ಜನ ಜೇನು ನೊಣಗಳಂತೆ ಕಿಕ್ಕಿರಿದಿದ್ದರು. ಕಾಲಿಡಲೂ ಸ್ಥಳವಿಲ್ಲದಂತಹ ಪರಿಸ್ಥಿತಿ. ಹೊಟ್ಟೆ ಬೆನ್ನಿಗಂಟಿದ ಮಹಿಳೆಯರು, ಬಟ್ಟೆ ಬದಲಾಯಿಸಿ, ತಲೆಗೆ ಸೀಗೆಕಾಯಿ ತೋರಿಸಿ ಅದೆಷ್ಟು ದಿನವಾಗಿತ್ತೋ ದೇವರೇ ಬಲ್ಲ. ಬೀದರ್, ಗುಲ್ಬರ್ಗಾ, ಯಾದಗಿರಿ, ರಾಯಚೂರಿನಿಂದ ಹೊಟ್ಟೆ ಪಾಡಿಗಾಗಿ ಕೂಲಿ ಅರಸಿ ಬೆಂಗಳೂರಿಗೆ ಬಂದಿದ್ದವರು. ಯುಗಾದಿ ಹಬ್ಬಕ್ಕಾಗಿ ತವರಿಗೆ ಹಿಂದಿರುಗುತ್ತಿದ್ದರು. ಅವರಲ್ಲಿ ಬಹುತೇಕ ಮಂದಿ ಮಕ್ಕಳು ಮತ್ತು ವೃದ್ಧೆಯರಾಗಿದ್ದರು. ಅವರೊಟ್ಟಿಗೆ ಅವರ ಲಗೇಜುಗಳು, ಪರಿಕರಗಳು, ಹಬ್ಬಕ್ಕಾಗಿ ಖರೀದಿಸಿದ ದಿನಸಿಗಳು ಇನಷ್ಟು ಹೊರೆಯಾಗಿದ್ದವು.

'ಭವ್ಯ ಭಾರತ'ದ ಚಿತ್ರ: ಬಹಳ ಪ್ರಯಾಸದಿಂದ ನಾವಿಬ್ಬರೂ ರೈಲು ಹತ್ತಿದೆವು. 40 ಮಂದಿ ಇರಬೇಕಾದ ಬೋಗಿಯಲ್ಲಿ ಸರಿಸುಮಾರು 200 ಮಂದಿ ಇದ್ದೆವು. ಕೂರಲು ಸಾಧ್ಯವಾಗುವುದೇ ಎಂದು ಅತ್ತಿತ್ತ ನೋಟ ಹರಿಸಿದೆವು. ನಿಲ್ಲುವುದೇ ದುಸ್ತರವಾಗಿರುವಾಗ ಕೂರುವ ಪ್ರಶ್ನೆ ಎಲ್ಲಿಂದ ಬಂತು ಎಂದು ಮನದೊಳಗೆ ಅಂದುಕೊಂಡು ಮೂಲೆಯೊಂದರಲ್ಲಿ ನಿಂತೆವು. ಉಸಿರಾಡಲೂ ಹೆಣಗಾಡಬೇಕಾದ ಆ ಬೋಗಿಯಲ್ಲಿ ಇಬ್ಬರು ಗರ್ಭಿಣಿಯರಿದ್ದರು. ವಾಸ್ತವವಾಗಿ ಆ ಬೋಗಿ ಭವ್ಯ ಭಾರತದ ನೈಜ ಚಿತ್ರಣವನ್ನು ಬಿಂಬಿಸಿತ್ತು. ಈ ಬೋಗಿಯಲ್ಲಿದ್ದ ಇಬ್ಬರು ಗರ್ಭಿಣಿಯರ ಸ್ಥಿತಿ, ಪಾಪಿಗಳು ನರಕದಲ್ಲಿ ತಮ್ಮ ಶಿಕ್ಷೆಯ ಸರದಿಗಾಗಿ ಕಾಯುತ್ತಿರುವಂತಿತ್ತು.

ಅವರಲ್ಲಿ ಒಬ್ಬಾಕೆಗೆ ಹೆರಿಗೆ ಅವಧಿ ಸಮೀಪಿಸಿದಂತೆ ಕಾಣುತ್ತಿತ್ತು. ಆಕೆಗೆ ಕೂರಲು ಸರಿಯಾಗಿ ಸ್ಥಳವಿರಲಿಲ್ಲ. ಪ್ರಯಾಣ ಒಂದು ಗಂಟೆ ಸವೆಸಿರಬಹುದು. ಆಕೆಗೆ ನೋವು ಶುರುವಾಯಿತು. ವಿಧಿಯಿಲ್ಲದೆ ಆಕೆ ಹೋಗಿ ಬೋಗಿಯ ಶೌಚಾಲಯದಲ್ಲಿ ಕೂತಳು. ಇಂತಹ ಪರಿಸ್ಥಿತಿಯಲ್ಲಿ ಯಾಕೆ ಪ್ರಯಾಣಿಸುತ್ತೀಯಾ ಎಂದು ಚುಚ್ಚು ಮಾತಾಡಿದರು. ಕೆಲವರು ಆಕೆ ಇಂತಹ ಗಂಭೀರ ಪರಿಸ್ಥಿತಿಯಲ್ಲೂ ನೂರಾರು ಮೈಲಿಗಳಿಂದ ಬೆಂಗಳೂರಿಗೆ ಕೂಲಿ ಅರಸಿ ಬರಲು ಕಾರಣವಾದ ಸಾಮಾಜಿಕ, ಆರ್ಥಿಕ ಪರಿಸ್ಥಿತಿ ಹೇಗಿರಬಹುದು? ಇನ್ನೇನು ಹೆರಿಗೆ ಅಂತಿಮ ಕ್ಷಣಗಳು, ಆಕೆ ಕೂತಿದ್ದ ಶೌಚಾಲಯದ ಸ್ವಚ್ಛತೆಯೋ ದೇವರಿಗೇ ಪ್ರೀತಿ. ನಮ್ಮಲ್ಲಿ ಆತಂಕ, ದುಗುಡ ಹೆಚ್ಚಾಯಿತು. ಬೇರೆ ದಾರಿಯಿಲ್ಲ. ಇದ್ದದರಲ್ಲೇ ಏನಾದರೂ ಮಾಡಬೇಕಾಗಿತ್ತು. ಅಷ್ಟರಲ್ಲೇ ರೈಲು ಮುಂದಿನ ನಿಲ್ದಾಣ ತಲುಪಿತ್ತು. ಅಲ್ಲಿಗೆ ಬಂದ ಪೋಲಿಸರನ್ನು "ಬ್ಲೇಡು, ಚಾಕು ಏನಾದರೂ ಇದ್ದರೆ ಕೊಡಿ. ಇಲ್ಲೊಬ್ಬರಿಗೆ ಹೆರಿಯಾಗುವ ಸಾಧ್ಯತೆಗಳಿವೆ" ಎಂದು ಗೀತಾ ಕೇಳಿದರು. ತಕ್ಷಣಕ್ಕೆ ಅವರ ಬಳಿ ಅವ್ಯಾವುದೂ ಇರಲಿಲ್ಲ. ಅಪರೂಪಕ್ಕೊಮ್ಮೆ ಮಾನವೀಯತೆ ಮೆರೆಯುವ ಪೋಲೀಸರು ಮುಂದಿನ ನಿಲ್ದಾಣ ಅನಂತಪುರಕ್ಕೆ ಪೋನ್ ಮಾಡಿ ಗರ್ಭಿಣಿಯನ್ನು ತುರ್ತಾಗಿ ಆಸ್ಪತ್ರೆಗೆ ಸಾಗಿಸುವ ವ್ಯವಸ್ಥೆ ಮಾಡಿದ್ದರು. ನಮ್ಮ ಪ್ರಯಾಣ ಒಂದೆರಡು ಗಂಟೆ ಆತಂಕದಲ್ಲೇ ಮುಂದುವರೆಯಿತು. ಆಕೆಗೆ ಹೆಣ್ಣು ಮಗು ಜನಿಸಿದೆ ಎಂದು ಪೋಲೀಸರ ಮೂಲಕ ವಿಷಯ ತಿಳಿಯಿತು. ನಮ್ಮಲ್ಲಿ ಅಡಗಿದ್ದ ಆತಂಕ ಒಮ್ಮೆಗೆ ದೂರವಾಗಿ, ಹೃದಯದಲ್ಲಿ ಅಡಗಿದ್ದ ಭಾರ ತನ್ನಿಂತಾನೆ ಇಳಿದು ಮುಖದಲ್ಲಿ ಸಂತೋಷ ಮಿಂಚಿತು.

ಹುಮನಾಬಾದ್‌ನಲ್ಲಿ

ಹುಮನಾಬಾದ್‌ನಲ್ಲಿ ಇಳಿಯುತ್ತಿದ್ದಂತೆ ಬೆಂಕಿಗೂಡಿನ ಮೇಲೆ ಕಾಲಿಟ್ಟಂತಾಗಿತ್ತು. ಕೋಲಾರ ಜಿಲ್ಲೆಯ ತಾಪಕ್ಕೆ ಬೆವರಿಳಿಸಿಕೊಳ್ಳುವ ನಾವು ಗುಲ್ಬರ್ಗ, ಬೀದರ್ ಜಿಲ್ಲೆಗಳಲ್ಲಿನ ಬಿಸಿಲ ಜಳಕ್ಕೆ ಬೆಂಕಿಗೆ ತಾಕಿ ಬೀಳುವ ಪತಂಗಗಳಂತಾಗಿದ್ದೆವು. ನಮ್ಮ ಬರಮಾಡಿಕೊಳ್ಳಲು ಮೀನಕುಮಾರಿ ಅವರು ಕೃಷಿ ಕೂಲಿಕಾರ್ಮಿಕ ಸಂಘಟನೆಯ ದೇವಾನಂದ್‌ರನ್ನು ಕಳುಹಿಸಿದ್ದರು.

ಅಲ್ಲಿನ ಹಿಂದಿ ಮರಾಠಿ ಮಿಶ್ರಿತ ವೇಗದ ಕನ್ನಡ ಭಾಷೆ ನಮಗೆ ಪೂರ್ಣವಾಗಿ ಅರ್ಥವಾಗುತ್ತಿರಲಿಲ್ಲ. ಪ್ರಯಾಸದಿಂದ ಅರ್ಥೈಸಿಕೊಳ್ಳುತ್ತಿದ್ದೆವು. ಎರಡು ಮೂರು ಬಾರಿ ಕೇಳಿದರೂ ಕೆಲವೊಮ್ಮೆ ಅರ್ಥವಾಗದೇ ಸುಮ್ಮನಾಗುತ್ತಿದ್ದೆವು. ಅವರ ಮುಖಭಾವ ಕೈ ಬಾಯಿ ಸನ್ನೆ ಗ್ರಹಿಸಿ ಮುಂದುವರೆಯುತ್ತಿದ್ದೆವು. ಮೀನಾಕುಮಾರಿ ನಮ್ಮನ್ನು ಖಾನಾವಳಿಗೆ ಕರೆದೊಯ್ದರು. ಖಾನಾವಳಿ ಹೆಸರು ಕೇಳಿದ್ದೆವಾದರೂ ಮೊದಲ ಬಾರಿ ಅದರೊಳಕ್ಕೆ ಪ್ರವೇಶಿಸಿದ್ದೆವು. ಅಲ್ಲಿ ಊಟ ಮುಗಿಸಿ ಚಿಟಗುಪ್ಪ ಬಸ್ ಹತ್ತಿದೆವು. ದಾರಿ ಮಧ್ಯೆ ಹುಡುಗಿ ಎಂಬ ಗ್ರಾಮ. ಹೆಸರು ಕೇಳಿಯೇ ಸ್ವಲ್ಪ ವಿಶೇಷ ಎನಿಸಿತು. ಇಲ್ಲೆ ಎಲ್ಲಾದರೂ ಹುಡುಗ, ಮುದುಕ, ಮುದುಕಿ ಎಂಬ ಊರುಗಳೂ ಇರಬಹುದು ಎಂದು ಮನದಲ್ಲೇ ಊಹಿಸುತ್ತಾ ಮುಂದುವರೆದೆವು. ಆ ದಿನ ಅಂಬೂಬಾಯಿ ಅವರ ಮನೆಯಲ್ಲಿ ವಿಶ್ರಾಂತಿ ಪಡೆದವು. ನಾಳೆ ಎಲ್ಲೆಲ್ಲಿ ಹೋಗಬೇಕೆಂದು ನಾನು ಗೀತಾ ರಾತ್ರಿಯೇ ಸಂಕ್ಷಿಪ್ತ ಯೋಜನೆಯೊಂದನ್ನು ರೂಪಿಸಿದೆವು. ಬೆಳಿಗ್ಗೆ ತಿಂಡಿ ಸೇವಿಸಿ ಉದ್ಯೋಗ ಖಾತ್ರಿ ಯೋಜನೆ ಅನುಷ್ಠಾನ ನೋಡಲು ಕಾಡ್‌ವಾಡ ಗ್ರಾಮಕ್ಕೆ ತೆರಳಿದೆವು. ಮಧ್ಯಾಹ್ನ ಮೂರು ಗಂಟೆ, ರಣಬಿಸಿಲು, ಮೈಮೇಲಿನ ಬೆವರು ನೆಲದಲ್ಲಿ ಬಿದ್ದರೆ ಕ್ಷಣ ಮಾತ್ರದಲ್ಲಿ ಆವಿಯಾಗುತ್ತಿತ್ತು. ಅಂತಹ ಪರಿಸ್ಥಿತಿಯಲ್ಲಿ ಜನವಾದಿ ಸಂಗಾತಿ ಭಾರತಿ ಬಾಯಿ ಇತರ ಕಾರ್ಮಿಕರೊಂದಿಗೆ ಕೆರೆಯ ಹೂಳೆತ್ತುವ ಕಾಯಕದಲ್ಲಿ ತೊಡಗಿದ್ದರು. ಸುಸ್ತಾದರೆ ದಣಿವಾರಿಸಿಕೊಳ್ಳಲು ನೆರಳಿನಾಸರೆಗಾಗಿ ಮರಗಳೂ ಇರಲಿಲ್ಲ. ಅಲ್ಲಲ್ಲಿ ಇದ್ದ ಕುರುಚಲು ಗಿಡಗಳ ಕೆಳಗೆ ಆಸರೆ ಪಡೆಯುತ್ತಿದ್ದರು. ಅಲ್ಲೇ ಕಾರ್ಮಿಕರೊಂದಿಗೆ ನಾವು ಊಟ ಮಾಡುವ ಯೋಜನೆ ಇತ್ತಾದರೂ ತಡವಾಗಿದ್ದರಿಂದ ಅವರೆಲ್ಲ ಊಟ ಮುಗಿಸಿದ್ದರು. ಆ ಕೆಂಪು ಗಟ್ಟಿ ನೆಲವನಗೆಯುತ್ತ....

ಬಹುತೇಕ ಹೆಣ್ಣು ಮಕ್ಕಳೇ ಕೆಲಸದಲ್ಲಿ ತೊಡಗಿದ್ದರು. ಪುರುಷರಿಗಿಂತಲೂ ನಾವೇನೂ ಕಡಿಮೆಯಿಲ್ಲ ಎಂಬಂತೆ ಪ್ಯಾಂಟು ಷರ್ಟ್‌ಗಳನ್ನು ಧರಿಸಿದ್ದರು. ಅವರದೇ ರೀತಿಯಲ್ಲಿ ಇನ್‌ಷರ್ಟ್ ಮಾಡಿದ್ದರು. ಇಡೀ ಪ್ರದೇಶ ಕೆಂಪು ಮಣ್ಣು, ಉಕ್ಕಿನಂತಹ ಗಟ್ಟಿ ನೆಲ. ಅಂತಹ ಪ್ರದೇಶದಲ್ಲಿ ಕೆರೆ ಹೂಳೆತ್ತುವ, ಚೆಕ್ ಡ್ಯಾಂ ನಿರ್ಮಿಸುವಂತಹ ಕೆಲಸಗಳನ್ನು ಅವರು ಮಾಡುತ್ತಿದ್ದರು. ಮತ್ತೇನು ಮಾಡುವುದು. ಕೆಲಸ ಮಾಡದಿದ್ದಲ್ಲಿ ಮನೆಯಲ್ಲಿ ಉಪವಾಸ ಸಾಯುವ ಪರಿಸ್ಥಿತಿ. ಹಸಿವಿನಿಂದ ಬಡವರು ಸಾಯಲು ಕಾರಣವೇನೆಂದು ಹೇಳಿಕೆ ಸಲ್ಲಿಸಬೇಕೆಂದು ಸುಪ್ರೀಂಕೋರ್ಟ್ ಕೇಂದ್ರ ಸರ್ಕಾರಕ್ಕೆ ನಾಲ್ಕು ವರ್ಷಗಳ ಹಿಂದೆ ಸೂಚಿಸಿತ್ತು. ಕೇಂದ್ರ ಸರ್ಕಾರಕ್ಕೆ ಇದರ ಕಾರಣ ಗೊತ್ತೆ? ಇಲ್ಲವೇ? ನಮಗಿನ್ನೂ ಗೊತ್ತಾಗಬೇಕಿದೆ. ಈ ಕಾರ್ಪೋರೇಟ್ ಜಗತ್ತಿನಲ್ಲಿ ಮನುಷ್ಯನ ಸಾವಿಗೆ ಬೆಲೆಯೇ ಇಲ್ಲದಂತಾಗಿದೆ. ಇಲ್ಲಿಯೂ ಅದೇ ಪರಿಸ್ಥಿತಿ. ಈ ಯೋಜನೆ ಯಶಸ್ವಿಯಾಗಿ ಅನುಷ್ಠಾನಗೊಳಿಸುವುದು ನಮ್ಮ ಆದ್ಯ ಕರ್ತವ್ಯ ಎಂಬ ಭಾವನೆ ಯಾವ ಅಧಿಕಾರಿಗಳಲ್ಲೂ ಕಾಣಲಿಲ್ಲ. ಜನವಾದಿ ಸಂಘಟನೆಯ ನಿರಂತರ ಹೋರಾಟ, ಪ್ರತಿಭಟನೆಗಳು ಇಲ್ಲದಿದ್ದಲ್ಲಿ, ಅಧಿಕಾರಿಗಳಿಗೆ ಈ ಯೋಜನೆಯೂ ಹತ್ತರಲ್ಲಿ ಇನ್ನೊಂದು ಎಂಬಂತಾಗುತ್ತಿತ್ತು ಎನ್ನುವುದರಲ್ಲಿ ಕಿಂಚಿತ್ತೂ ಅನುಮಾನವಿಲ್ಲ. ಅಂದು ರಾತ್ರಿ ಮೀನಾ ಮೇಡಂ ಅವರ ಮನೆಯಲ್ಲಿ ತಂಗಿದ್ದು ಮರುದಿನ ಜನಸಂಗಿಗೆ ಹೋದೆವು. ಅಲ್ಲಿ ಕೂಲಿಕಾರರು 40 ದಿನ ಕೆಲಸ ಮಾಡಿದ್ದರೂ ಕೂಲಿ ಹಣ ಕೊಟ್ಟಿರಲಿಲ್ಲ. ಅಂತಹ ಸಂದರ್ಭದಲ್ಲಿ ಯಾವ ರೀತಿ ಕೂಲಿ ಹಣ ವಸೂಲಿ ಮಾಡಬೇಕೆಂದು ಸವಿವರವಾಗಿ ಅಂಬೂಬಾಯಿ, ದೇವಾನಂದ್ ತಿಳಿಸಿದರು. ಅದೇ ಗ್ರಾಮದ ಜಗದೀಶ ಎಂಬ ಯುವಕನಿಗೆ ಕೆಲಸ ಮಾಡಿಸುವ ಜವಾಬ್ದಾರಿಯನ್ನು ಜನವಾದಿ ಮಹಿಳಾ ಸಂಘಟನೆ ವಹಿಸಿತ್ತು. ಆತನೂ ಅಷ್ಟೇ ಮುತುವರ್ಜಿಯಿಂದ ಮೇಲ್ವಿಚಾರಣೆ ನೋಡಿಕೊಳ್ಳುತ್ತಿದ್ದ. ರಾತ್ರಿ ಒಂಭತ್ತು ಗಂಟೆ ಬಸ್ಸಿಗೆ ಗುಲ್ಬರ್ಗಕ್ಕೆ ವಾಪಸಾದೆವು. ಲೀಲಾ ಮೇಡಂ ಅವರ ಮನೆಯಲ್ಲಿ ಉಳಿದುಕೊಂಡೆವು. ಗುಲ್ಬರ್ಗಾ ಮತ್ತು ಬೀದರ್ ಜಿಲ್ಲೆಗಳಲ್ಲಿ ಉದ್ಯೋಗ ಖಾತರಿ ಯೋಜನೆಯನ್ನು ಜಾರಿಗೊಳಿಸುವಲ್ಲಿ ಜನವಾದಿ ಮಹಿಳಾ ಸಂಘಟನೆ ಯಾವ ರೀತಿ ಸಂಘಟಿತ ಯೋಜನೆಗಳನ್ನು ರೂಪಿಸಿದೆ, ಯೋಜನೆಯ ಅನುಷ್ಠಾನದ ಏಳುಬೀಳುಗಳೇನು ಎಂಬುದನ್ನು ಮೀನಾಕ್ಷಿ ನನಗೆ ಮತ್ತು ಗೀತಾ ಅವರಿಗೆ ವಿಷದವಾಗಿ ವಿವರಿಸಿದರು. ಬೀದರ್, ಗುಲ್ಬರ್ಗಾ ಜಿಲ್ಲೆಗಳ ಅನುಭವದ ಆಧಾರದಲ್ಲಿ ಕೋಲಾರ ಜಿಲ್ಲೆಯಲ್ಲಿ ಈ ಯೋಜನೆಯನ್ನು ಯಶಸ್ವಿಯಾಗಿ, ಸಂಘಟನಾತ್ಮಕವಾಗಿ ಅನುಷ್ಠಾನಗೊಳಿಸುವ ಚಿಂತನೆ ನಡೆಸಿದವು.

– ಎಸ್. ಆಶಾ

..........ಬಾಹ್ಯಾಕಾಶ ಸಂಸ್ಥೆ ಇಸ್ರೋ ಮತ್ತೊಂದು ಹೆಜ್ಜೆ

ಪುಟ 16 ರಿಂದ

ಭಾರತೀಯ ಬಾಹ್ಯಾಕಾಶ ಸಂಸ್ಥೆಯ ಅಂಗ ಸಂಸ್ಥೆಗಳಲ್ಲಿ ಒಂದಾಗಿದ್ದು ಉಪಗ್ರಹ ತಂತ್ರಜ್ಞಾನದಲ್ಲಿ ಮುಂಚೂಣಿಯಲ್ಲಿರುವ ಕೇಂದ್ರ. ಎಲ್ಲ ಭಾರತೀಯ ಉಪಗ್ರಹಗಳ ವಿನ್ಯಾಸ, ತಯಾರಿಕೆ, ಜೋಡಣೆ, ಪರೀಕ್ಷಣೆ ಹಾಗೂ ಉಡಾವಣಾ ಪೂರ್ವ ಮತ್ತು ಉಡಾವಣಾ ನಂತರದ ಕಾರ್ಯಯೋಜನೆಗಳು ಈ ಕೇಂದ್ರದ ಮುಖ್ಯ ಕಾರ್ಯಗಳಾಗಿವೆ. ಇದುವರೆಗೆ 45 ಉಪಗ್ರಹಗಳನ್ನು ಈ ಸಂಸ್ಥೆಯು ತಯಾರಿಸಿದ್ದು, ಇದರಲ್ಲಿ ಸಂಪರ್ಕ, ದೂರಸಂವೇದಿ ಉಪಗ್ರಹಗಳಲ್ಲದೆ ವೈಜ್ಞಾನಿಕ ಪ್ರಯೋಗಗಳಿಗೆ ಮೀಸಲಾದ ಉಪಗ್ರಹಗಳೂ ಸೇರಿವೆ.

ಪ್ರಥಮ ಬಾರಿಗೆ ಪಿಎಸ್‌ಎಲ್‌ವಿ ಮಾದರಿಯ ರಾಕೆಟ್‌ನ್ನು ಇಸ್ರೋ ಸಂಸ್ಥೆಯು 1994ರಲ್ಲಿ ಯಶಸ್ವಿಯಾಗಿ ಹಾರಿಬಿಟ್ಟಿತ್ತು. ಅಲ್ಲಿಂದೀಚೆಗೆ ಒಟ್ಟು 13 ಬಾರಿ ಉಡಾವಣೆಗೊಂಡಿರುವ ಈ ಮಾದರಿಯ ರಾಕೆಟ್‌ಗಳು ಒಂದು ಬಾರಿಯಷ್ಟೆ ವಿಫಲವಾಗಿವೆ. ಈ ವಾಹನಗಳ ಯಶಸ್ಸಿನಿಂದಾಗಿ ಭಾರತವು ಹಲವಾರು ಭೂಮಿ-ಸರ್ವೇಕ್ಷಣಾ ಉಪಗ್ರಹಗಳನ್ನು ಉಡಾವಣೆ ಮಾಡಲು ಸಾಧ್ಯವಾಗಿದೆ. ಭೂಮಿ-ಸರ್ವೇಕ್ಷಣಾ ಉಪಗ್ರಹಗಳು ನಮಗೆ ಅಗಾಧ ಪ್ರಮಾಣದಲ್ಲಿ ಉಪಯುಕ್ತವೆನಿಸಿವೆ. ಬೆಳೆ ವಿಸ್ತೀರ್ಣದ ಅಂದಾಜು ಲೆಕ್ಕವನ್ನು ಉತ್ತಮವಾಗಿ ನೀಡುತ್ತಿವೆ, ಬರಪೀಡಿತ ವಲಯಗಳ ಗುರುತು ಹಚ್ಚುವುದು, ಅರಣ್ಯ ನಾಶ ಕುರಿತ ಮಾಹಿತಿ, ನೈಸರ್ಗಿಕ ವಿಕೋಪ ಪರಿಹಾರ ಕಾರ್ಯಗಳಿಗೆ ಮಾಹಿತಿ ನೀಡುತ್ತಿವೆ.

ಪಿಎಸ್‌ಎಲ್‌ವಿ ಮಾದರಿಯ ರಾಕೆಟ್‌ಗಳು ಭಾರತದ ಉಪಗ್ರಹ ಉಡಾವಣೆಯಲ್ಲಿ ಬೆನ್ನೆಲುಬಾಗಿದ್ದರೂ, ಜಾಗತಿಕ ಉಪಗ್ರಹ ಉಡಾವಣೆ ಮಾರುಕಟ್ಟೆಯಲ್ಲಿ ಭಾರತವಿನ್ನೂ ಅಂಬೆಗಾಲು ಇಡುತ್ತಿದೆ. ಏಕೆಂದರೆ, ಯೂರೋಪಿನ ಏರಿಯಾನ್ 5 ರಂತಹ ರಾಕೆಟ್‌ಗಳು ಅಗಾಧ ಭಾರದ ಸಂವಹನ ಉಪಗ್ರಹಗಳನ್ನು ಹೊತ್ತೊಯ್ಯಬಲ್ಲ ಸಾಮರ್ಥ್ಯ ಹೊಂದಿವೆ. ಇಂತಹ ಮಾರುಕಟ್ಟೆ ವ್ಯಾಪ್ತಿಯಲ್ಲಿ ಭಾರತದ ಪಿಎಸ್‌ಎಲ್‌ವಿ ಮತ್ತು ಜಿಎಸ್‌ಎಲ್‌ವಿ (ಭೂ-ಸ್ಥಿರ ಉಪಗ್ರಹ ಉಡಾವಣಾ ವಾಹನ) ರಾಕೆಟ್‌ಗಳು ಸ್ಪರ್ಧಿಸಲಾರವು. ಅತಿ ಹೆಚ್ಚು ತೂಕ ಹೊರುವ ಮತ್ತು ಅತ್ಯಾಧುನಿಕ ಗುಣಮಟ್ಟದ ರಾಕೆಟ್‌ಗಳು ಅವಶ್ಯವಿರುವ ಸ್ಪರ್ಧಾತ್ಮಕ ಮಾರುಕಟ್ಟೆಗೆ ಭಾರತ ಪ್ರವೇಶಿಸಬೇಕಾದರೆ ಇನ್ನೆರಡು ವರ್ಷಗಳಲ್ಲಿ ಸಿದ್ಧಗೊಳ್ಳುವ ಜಿಎಸ್‌ಎಲ್‌ವಿ ಮಾರ್ಕ್-3 ಯಶಸ್ಸುಗೊಂಡ ನಂತರವಷ್ಟೆ ಸಾಧ್ಯ.

ಚಂದ್ರಯಾನ - 1 :

ಇದೇ ವರ್ಷದ ಕೊನೆಯ ಭಾಗದಲ್ಲಿ 500 ಕೆಜಿ ತೂಕದ ಉಪಗ್ರಹವನ್ನು ಉಡಾವಣೆ ಮಾಡಲು ಇಸ್ರೋ ಸಿದ್ದತೆ ನಡೆಸಿದೆ. ಚಂದ್ರನಲ್ಲಿರುವ ನೆಲದ ಮೇಲ್ಮೈಯನ್ನು ಶೋಧಿಸಿ ಅದರ ಚಿತ್ರಣ ಕುರಿತಂತೆ ಮಾಹಿತಿ ಮತ್ತು ಚಿತ್ರಗಳನ್ನು ತರಲು ಚಂದ್ರಯಾನ - 1 ಎಂಬ ಹೆಸರಿನ ಯೋಜನೆಯನ್ನು ಇಸ್ರೋ2 ರೂಪಿಸಿದೆ. ○

ಜನಶಕ್ತಿ ಕನ್ನಡ ವಾರಪತ್ರಿಕೆ

ಔಷಧಿಗಳು ಜನಾರೋಗ್ಯಕ್ಕೋ ಅಥವಾ ಔಷಧಿ ಕಂಪನಿಗಳ ಲಾಭಕ್ಕೋ?

ಭಾರತದಂತಹ ದೇಶಗಳ ಔಷಧಿ ನೀತಿಯ ಮೂಲ ಉದ್ದೇಶ ಏನಿರಬೇಕು? ಆ ಉದ್ದೇಶ ಏಕೆ ಈಡೇರುತ್ತಿಲ್ಲ? ಔಷಧಿ ತಯಾರಿಕೆಯ 'ರಾಜಕೀಯ' ದ ಬಗ್ಗೆ ಒಂದು ಲೇಖನ

ಆಧುನಿಕ ಔಷಧಿಗಳು ಆರೋಗ್ಯ ಸಾಧನೆಯಲ್ಲಿ ನಿರ್ಣಾಯಕ ಪಾತ್ರವಹಿಸಿವೆ. ಸರಕಾರಗಳು ಜನರಿಗೆ ಔಷಧಿಗಳನ್ನು ದೊರಕಿಸಿಕೊಡಬೇಕಿದೆ. ಇಂದು ಔಷಧಿ ತಯಾರಿಕೆ ಒಂದು ಲಾಭದಾಯಕದ ಉದ್ಯಮವಾಗಿದೆ. ಆದರೆ ಔಷಧಿ ಉದ್ಯಮ ಔಷಧಿಗಳನ್ನು ತಯಾರಿಸಿ ಅಗಾಧ ಲಾಭ ಗಳಿಸುತ್ತ ಬಂದಿದೆ. ಇದರಿಂದ ಜನಸಾಮಾನ್ಯರು ಔಷಧಿಗಳಿಗೆ ಹೆಚ್ಚು ಹಣ ತೆರುವಂತಾಗಿದೆ. ಔಷದಿ ಉದ್ಯಮಕ್ಕೆ ಲಾಭ ಅಗತ್ಯ. ಆದರೆ ಮಾಡುವುದರಿಂದ ಜನರ ಮೇಲೇನು ಪರಿಣಾಮವಾಗುತ್ತದೆ?

ಔಷಧಿ ಉದ್ಯಮ ಅಗಾಧ ಲಾಭ ಸೂಪರ್ ಪ್ರಾಫಿಟ್‌ಗಳಿಸಲು ಹಲವಾರು ತಂತ್ರಗಳನ್ನು ಹೂಡಿದರೆ, ಸರಕಾರವೂ ಔಷಧಿ ಕಂಪನಿಗಳಿಗೆ ಹೆಚ್ಚು ಲಾಭಗಳಿಸಲು ಸಹಾಯಮಾಡುತ್ತಿದೆ. ಪ್ರಜಾಪ್ರಭುತ್ವದ ಹಿನ್ನೆಲೆಯಲ್ಲಿ ಈ ವಿಷಯದ ಚರ್ಚೆ ಅಗತ್ಯವಾಗುತ್ತದೆ

ಔಷಧಿ ನೀತಿ

ಭಾರತದಂತಹ ಬೃಹತ್ ದೇಶದಲ್ಲಿ ಔಷಧಿ ಉದ್ಯಮ ಬೆಳೆದು ನಿಂತಿದೆ. ಭಾರತದ ಕಂಪನಿಗಳಿಗೆ ಬಹುರಾಷ್ಟ್ರೀಯ ಕಂಪನಿಗಳು ಪೈಪೋಟಿ ಒಡ್ಡಿವೆ. ಜನರಿಗೆ ಒಳ್ಳೆಯ ಔಷಧಿಗಳು ಬೇಕೆಂದರೆ ಔಷಧಿ ನೀತಿ ಜನಪರವಾಗಿರಬೇಕು. ಜನರಿಗೆ ಯಾವ ಔಷಧಿಗಳು ಬೇಕು, ಎಷ್ಟು ಬೆಲೆಯಲ್ಲಿ ದೊರಕಿದರೆ ಜನರು ಕೊಂಡುಕೊಳ್ಳಲು ಸಾಧ್ಯ, ಔಷಧಿಗಳ ಗುಣಮಟ್ಟ, ದೊರಕುವಿಕೆ ಮುಂತಾದವುಗಳ ಆಧಾರದ ಮೇಲೆ ಔಷಧಿಗಳು ರೂಪುಗೊಳ್ಳಬೇಕು.

ಭಾರತದಲ್ಲಿ ಮೊಟ್ಟ ಮೊದಲಬಾರಿಗೆ ಔಷಧಿ ನೀತಿ ರೂಪುಗೊಂಡಿದ್ದು 1970 ರಲ್ಲಿ. ಅದು ಕೇವಲ ಔಷ... ೇಲೆ ನೀತಿ ಯಾಗಿದ್ದಿತ್ತು. 1974 ರಲ್ಲಿ ಸಂಸತ್ತಿನಲ್ಲಿ ಭಾರತದಲ್ಲಿ ಬಹುರಾಷ್ಟ್ರೀಯ ಔಷಧಿ ಕಂಪನಿಗಳು ಔಷಧಿ ಕ್ಷೇತ್ರದ ಮೇಲೆ ಅಹಿತಕರ ಪರಿಣಾಮ ಬೀರಿದ್ದ ಬಗ್ಗೆ ಚರ್ಚೆ ಎದ್ದಿತ್ತು. ಸರಕಾರ ಜೈಸುಖಲಾಲ್ ಹಾಥಿಯಂತಹ ತಜ್ಞರ ಸಮಿತಿಯನ್ನು ನೇಮಿಸಿತು. ಹಾಗು ಔಷಧಿ ಕ್ಷೇತ್ರದ ಬಗ್ಗೆ ವರದಿ ಸಲ್ಲಿಸಲು ನೇಮಕ ಮಾಡಿತು. ಈ ಸಮಿತಿ 1975 ರಲ್ಲಿ ಭಾರತದ ಔಷಧಿಕ್ಷೇತ್ರದ ಬಗ್ಗೆ ವೈಜ್ಞಾನಿಕ ವರದಿ ನೀಡಿತು. ಹಾಗೂ ಭಾರತದ ಔಷಧಿ ಕ್ಷೇತ್ರವನ್ನು ಹೇಗೆ ಸುಧಾರಿಸಿ ಜನಪರ ಔಷಧಿ ನೀತಿಯನ್ನು ಜಾರಿ ಗೊಳಿಸಬಹುದೆಂದು ತಿಳಿಸಿತು. 1978ರಲ್ಲಿ ಔಷಧಿನೀತಿ ಜಾರಿಗೊಂಡಿತು. ಆದರೆ ಅದರಲ್ಲಿ ಹಾಥೀ ವರದಿಯ ಮುಖ್ಯ ಶಿಫಾರಸುಗಳನ್ನು ಜಾರಿಗೆ ತಂದಿರಲ್ಲಿಲ್ಲ. ನಂತರದಲ್ಲಿ 1986, 1994, 2002ರ ಔಷಧಿ ನೀತಿಯು ಜನಪರವಾಗದೇ ಉದ್ಯಮದ ಪರವಾಗಿದ್ದಿತು. ಅಂದರೆ ಜನಸಾಮಾನ್ಯರ ಅಗತ್ಯತೆಯ ಬದಲು ಔಷಧಿ ಕಂಪನಿಗಳ ಹಿತದೃಷ್ಟಿಗೆ ಮಹತ್ವ ನೀಡಿತ್ತು.


ಭಾರತದಲ್ಲಿ ಔಷಧಿ ನೀತಿಯನ್ನು ಆರೋಗ್ಯ ಕ್ಷೇತ್ರದ ಬದಲು ರಾಸಾಯನಿಕ ಹಾಗೂ ಗೊಬ್ಬರ ಕ್ಷೇತ್ರಕ್ಕೆ ಸಂಬಂಧಿಸಿದ ಸಚಿವಾಲಯ ರೂಪಿಸುತ್ತದೆ. ಆದ್ದರಿಂದ ಔಷಧಿನೀತಿ ಉದ್ಯಮಕ್ಕೆ ಹೆಚ್ಚು ಗಮನ ಹರಿಸುತ್ತಾ ಜನಾರೋಗ್ಯವನ್ನು ಕಡೆಗಣಿಸುವ ಸಾಧ್ಯತೆ ಇದೆ. ಉದ್ಯಮದ ಪರವಾದ ನೀತಿ ಉದ್ಯಮದ ಲಾಭ, ನಷ್ಟಗಳ ಕಡೆಗೆ ಗಮನ ಹರಿಸುತ್ತದೆ ಹೊರತು ಜನರ ಆರೋಗ್ಯದ ಕಡೆಗಲ್ಲ.

ಔಷಧಿನೀತಿಯಲ್ಲಿ ಹಲವಾರು ತಿದ್ದುಪಡಿಗಳನ್ನು ಮಾಡಿ ಜನಾರಾರೋಗ್ಯಕ್ಕೆ ಪೂರಕವಾಗುವಂತೆ ಮಾಡಬಹುದಾಗಿದೆ. ಆದರೆ ಅದರ ಬದಲು ಅರ್ಥವಿಲ್ಲದ 'ಮ್ಯಾಜಿಕಲ್ ರೆಮಿಡೀಸ್ ಆ್ಯಕ್ಟ್'ನ್ನು ಇನ್ನೂ ಉಳಿಸಿಕೊಂಡಿದೆ. ಇದರ ಪ್ರಕಾರ ಕ್ಷಯ, ಕುಷ್ಟರೋಗ, ಟೈಫಾಯಿಡ್, ಗುಹ್ಯರೋಗಗಳು, ಗುಣಪಡಿಸಲಾರದ ರೋಗಗಳು. ವಾಸ್ತವವೆಂದರೆ ಈ ಎಲ್ಲಾ ರೋಗಗಳನ್ನು ಗುಣಪಡಿಸಬಹುದಾಗಿದೆ.

ವಿಶ್ವ ಆರೋಗ್ಯ ಸಂಸ್ಥೆ ಅಗತ್ಯ ಔಷಧಿಗಳ ಪಟ್ಟಿಯನ್ನು 1976ರಲ್ಲಿ ತಯ್ಯಾರಿಸಿ ಆ ಔಷಧಿ ಪಟ್ಟಿಯ ಆಧಾರದ ಮೇಲೆ ಎಲ್ಲಾ ದೇಶಗಳು ತಮ್ಮ ಅಗತ್ಯತೆಗೆ ತಕ್ಕಂತೆ ಪಟ್ಟಿ ತಯಾರಿಸಿ ಆ ಔಷಧಿಗಳನ್ನು ಜನರಿಗೆ ದೊರಕುವಂತೆ ಮಾಡಲು ಕರೆ ನೀಡಿದೆ. ಇದರ ಉದ್ದೇಶ ಕಡಿಮೆ ಬೆಲೆಯ ಉಪಯುಕ್ತ ಔಷಧಿಗಳನ್ನು ಜನರಿಗೆ ದೊರಕಿಸಿ ಕೊಡುವುದು. ಆದರೂ ಮಾರುಕಟ್ಟೆಯಲ್ಲಿ ಅನಗತ್ಯ ಔಷಧಿಗಳು ಸುಲಭವಾಗಿ ದೊರಕುತ್ತಿದ್ದು ಅಗತ್ಯ ಔಷಧಿಗಳ ಕೊರತೆಯಿದೆ. ಅನಗತ್ಯ ಔಷಧಿಗಳನ್ನು ತೆಗೆದು ಹಾಕಲು ಸರಕಾರ ಪ್ರಾಮಾಣಿಕ ಪ್ರಯತ್ನ ಮಾಡುತ್ತಿಲ್ಲ. ಕಾರಣ ಔಷಧಿ ಕಂಪನಿಗಳ (ಬಹುರಾಷ್ಟ್ರೀಯ) ಒತ್ತಡ. ಅನಗತ್ಯ ಔಷಧಿಗಳಲ್ಲಿ ಮುಖ್ಯವಾದವು ಸಮ್ಮಿಶ್ರ ಔಷಧಿಗಳು. ಉದಾ: ಎಲ್ಲಾ ವಿಟಮಿನ್, ಮಿನರಲ್ ಸಂಮಿಶ್ರ ಔಷಧಿ, ಎರಡು- ನೋವುನಿವಾರಕ, ಆಂಟಿಬಯಾಟಿಕ್‌ನ ಸಮ್ಮಿಶ್ರ ಔಷಧಿ, ಅಗತ್ಯ ಔಷಧಿಗಿಂತ ಅನಗತ್ಯ ಔಷಧಿಗಳೇ ದುಬಾರಿ. ವಿಪರ್ಯಾಸವೆಂದರೆ ಔಷಧಿ ಕಂಪನಿಗಳು ಅಗತ್ಯ ಔಷಧಿಗಳನ್ನು ತಯಾರಿಸಿದರೆ ಸರಕಾರ ಆ ಔಷಧಿಗಳ ಗರಿಷ್ಟ ಲಾಭಕ್ಕೆ ನಿಯಂತ್ರಣ ತರುತ್ತದೆ. ಅನಗತ್ಯ ಔಷಧಿಗಳ ಮೇಲೆ ಗರಿಷ್ಟ ಲಾಭದ ಮೇಲೆ ನಿಯಂತ್ರಣವಿಲ್ಲ!

2007 ರಲ್ಲಿ ಔಷಧಿ ನೀತಿ ರೂಪುಗೊಂಡಿದೆ. ಆದರೆ ಅದು ಕರಡು ರೂಪದಲ್ಲಿದೆ, ಬಿಡುಗಡೆಯಾಗಿಲ್ಲ. ಅದರೆ ಈ ಔಷಧಿನೀತಿಯು ಉದ್ಯಮದ ಪರವಾಗಿದೆ ಎಂದು ತಿಳಿದುಬಂದಿದೆ!


ಔಷಧಿ ಕಂಪನಿಗಳ ತಂತ್ರ



ಔಷಧಿ ತಯಾರಿಕೆ ಉದ್ಯಮ, ಎರಡನೇ ಅತಿ ಲಾಭದಾಯಕ ಉದ್ಯಮವೆಂದು ಹೇಳಬಹುದು. ಔಷಧಿ ಮೇಲೆ ಲಾಭಗಳಿಕೆಯನ್ನು ಹೆಚ್ಚಿಸಿಕೊಳ್ಳಲು ಅವು ಅನೇಕ ಕಸರತ್ತುಗಳನ್ನು ಮಾಡುತ್ತಿವೆ. ಉದಾ:

1) ಔಷಧಿಕಂಪನಿಗಳು ತಾವು ತಯಾರಿಸಿದ ಔಷಧಿಗಳಿಗೆ ವಿಶೇಷ ಗುಣವಿದೆಯೆಂದು ಹೇಳುತ್ತವೆ. ಉದಾ: ಬಿ.ಕಾಂಪ್ಲೆಕ್ಸ್/ಮಟ್ಟಿ ವಿಟಮಿನ್/ಆಂಟಿ ಆಕ್ಸಿಡೆಂಟ್‌ಗಳನ್ನು ಸಿಸ್ಟ್‌ಕ್ಕಗ ಉಪಯೋಗಿಸುಲು ಆದೇಶಿಸುತ್ತವೆ. ಆದರೆ ಇದು ಸೂಕ್ತವಲ್ಲ. ವಿಟಮಿನ್‌ಗಳ ಕೊರತೆಯಿಂದ ನಿಶ್ಶಕ್ತಿ ಉಂಟಾಗಬಹುದು. ಆದರೆ ವಿಟಮಿನ್ ಕೊರತೆ ಇಲ್ಲದ ವ್ಯಕ್ತಿಗೆ ವಿಟಮಿನ್ ಕೊಡುವುದರಿಂದ ವ್ಯಕ್ತಿಯ ಶಕ್ತಿ ಹೆಚ್ಚುವುದಿಲ್ಲ. ಈ ರೀತಿ ಅನೇಕ ತಪ್ಪು ಮಾಹಿತಿ ನೀಡುತ್ತವೆ. ಆದರೆ ಔಷಧಿಯ ಅಡ್ಡ ಪರಿಣಾಮ ಜಾಗರೂಕತೆ ನಿಯಮಗಳ ಬಗ್ಗೆ ಯಾವ ಮಾಹಿತಿಯನ್ನು ನೀಡುವುದಿಲ್ಲ.

2) ಔಷಧಿಗಳನ್ನು ಜಾಹಿರಾತು ಪಡಿಸಿ ಮಾರುತ್ತವೆ. ಉದಾ: ಮದರ್ ಕ್ಯಾಲ್ಸಿಯಂ. ಇದರಿಂದ ಅನೇಕ ಅಡ್ಡ ಪರಿಣಾಮ ಗಳುಂಟಾಗುವುದರ ಬಗ್ಗೆ ಮಾಹಿತಿ ನೀಡುವುದೇ ಇಲ್ಲ. ವೈದ್ಯರಿಗೆ ಸಮಯಾಭಾವವಿರುವುದರಿಂದ ಔಷಧಿಯ ವೈಜ್ಞಾನಿಕ ಮಾಹಿತಿ ಬಗ್ಗೆ ವೈದ್ಯರು ಗಮನ ಹರಿಸುವುದಿಲ್ಲ. ಇದರಿಂದಾಗಿ ಕೆಲವು ವೈದ್ಯರು ಶಕ್ತಿ ಹೆಚ್ಚಿಸಲು ವಿಟಮಿನ್‌ಗಳನ್ನು, ಜೀರ್ಣಶಕ್ತಿ ಹೆಚ್ಚಿಸಲು ಕಿಣ್ವಗಳನ್ನು ಹಾಗೂ ಲೈಂಗಿಕ ಶಕ್ತಿ ಹೆಚ್ಚಿಸಲು ಟೆಸ್ಟಾಸ್ಟಿರೋನ್‌ಗಳನ್ನು ಬರೆದು ಕೊಡುತ್ತಾರೆ.



ಡಾ. ಪ್ರಕಾಶ್ ಸಿ ರಾವ್
ಅಧ್ಯಕ್ಷರು,
ಜನಾರೋಗ್ಯ ಆಂದೋಲನ

ಔಷಧಿಯನ್ನು ಪರಿಚಯಿಸುವಾಗ ಒತ್ತಡದ ತಂತ್ರವನ್ನು ಉಪಯೋಗಿಸುತ್ತಾರೆ.

"ಬೆಂಗಳೂರಿನ ಎಲ್ಲ ವೈದ್ಯರು ಉಪಯೋಗಿಸುತ್ತಾರೆ, ನೀವೇಕೆ ಉಪಯೋಗಿಸಬಾರದು"- ವಿಟಮಿನ್ 'ಇ' ಔಷಧಿಯನ್ನು ಪರಿಚಯಿಸುತ್ತ.

"ಯು.ಎಸ್.-ಎಫ್ ಡಿ ಎ ಈ ಔಷಧಿಯನ್ನು ಉಪಯೋಗಿಸಲು ಆದೇಶ ನೀಡುತ್ತದೆ"

"ಈ ಔಷಧಿ ಡ್ರಗ್ ಆಫ್ ಚಾಯ್ಸ್"- ಸಮಿಶ್ರ ಬಿ.ಪಿ.ಔಷಧಿ ಕುರಿತು

ಈ ಎಲ್ಲ ಒತ್ತಡದ ತಂತ್ರಕ್ಕೆ ಮಣಿದು ವೈದ್ಯರು ಔಷಧಿ ಬರೆದುಕೊಡುತ್ತಾರೆ. ಹೊಸ ಔಷಧಿಯನ್ನು ಮಾರುಕಟ್ಟೆಗೆ ಪರಿಚಯಿಸುವಾಗ ವೈದ್ಯರಿಗೆ ಉಡುಗೊರೆ (ಪೆನ್ನು, ಪೇಪರ್‌ವೇಟ್ ಇತ್ಯಾದಿ) ಕೊಡುತ್ತಾರೆ. ಕೆಲವೊಮ್ಮೆ ಊಟದ ಕೂಟಕ್ಕೆ ಆಹ್ವಾನಿಸಿ ವೈದ್ಯರನ್ನು ಸೆಳೆಯುತ್ತಾರೆ. ಇವನ್ನು ಮುಂದುವರೆದ ವೈದ್ಯಕೀಯ ಶಿಕ್ಷಣವೆಂದು ಔಷಧಿ ಕಂಪನಿಗಳು ಕರೆದು ತಮ್ಮ ಔಷಧಿ ಪ್ರಚಾರ ಮಾಡುತ್ತಾರೆ. ಆದರೆ ಈ ಗಿಮಿಕ್‌ಗಳಿಂದ ವೈದ್ಯರು ಪ್ರಭಾವಿತರಾಗುತ್ತಾರೆ. ಇನ್ನು ಕೆಲವು ಕಂಪನಿಗಳು ವೈದ್ಯರಿಗೆ ಕುಟುಂಬ ಸಮೇತ ಬೇರೆ ದೇಶಕ್ಕೆ ರಜೆಗೆ ಹೋಗಲು ವ್ಯವಸ್ಥೆಯನ್ನು ಮಾಡುತ್ತಾರೆ. ಇಲ್ಲಿ ಗಮನಿಸ ಬೇಕಾದ ವಿಷಯವೆಂದರೆ ಈ ಎಲ್ಲ ತಂತ್ರಗಳನ್ನು ಅನಗತ್ಯ ಔಷಧಿಗಳನ್ನು ಪರಿಚಯಿಸಲು ಮಾಡುತ್ತಾರೆ.

3) ಔಷಧಿ ಕಂಪನಿಗಳು ಕೆಲವು ರೋಗಗಳಿಗೆ ಉದಾ: ಆತಂಕ, ಪುರುಷರ ಲೈಂಗಿಕ ಸಮಸ್ಯೆ, ಮಹಿಳೆಯರಲ್ಲಿ ಮುಟ್ಟಿನ ಸಮಸ್ಯೆಗೆ ಹೆಚ್ಚು ಕಾಲ ಔಷಧಿಗಳನ್ನು ಉಪಯೋಗಿಸಲು ಸೂಚಿಸುತ್ತವೆ. ವೈದ್ಯರೂ ಈ ಆದೇಶವನ್ನು ಚಾಚೂ ತಪ್ಪದೆ ಪಾಲಿಸುತ್ತಾರೆ. ದೀರ್ಘಕಾಲದವರೆಗೆ ಔಷಧಿಗಳನ್ನು ಉಪಯೋಗಿಸುವ ಅಗತ್ಯವಿಲ್ಲ. ಆದರೆ ಇದರಿಂದ ಔಷಧಿ ಕಂಪನಿಗಳ ಲಾಭವಂತೂ ಹೆಚ್ಚುತ್ತದೆ!

4) ಔಷಧಿ ಕಂಪನಿಗಳು ಅಗತ್ಯ ಔಷಧಿಗಳನ್ನು ತಯಾರಿಸದೇ ಲಾಭದಾಯಕ ಅನಗತ್ಯ ಔಷಧಿಗಳನ್ನು (ಗುರುತುಸೂಚಕ) ಔಷಧಿಗಳನ್ನು ತಯಾರಿಸುತ್ತವೆ. ಕೆಲವು ಕಂಪನಿಗಳು ಜಾತಿ ಸೂಚಕ ಔಷಧಿಗಳನ್ನು ತಯಾರಿಸುತ್ತವೆ. ಆದರೆ ಈ ಜಾತಿ ಸೂಚಕ ಔಷಧಿಗಳು ದುಬಾರಿ. ಔಷಧ ಕಂಪನಿಗಳು ಜನರಿಗೆ ಜಾತಿಸೂಚಕ ಔಷಧಿಗಳನ್ನು ದೊರಕಿಸಿಕೊಡುತ್ತೇವೆಂದು ಹೇಳುತ್ತ ಲಾಭ ಮಾಡುವುದನ್ನು ಮರೆಯುವುದಿಲ್ಲ.

ಅಗತ್ಯ ಔಷಧಿಗಳು

ವಿಶ್ವ ಆರೋಗ್ಯ ಸಂಸ್ಥೆ ಅಗತ್ಯ ಔಷಧಿಗಳ ಪಟ್ಟಿಯನ್ನು 1977 ರಲ್ಲಿಯೇ ಜಾರಿ ಮಾಡಿದೆ. ಈ ಪಟ್ಟಿಯನ್ನು ಆಧರಿಸಿ ತಮ್ಮ ಅಗತ್ಯ ಔಷಧಿ ಪಟ್ಟಿಯನ್ನು ತಯಾರಿಸಿಕೊಳ್ಳಲು ಎಲ್ಲ ದೇಶಗಳಿಗೆ ಕರೆ ಕೊಟ್ಟಿದೆ. ಪ್ರಾರಂಭ ದಲ್ಲಿ ಈ ಪಟ್ಟಿಯಲ್ಲಿ ಸುಮಾರು 250 ಔಷದಿಗಳಿದ್ದವು. ಈಗಲೂ 300 ಕ್ಕೂ ಕಡಿಮೆ ಔಷಧಿಗಳಿವೆ. ಈ ಔಷಧಿಗಳು ಸಮಾಜದಲ್ಲಿನ ಪ್ರತಿಶತ 95 ರಷ್ಟು ಆರೋಗ್ಯ ಸಮಸ್ಯೆಗೆ ಪರಿಹಾರ ನೀಡುತ್ತವೆ. ಈ ಪಟ್ಟಿಯನ್ನು ಎರಡು ವರ್ಷಕ್ಕೊಮ್ಮೆ ಪರಿಷ್ಕರಿಸಲಾಗುವುದು.


ಅಗತ್ಯ ಔಷಧಿಗಳು ವೈಜ್ಞಾನಿಕವಾಗಿ ರುಜುವಾತಾದ, ಕಡಿಮೆ ಅಡ್ಡ ಪರಿಣಾಮಗಳುಳ್ಳ, ಸ್ಥಳೀಯವಾಗಿ ತಯಾರಿಸಲ್ಪಟ್ಟ ಸುಲಭವಾಗಿ ದೊರೆಯುವ, ಸುಲಭವಾಗಿ ಶೇಖರಿಸಲ್ಪಡಲು ಸಾಧ್ಯವಾದ, ಒಂದೇ ಘಟಕದ ಜಾತಿಸೂಚಕ ಔಷಧಿಗಳು. ಸರ್ಕಾರಿ ಆಸ್ಪತ್ರೆಗಳು ಈ ಔಷಧಿಗಳನ್ನೇ ರೋಗಿಗಳಿಗೆ ಕೊಟ್ಟಲ್ಲಿ ಔಷಧಿ ವೆಚ್ಚ ಕಡಿಮೆಮಾಡಬಹುದು.

ಜಾತಿ ಸೂಚಕ ಅಗತ್ಯ ಔಷಧಿ-
ಪ್ಯಾರಸಿಟಮಾಲ್ ಗುರುತು ಸೂಚಕ ಅಗತ್ಯ
ಔಷಧಿ - ಮೆಡೋಮಾಲ್, ಪೈರಿಜೆಸಿಕ್
ಇತ್ಯಾದಿ

5) ಔಷಧಿ ಕಂಪನಿಗಳು ಪ್ರಾರಂಭದಲ್ಲಿ ಹೆಚ್ಚು ಬೆಲೆಯಲ್ಲಿ ಔಷದಿಗಳನ್ನು ಮಾರುತ್ತವೆ. ಕ್ರಮೇಣ ಔಷಧಿ ಬೆಲೆ ಇಳಿಯುತ್ತದೆ. ಆದರೆ ಇನ್ನೂ ಕೆಲವು ಕಂಪನಿಗಳ ಬೆಲೆಗಳು ಯಾವಾಗಲೂ ಹೆಚ್ಚಾಗಿಯೇ ಇರುತ್ತದೆ. (ಬಹುರಾಷ್ಟ್ರೀಯ ಕಂಪನಿಗಳು) ಇದಕ್ಕೆ ಕಾರಣ 'ನಮ್ಮ ಔಷಧಿ ಸಂಶೋಧನೆಗೆ ತಗುಲಿದ ವೆಚ್ಚದಿಂದಾಗಿ ಔಷಧಿ ದುಬಾರಿ', ಎಂದು ಹೇಳಲಾಗುವುದು. ಆದರೆ ಇದು ಸತ್ಯವಲ್ಲ. ಔಷಧಿ ಕಂಪನಿಗಳು ಸಂಶೋಧನೆ ಮಾಡುತ್ತೇವೆ ಎಂದು ಹೇಳುತ್ತವೆ. ಔಷಧಿಯು ಮಾರುಕಟ್ಟೆಯಲ್ಲಿ ಯಾವ ಸ್ಥಾನಮಾನ ಹೊಂದಿದೆ ಎಂಬುದನ್ನು ತಿಳಿದು, ಆ ಔಷಧಿಯನ್ನು ಹೇಗೆ ಲಾಭದಾಯಕವಾಗಿ ಮಾರುವುದು ಎಂಬುದರ ಬಗ್ಗೆ ಸಂಶೋಧನೆ ಮಾಡುತ್ತವೆ. ಆ ಸಂಶೋಧನೆಗೆ ಆದಾಯದ 35 ಶೇ. ಖರ್ಚನ್ನು ಮಾಡುತ್ತವೆ. ಆ ಖರ್ಚನ್ನು ಔಷಧಿ ಉಪಯೋಗಿಸುವವರ ಮೇಲೆ ಹೇರಲಾಗುತ್ತದೆ. ಔಷಧಿ ಕಂಡು ಹಿಡಿಯಲು ಸಾಮಾನ್ಯವಾಗಿ ಔಷಧಿ ಕಂಪನಿಗಳು ಹಣ ಖರ್ಚು ಮಾಡುವುದೇ ಇಲ್ಲ. ಏಕೆಂದರೆ ಔಷಧಿಗಳು ಸಾರ್ವಜನಿಕ ಕ್ಷೇತ್ರದ

ಪುಟ 13ಕ್ಕೆ

ಕನ್ನಡಿ



ಕೆ.ಎಸ್.ವಿಮಲ

ಸತಿ ಪದ್ಧತಿ : ಕಾನೂನು ಹೇಳುವುದೇನು?

80ರ ದಶಕ ದೇಶದಲ್ಲಿ ಮಹಿಳಾ ಚಳುವಳಿ ಪ್ರಬಲವಾಗುತ್ತಿದ್ದ ಸಮಯ. ಮಹಿಳೆಯರ ಮೇಲಿನ ದೌರ್ಜನ್ಯಗಳಿಗೆ ಪ್ರತಿಕ್ರಿಯೆ, ಪ್ರತಿಭಟನೆಗಳು ತೀಕ್ಷ್ಣವಾಗಿ ಬರುತ್ತಿದ್ದ ಕಾಲವದು.

ರಾಜಸ್ತಾನದ ದೇವರಾಲದಲ್ಲಿ ಈಗಿನ್ನೂ ಜಗತ್ತಿಗೆ ಕಣ್ಣುಬಿಟ್ಟು, ಸುಂದರ ಬದುಕಿನ ಕನಸು ಕಟ್ಟಿಕೊಂಡು ಗಂಡನ ಮನೆಗೆ ಕಾಲಿರಿಸಿದ ರೂಪ್ ಕನ್ವರ್ ಎಂಬಾಕೆ ಹಿಂದುತ್ವ ವಾದದ ಕ್ರೂರ ಸಂಪ್ರದಾಯಕ್ಕೆ ಬಲಿಯಾಗಿ ತನ್ನೆಲ್ಲ ಕನಸುಗಳೊಂದಿಗೆ ಸುಟ್ಟು ಬೂದಿಯಾದಳು. ಶತಮಾನದಷ್ಟು ಹಿಂದೆ ತನ್ನ ಅಣ್ಣ ಸತ್ತಾಗ, ಅತ್ತಿಗೆಯನ್ನು "ಸತಿ" ಹೆಸರಿನಲ್ಲಿ ಜೀವಂತ ಸುಟ್ಟದ್ದನ್ನು ವಿರೋಧಿಸಿದ ರಾಜಾರಾಮ್ ಮೋಹನ್ ರಾಯ್ ರಂತಹ ವ್ಯಕ್ತಿಗಳು ಸದಾ ನಮ್ಮ ನೆನಪಿನಲ್ಲಿರಬೇಕಾದರೆ ಇಂತಹ ಕ್ರೂರ ಘಟನೆ ನಡೆಯಿತು. ಈ ಘಟನೆ ದೇಶದಾದ್ಯಂತ ಮಾನವೀಯ ಮನಸ್ಸುಗಳಿಗೆ ಪ್ರತಿಭಟನೆಗೆ ಪ್ರಚೋದನೆ ನೀಡಿದರೆ ಸಂಪ್ರದಾಯದ ಸಂಕೋಲೆಯೊಳಗೆ ಹೂತುಹೋದ ಕೆಲವು ರಜಪೂತ ಮನಸ್ಸುಗಳಿಗೆ ಇದು ತಮ್ಮ ಪರಂಪರೆಯ ರಕ್ಷಣೆಯ ಪ್ರತೀಕವೆನಿಸಿತ್ತು. ರೂಪ್ ಕನ್ವರ್‌ಳ ಸಾವು ಧರ್ಮದ ಹೆಸರಿನ ಕೊಲೆ. ಅದನ್ನು ಎಸಗಿದವರಿಗೆ ಉಗ್ರ ಶಿಕ್ಷೆಯಾಗಬೇಕೆಂದು ದೇಶದ ಮಹಿಳಾ ಸಂಘಟನೆಗಳು ಪ್ರತಿಪಾದಿಸಿದರೆ ರಾಜಸ್ತಾನದಲ್ಲಿ ಸಾಂಪ್ರದಾಯಿಕ ಉಡುಗೆಯಲ್ಲಿ ಈ ಪ್ರಕರಣದ ವಿರುದ್ಧ ನ್ಯಾಯಾಲಯದಲ್ಲಿ ವಾದ ಮಾಡಲು ಯಾವುದೇ ನ್ಯಾಯವಾದಿಗಳು ಮುಂದೆ ಬರಬಾರದೆನ್ನುವ ಎಚ್ಚರಿಗೆ ನೀಡುವ ಉದ್ದೇಶದಿಂದಲೇ 2000ಕ್ಕೂ ಹೆಚ್ಚು ರಜಪೂತ ಯುವಕರು ಮೆರವಣಿಗೆ ನಡೆಸಿದರು. ಗಂಡ ಸತ್ತ ಹೆಂಡತಿಗೆ ಬದುಕುವ ಹಕ್ಕಿಲ್ಲವೆಂದು ಪ್ರತಿಪಾದಿಸುವ ಈ ಸಂಪ್ರದಾಯಬದ್ಧರಿಗೆ ಶವದೊಂದಿಗೆ ಜೀವಂತ ವ್ಯಕ್ತಿಯನ್ನು ಕೂರಿಸಿ ಸುಟ್ಟು ಬೂದಿ ಮಾಡುವ ಕ್ರಿಯೆಯ ಬಗ್ಗೆ ಕಿಂಚಿತ್ತೂ ನೋವು, ಬೇಸರವಿರಲಿಲ್ಲ.ಅಷ್ಟೇ ಅಲ್ಲ 2 ದಶಕಗಳ ನಂತರ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನ್ಯಾಯಾಲಯ ಸಾಕ್ಷಿ, ಪುರಾವೆ(!)ಗಳ ಕೊರತೆ ಎಂದು ಅಪರಾಧಿಗಳನ್ನು ಖುಲಾಸೆ ಮಾಡಿದಾಗ, ಮೇಲ್ಮನವಿ ಸಲ್ಲಿಸದೇ ಮೌನ ಸಮ್ಮತಿಗೆ ಶರಣಾದ ರಾಜಸ್ತಾನ ಸರ್ಕಾರದ ಚುಕ್ಕಾಣಿ ಹಿಡಿದವರು ಒಬ್ಬ ರಜಪೂತ ಮಹಿಳೆ. ಸಂಪ್ರದಾಯದ ಒತ್ತಡ ಏನೇ ಇರಲಿ, ಈ ದೇಶದಲ್ಲಿ ಸತಿಯಂತಹ ಜೀವ ವಿರೋಧಿ ಕೃತ್ಯವನ್ನು ತಡೆಯಲು ಒಂದು ಕಾನೂನಂತೂ ಇದೆ. ಅದೇ ಸತಿ ಪದ್ಧತಿ ತಡೆ ಕಾನೂನು 1987.

ಈ ಕಾನೂನು ಪ್ರಕಾರ ಗಂಡ ಸತ್ತನೆಂಬ ಕಾರಣಕ್ಕೆ ಯಾವುದೇ ಧರ್ಮ, ಸಂಪ್ರದಾಯದ ಹೆಸರಿನಲ್ಲಿ ಹೆಂಡತಿ ಮಹಿಳೆಯನ್ನು ಜೀವಂತವಾಗಿ ಸುಡುವ, ಹೂಳುವುದನ್ನು ನಿಷೇಧಿಸುತ್ತದೆ ಮತ್ತು ಇದು ಕ್ರಿಮಿನಲ್ ಸ್ವರೂಪದ ಅಪರಾಧವಾಗುತ್ತದೆ.

ಈ ಕಾನೂನು 1. ಸತಿಯ ಹೆಸರಿನಲ್ಲಿ ಯಾವುದೇ ಆಚರಣೆಗಳು, ಮೆರವಣಿಗೆಗಳನ್ನು ನಿಷೇಧಿಸುತ್ತದೆ.

2. ಸತಿಯಂತಹ ಅಮಾನವೀಯ ಪದ್ಧತಿಯನ್ನು [illegible] ಸನ್ಮಾನಿಸುವ ಸಮಾರಂಭ ನಡೆಸುವುದನ್ನು ನಿಷೇಧಿಸುತ್ತದೆ.

4. ಸತಿಯ ಹೆಸರಿನಲ್ಲಿ ಟ್ರಸ್ಟ್ ರಚಿಸುವುದು, ದೇವಾಲಯ ನಿರ್ಮಿಸುವುದು, ನಿಧಿ ಸಂಗ್ರಹಿಸುವುದು, ಸತಿ ಪೂಜೆ ಮಾಡುವುದು, ಸತಿ ಹೋದವರ ಸ್ಮಾರಕ ನಿರ್ಮಿಸುವುದು ಮುಂತಾದವುಗಳನ್ನು ನಿಷೇಧಿಸುತ್ತದೆ.

ಸತಿ ಎಂದರೆ ಗಂಡ ಅಥವಾ ಯಾವುದೇ ಸಂಬಂಧಿಕರ ಅಥವಾ ಅವರಿಗೆ ಸಂಬಂಧಿಸಿದ ವಸ್ತುಗಳ ಜೊತೆ ಮಹಿಳೆಯರನ್ನು ಜೀವಂತವಾಗಿ ಸುಡುವುದು ಅಥವಾ ಹೂಳುವುದು.

ಇಂತಹ ಸುಡುವಿಕೆ, ಹೂಳುವಿಕೆ ಸ್ವಯಂ ಪ್ರೇರಿತ ಎಂದು ಹೇಳಿದರೂ ಅದು ಕಾನೂನಿನ ಪ್ರಕಾರ ಅಪರಾಧವೇ ಆಗುತ್ತದೆ.

ಕಲಮು 9ರ ಪ್ರಕಾರ ಇಂತಹ ಪ್ರಕರಣಗಳಿಗಾಗಿ ವಿಶೇಷ ನ್ಯಾಯಾಲಯವನ್ನು ರಚಿಸಲಾಗುತ್ತದೆ.

ಸತಿ ಮಂದಿರವೆಂದರೆ ಚಾವಣಿ ಇರುವ ಇಲ್ಲದಿರುವ ಅಥವಾ ಯಾವುದೇ ರೀತಿಯಲ್ಲಿ ಸತಿ ಹೋದವರ ಸ್ಮರಣೆಗಾಗಿ ನಿರ್ಮಿಸುವ ಯಾವುದೇ ಸ್ಮಾರಕಗಳಾಗಬಹುದು.

ಶಿಕ್ಷೆ : ಅಪರಾಧಿಗಳಿಗೆ ಈ ಕಾನೂನಿನಡಿಯಲ್ಲಿ ಆರು ತಿಂಗಳ ಸಜೆ ಅಥವಾ ದಂಡ, ಅಥವಾ ಎರಡೂ ವಿಧಿಸಬಹುದು. ವಿಶೇಷ ನ್ಯಾಯಾಲಯವು ಯಾವುದೇ ವ್ಯಕ್ತಿಯನ್ನು ಅಪರಾಧಿಯೆಂದು ಪರಿಗಣಿಸುವ ಮೊದಲು ಅಂತಹ ಒಂದು ಕೃತ್ಯ ಎಸಗಲು ಕಾರಣ ಪ್ರೇರೇಪಣೆ, ಮನಃಸ್ಥಿತಿ ಮತ್ತಿತರ ಸಂಬಂಧಿಸಿದ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳಬೇಕೆಂದೂ ಹೇಳುತ್ತದೆ.

ಸತಿ ಪದ್ಧತಿಗೆ ಪ್ರೋತ್ಸಾಹಿಸುವುದು ಈ ಕಾನೂನಿನ ಪ್ರಕಾರ ಅಪರಾಧವಾಗುತ್ತದೆ. ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಈ ಕೃತ್ಯಕ್ಕೆ ಪ್ರೇರಣೆ ನೀಡುವ ವ್ಯಕ್ತಿಗಳಿಗೆ ಮರಣದಂಡನೆ ಅಥವಾ ಜೀವಾವಧಿ ಶಿಕ್ಷೆ ನೀಡಬೇಕೆಂದು ಈ ಕಾನೂನು ಹೇಳುತ್ತದೆ.

- ಪ್ರೋತ್ಸಾಹಿಸುವುದು ಎಂದರೆ 'ಸತಿ' ಹೋಗುವುದು ಎಂದರೆ ಸದ್ಗತಿ ಪ್ರಾಪ್ತವಾಗುವುದೆಂದು ನಂಬಿಸುವುದು.
- ಸತಿ ಹೋಗಬೇಕೆಂದು ಮಹಿಳೆಗೆ ನಿರಂತರವಾಗಿ ಒತ್ತಡ ತರುವುದು
- ಸತಿ ಪದ್ಧತಿಗೆ ಪೂರಕವಾಗಿರುವ / ಸತಿ ಹೋಗುವ ಭಾಗವಾಗಿ ನಡೆಯುವ ಮೆರವಣಿಗೆಯಲ್ಲಿ ಪಾಲ್ಗೊಳ್ಳುವುದು. ಸುಡುವ ಹೂಳುವ ಜಾಗಕ್ಕೆ ಮಹಿಳೆಯನ್ನು ಸತಿ ಹೋಗಲೆಂದು ಕರೆದೊಯ್ಯುವುದು.
- 'ಸತಿ' ನಡೆಯುವಾಗ ಸ್ಮಶಾನದಲ್ಲಿ ಹಾಜರಿರುವುದು.
- 'ಸತಿ'ಯಂತಹ ಕ್ರೂರ ಕೃತ್ಯದಿಂದ ಪಾರಾಗಲು ಮಹಿಳೆ ಯತ್ನಿಸಿದಲ್ಲಿ ಆಕೆಯನ್ನು ತಡೆಯುವುದು.
- ಸತಿಯಂತಹ ಅಮಾನವೀಯ ಕೃತ್ಯವನ್ನು ತಡೆಯಲು ಮುಂದಾದ ಪೊಲೀಸ್ ಅಥವಾ ಇನ್ನಾರನ್ನೇ ನಿರ್ಬಂಧಿಸುವುದು.

ಇಂತಹ ಕೃತ್ಯಗಳನ್ನು ಮಾಡಿದರೆ ಈ ಕಾನೂನಿನ ಪ್ರಕಾರ ಸತಿಯನ್ನು ಪ್ರೋತ್ಸಾಹಿಸಿದಂತಾಗುತ್ತದೆ.

ಪ್ರೋತ್ಸಾಹ ಎಂದರೆ ಅದು ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಕೂಡ ಆಗಬಹುದು. ಸತಿಯ ಕುರಿತು ಪ್ರಚಾರ ಸಾಮಗ್ರಿಗಳನ್ನು ಪ್ರಕಟಿಸುವುದು, ಸುದ್ದಿ ಮುದ್ರಿಸುವುದು ಕೂಡ ಅಪರಾಧವೇ.

ಸತಿಯ ವೈಭವೀಕರಣಕ್ಕೆ ಒಂದು ವರ್ಷದಿಂದ ಏಳು ವರ್ಷಗಳವರೆಗೆ ಸಜಾ, 5 ಸಾವಿರದಿಂದ 35,000 ದವರೆಗೆ ದಂಡ ವಿಧಿಸಬಹುದಾಗಿದೆ.

ಜಿಲ್ಲಾ ಕಲೆಕ್ಟರ್ ಅಥವಾ ಜಿಲ್ಲಾ ನ್ಯಾಯಾಧೀಶರು : ಸತಿ ನಡೆಯದಂತೆ, 'ಸತಿ' ವೈಭವೀಕರಿಸದಂತೆ, ಸತಿ ಮಂದಿರ ಅಥವಾ ಅಂತಹ ಯಾವುದೇ ನಿರ್ಮಾಣಗಳನ್ನು ತಡೆಹಿಡಿಯುವ ಅಧಿಕಾರ ಹೊಂದಿರುತ್ತಾರೆ.

ಹೀಗೆ ತೆಗೆದುಕೊಂಡ ಯಾವುದೇ ಕ್ರಮಗಳನ್ನು ವಿಶೇಷ ನ್ಯಾಯಾಲಯಕ್ಕೆ ವರದಿ ಮಾಡಬೇಕು.

ವಿಶೇಷ ನ್ಯಾಯಾಲಯ

ಈ ಕಾನೂನಿನನ್ವಯ ಎಲ್ಲ ಪ್ರಕರಣಗಳೂ ಇದಕ್ಕಾಗಿಯೇ ರಚನೆಯಾದ ವಿಶೇಷ ನ್ಯಾಯಾಲಯದಲ್ಲಿಯೇ ವಿಚಾರಣೆಯಾಗಬೇಕು.

ರಾಜ್ಯ ಸರ್ಕಾರವು ಅಗತ್ಯಕ್ಕೆ ತಕ್ಕಂತೆ ಒಂದು ಅಥವಾ ಹೆಚ್ಚು ನ್ಯಾಯಾಲಯಗಳನ್ನು ಆ ಪ್ರದೇಶಕ್ಕೆ ಅಥವಾ ಇಡೀ ರಾಜ್ಯಕ್ಕೆ ಸಂಬಂಧಿಸಿದಂತೆ ರಚಿಸಬಹುದು.

ರಾಜ್ಯ ಉಚ್ಚ ನ್ಯಾಯಾಲಯದ ನ್ಯಾಯಾಧೀಶರ ಅನುಮತಿಯೊಂದಿಗೆ ರಾಜ್ಯ ಸರ್ಕಾರವು ನ್ಯಾಯಾಧೀಶರನ್ನು ನೇಮಿಸಬಹುದಾಗಿದೆ.



ಪ್ರತಿಯೊಂದು ವಿಶೇಷ ನ್ಯಾಯಾಲಯಕ್ಕೂ ಸರ್ಕಾರವು ಒಬ್ಬ ವಿಶೇಷ ಸರ್ಕಾರಿ ವಕೀಲರನ್ನು ನೇಮಿಸಬೇಕು.

ನೇಮಕಗೊಳ್ಳುವ ವಕೀಲರಿಗೆ ಕನಿಷ್ಟ 7 ವರ್ಷಗಳ ವಕೀಲಿ ವೃತ್ತಿಯ ಅನುಭವ ಅಥವಾ ಏಳು ವರ್ಷಗಳ ವಿಶೇಷ ಕಾನೂನು ಪರಿಣತಿಗೆ ಅವಕಾಶವಿರುವ ರಾಜ್ಯ ಸರ್ಕಾರದ ಕೆಲಸದ ಅನುಭವವಿರಬೇಕು.

ವಿಶೇಷ ನ್ಯಾಯಾಲಯಕ್ಕೆ ಸೆಷನ್ಸ್ ನ್ಯಾಯಾಲಯಕ್ಕಿರುವಷ್ಟೇ ಅಧಿಕಾರಗಳಿರುತ್ತವೆ. ಈ ನ್ಯಾಯಾಲಯದ ತೀರ್ಪಿಗೆ ಅದು ಹೊರಬಿದ್ದ 30 ದಿವಸಗಳೊಳಗೆ ಉಚ್ಚ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಲು ಅವಕಾಶವಿದೆ. ಒಂದೊಮ್ಮೆ ಈ ಅವಧಿಯ ನಂತರ ಸಲ್ಲಿಸಿದ ಮೇಲ್ಮನವಿಯ ಕುರಿತು ಉಚ್ಚ ನ್ಯಾಯಾಲಯಕ್ಕೆ ವಿಳಂಬ ಸಕಾರಣವೆಂದು ಅನಿಸಿದಲ್ಲಿ ಪುರಸ್ಕರಿಸಬಹುದು.

ಈ ಕಾನೂನಿನ ಪ್ರಕಾರ ಆರೋಪವನ್ನು ಅಲ್ಲಗಳೆಯಲು ಬೇಕಾದ ಸಾಕ್ಷಿ ಪುರಾವೆಗಳನ್ನು ಒದಗಿಸಬೇಕಾದ ಜವಾಬ್ದಾರಿ ಆರೋಪ ಹೊತ್ತವರದೇ ಆಗಿರುತ್ತದೆ.

ಸರ್ಕಾರದ ಯಾವುದೇ ಅಧಿಕಾರಿಗಳು ಇಂತಹ ಪ್ರಕರಣದ ತನಿಖೆ ಮತ್ತಿತರ ಕ್ರಮಗಳಿಗೆ ಪೊಲೀಸರಿಗೆ ಸೂಕ್ತ ಸಹಾಯ ನೀಡಬೇಕಾಗುತ್ತದೆ. ಜಿಲ್ಲಾ ಮ್ಯಾಜಿಸ್ಟ್ರೇಟರು ಸೂಚಿಸಿದ ಅಥವ ಗ್ರಾಮಾಂತರದಲ್ಲಿರುವ ಯಾವುದೇ ಸರ್ಕಾರಿ ಅಧಿಕಾರಿಗಳು ಇಂತಹ ಘಟನೆ ಗಮನಕ್ಕೆ ಬಂದಾಗ ಸಮೀಪದ ಪೊಲೀಸ್ ಸ್ಟೇಷನ್‌ಗೆ ಮಾಹಿತಿ ನೀಡಬೇಕು.

ಇವುಗಳಿಗೆ ವ್ಯತಿರಿಕ್ತವಾಗಿ ನಡೆದುಕೊಂಡರೆ ಎರಡು ವರ್ಷಗಳವರೆಗಿನ ಜೈಲು, ದಂಡ ಅನುಭವಿಸಬೇಕಾಗುತ್ತದೆ.

ಸತಿ ಪ್ರಕರಣದಲ್ಲಿ ಆರೋಪ ಸಾಬೀತಾದಲ್ಲಿ ಸತಿ ಹೋದ ವ್ಯಕ್ತಿಯಿಂದ ವಾರಸುದಾರಿಕೆಯಲ್ಲಿ ಬರುವ ಆಸ್ತಿಯ ಹಕ್ಕು ನಿರಾಕರಿಸಲ್ಪಡುತ್ತದೆ ಅಲ್ಲದೆ ಪ್ರಜಾಪ್ರಾತಿನಿಧ್ಯ ಕಾಯ್ದೆಯಡಿಯಲ್ಲಿ ಕೂಡ ಅನರ್ಹಗೊಳಿಸಲ್ಪಡುತ್ತಾರೆ. ಇಂತಹ ಒಂದು ಗಂಭೀರ ಕಾನೂನು ಜಾರಿಯಲ್ಲಿದ್ದಾಗಲೂ ಕೂಡ ಅಲ್ಲಲ್ಲಿ ಧರ್ಮ, ಸಂಪ್ರದಾಯಗಳ ಹೆಸರಿನಲ್ಲಿ ಸತಿ ಪ್ರಕರಣಗಳು ನಡೆಯುತ್ತಿರುವುದು ಈಗಲೂ ವರದಿಯಾಗುತ್ತಿವೆ. ರಾಷ್ಟ್ರೀಯ ಸಮ್ಮೇಳನವೊಂದರಲ್ಲಿ ಸತಿಯಂತಹ ಸಂಪ್ರದಾಯಗಳು ನಮ್ಮ ಸನಾತನತೆಯನ್ನು ಎತ್ತಿಹಿಡಿಯುವ ಸಂಕೇತಗಳೆಂದು ವಿಶ್ವ ಹಿಂದೂ ಪರಿಷತ್‌ನ ಮುಖಂಡ ಗಿರಿರಾಜ ಕಿಶೋರ ಹೇಳಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬೇಕು. ಈ ಕಾನೂನಿನಡಿಯಲ್ಲಿ ಅವರನ್ನು ಬಂಧಿಸಿ ಶಿಕ್ಷಿಸಬಹುದಿತ್ತು. ಕಾರಣ ಸಾರ್ವಜನಿಕವಾಗಿ ಈ ಹೇಳಿಕೆ ನೀಡಲಾಗಿತ್ತು. ಪತ್ರಿಕೆಗಳಲ್ಲಿ ವರದಿಯಾಗಿತ್ತು ಕೂಡ. ಆದರೆ ಅಂತಹುದೇನೂ ಜರುಗಲಿಲ್ಲ. ಅಥವಾ ರೂಪ್ ಕನ್ವರ್ ಪ್ರಕರಣದ ಆರೋಪಿಗಳ ಖುಲಾಸೆ ಆದಾಗ ವಸುಂಧರರಾಜ್ ಸಿಂಧ್ಯಾ ರಾಜಸ್ಥಾನದ ಮುಖ್ಯಮಂತ್ರಿಯಾಗಿಯೇ, ಮಾನವೀಯ ಮೌಲ್ಯಗಳ ರಕ್ಷಕರೋ ಅಥವಾ ಮಹಿಳೆಯಾಗಿಯೋ ನಿಲ್ಲಲಿಲ್ಲ. ಬದಲಿಗೆ ಸಾಂಪ್ರದಾಯಿಕ ತಾಕತ್ತುಗಳ ಸಂಕೇತವಾಗಿ ನಿಂತರು.

ಪ್ರಣಾಳಿಕೆಗಳ ಸ್ಪರ್ಧೆ........

ಪುಟ 9ರಿಂದ

ನಂತರ ಕೈಗೊಂಡಿರುವ ಅನೇಕ ವೈಜ್ಞಾನಿಕ ರೀತಿಯ ಪರಿಹಾರದ ಕ್ರಮಗಳು ಕೂಡ ದೇಶದ ರಾಜಕೀಯ ವಾತಾವರಣದ ಮೇಲೆ ಪ್ರಭಾವ ಬೀರಿದೆ.

ಇಂತಹ ಪರಿಸರದ ಪ್ರಭಾವದಲ್ಲಿಯೇ ಜೆಡಿ(ಎಸ್)-ಬಿಜೆಪಿ ಸರ್ಕಾರ ತಮ್ಮ ಬಜೆಟ್‌ಗಳಲ್ಲಿ ಅನೇಕ ಪರಿಹಾರ ನೀಡಿಕೆಯ ಕ್ರಮಗಳನ್ನು ಜಾರಿಗೆ ತರಬೇಕಾದ ಅನಿವಾರ್ಯತೆಗೆ ಒಳಗಾಗಿತ್ತು. ಈಗ ಮೂರು ಆಳುವ ವರ್ಗದ ಪಕ್ಷಗಳೂ ಕರ್ನಾಟಕದ ಅಧಿಕಾರಕ್ಕಾಗಿ ನಡೆಸುತ್ತಿರುವ ಸ್ಪರ್ಧೆಯ ಭಾಗವಾಗಿ ಪ್ರಣಾಳಿಕೆಗಳಲ್ಲಿಯೂ ಸ್ಪರ್ಧೆ ನಡೆಸುತ್ತಿವೆ. ಕರ್ನಾಟಕವನ್ನು ಹೇಗಾದರೂ ಮಾಡಿ ತನ್ನ ವಶಪಡಿಸಿಕೊಳ್ಳಬೇಕೆಂದು ಎಲ್ಲಾ ರೀತಿಯ ಅನಾಚಾರ, ಕುತಂತ್ರಗಳಿಗೆ ಕೈಹಾಕಿರುವ ಬಿಜೆಪಿ ಪ್ರಣಾಳಿಕೆಯಲ್ಲಿ ತನ್ನ ನೀತಿಯನ್ನು ಮುಚ್ಚಿಟ್ಟು ಗೋಮುಖ ವ್ಯಾಘ್ರದಂತೆ ವರ್ತಿಸಿರುವ ಬಗ್ಗೆ ಈಗಾಗಲೇ ಓದಿದ್ದೀರಿ. ಅದೇ ದಾರಿಯಲ್ಲಿ ಮತ್ತಷ್ಟು ಮುಂದೆ ಸಾಗಿ ತನ್ನ ನಿಜ ಆರ್ಥಿಕ ನೀತಿಗಳನ್ನು ಮರೆ ಮಾಚಲು ಅನೇಕ ಕೊಡುಗೆಗಳನ್ನು ಬಹಳ ಉದಾರವಾಗಿ ಘೋಷಿಸಿದೆ. ಜೆಡಿ(ಎಸ್) ಪಕ್ಷವೇ ಈ ವಿಷಯದಲ್ಲಿ ಹೆಚ್ಚು ಜಿಪುಣತನದಿಂದ ವರ್ತಿಸಿದೆ ಎನ್ನಬಹುದು. ಕೇಂದ್ರ ಸರ್ಕಾರದ ಮೇಲೆ ಎಂದೂ ತನ್ನ ಅಧಿಕಾರವನ್ನು ಪಡೆಯಲು ಸಾಧ್ಯವಿಲ್ಲ ಎಂಬ ಅರಿವು ಅದರ ಕೊಡುಗೆಗಳನ್ನು ಮಿತಿಗೊಳಿಸಿದೆ. ಆದರೆ ಕಾರ್ಮಿಕರು, ಗುತ್ತಿಗೆ ಕಾರ್ಮಿಕರು, ಗಾರ್ಮೆಂಟ್ಸ್, ಕಾರ್ಮಿಕ ವೇತನಗಳ ಬಗ್ಗೆ ಪ್ರಣಾಳಿಕೆಯಲ್ಲಿ ನಮೂದು ಮಾಡಿದೆ. ಕೋಮು ಸೌಹಾರ್ದ ಮತ್ತು ಅಲ್ಪಸಂಖ್ಯಾತರ ಒಲೈಸುವ ಹೆಚ್ಚು ಯೋಜನೆಗಳನ್ನು ಪ್ರಕಟಿಸಿದೆ.

ಔಷಧಿಗಳು ಜನಾರೋಗ್ಯಕ್ಕೋ ಅಥವಾ........

ಪುಟ 11 ರಿಂದ

ಪ್ರಯೋಗಾಲಯಗಳಲ್ಲಿ ತಜ್ಞ ಸಂಶೋಧಕರಿಂದ ಕಂಡು ಹಿಡಿಯ ಲ್ಪಡುತ್ತವೆ. ಸರ್ಕಾರದ ಒತ್ತಡ ಹೇರಿ ಆ ಅಧ್ಯಯನಗಳನ್ನು ತಮ್ಮದಾಗಿಸಿಕೊಳ್ಳಲು ಔಷಧಿ ಕಂಪನಿಗಳು ಪ್ರಯತ್ನಮಾಡುತ್ತವೆ. ಹಾಗೂ ಹೊಸ ಔಷಧಿಯು ಹೆಸರಿನಲ್ಲಿ ಲಾಭ ಮಾಡುತ್ತವೆ. ಮಾರುಕಟ್ಟೆಯಲ್ಲಿ ಹೊಸ ಔಷಧಿ ಎಂಬುದು ಹೊಸ ಆವಿಷ್ಕಾರ ಗೊಂಡ ಔಷಧಿಯಾಗಬೇಕಿಲ್ಲ.

ವಿಜ್ಞಾನ, ತಂತ್ರಜ್ಞಾನ ನಾಗಾಲೋಟದಲ್ಲಿ ಸಾಗಿದೆ. ಹೊಸ ಹೊಸ ಔಷಧಿಗಳು ಮಾರುಕಟ್ಟೆಗೆ ಬರುತ್ತವೆ ಎಂಬ ಸುದ್ದಿಯನ್ನು ಹರಡಲಾಗಿದೆ. ಈ ಮಾಹಿತಿಯಿಂದ ಔಷಧಿ ಕಂಪನಿಗಳು ಅಪಾರ ಲಾಭ ಮಾಡುತ್ತವೆ. ಹೊಸ ಸಂಶೋಧನೆಯಿಂದ ಮಾರುಕಟ್ಟೆಗೆ ಬರುವ ಔಷಧಿಗಳ ಸಂಖ್ಯೆ ಕಡಿಮೆ. ಅಮೇರಿಕದಲ್ಲಿ 1998 ರಲ್ಲಿ ಔಷಧಿ ನಿಯಂತ್ರಣದ ಪರವಾನಗಿ ಪಡೆಯಲು ಬಂದ 487 ಔಷಧಿಗಳಲ್ಲಿ 8 ಔಷಧಿಗಳು ಮಾತ್ರ ಹೊಸ ಔಷಧಿಗಳಾಗಿದ್ದುವು, ಉಳಿದವುಗಳು ಹಳೆಯ ಔಷಧಿಯ ಹೊಸ ರೂಪಗಳಾಗಿದ್ದವು. ಭಾರತದಲ್ಲಿ ಮಾರುಕಟ್ಟೆ ಯಲ್ಲಿರುವ ಎಲ್ಲ ಹೊಸ ಔಷಧಿಗಳು ಹಳೇ ಔಷಧಿಯ ಹೊಸರೂಪ ಗಳಷ್ಟೆ!

ಔಷಧಿ ಬೆಲೆ ನಿಯಂತ್ರಣ ನೀತಿಯ ಉಲ್ಲಂಘನೆ

ಯಾವುದೇ ವಸ್ತುವಿನ ಬೆಲೆಯನ್ನು ನಿರ್ಧರಿಸುವಾಗ ಒಂದು ಸೂತ್ರವನ್ನು ಅನುಸರಿಸುತಾರೆ. ಉದಾ:- ಕಚ್ಚಾವಸ್ತುವಿನ ಬೆಲೆ + ಸಿದ್ಧವಸ್ತು ತಯಾರಿಸಲು ಬೇಕಾಗುವ ವೆಚ್ಚ +ಸ್ಥಳೀಯ ತೆರಿಗೆಗಳು +ಲಾಭ.

ಔಷಧಿ ಬೆಲೆ ನಿರ್ಧರಿಸುವಾಗಲೂ ಇದೇ ಸೂತ್ರ ಆಧಾರವಾಗಬೇಕು. ಆದರೆ ಅದು ಹಾಗಾಗುವುದಿಲ್ಲ. ಔಷಧಿಗಳ ಬೆಲೆಯನ್ನು ಪರೀಕ್ಷಿಸಿದಲ್ಲಿ ತಿಳಿದು ಬಂದ ವಿಷಯವೇನೆಂದರೆ ಔಷಧಿಕಂಪನಿಗಳು ಹೆಚ್ಚು ಲಾಭ ಮಾಡಲು ಮುಂದಾಗುತ್ತಿ ರುವುದು. ಆದ್ದರಿಂದಲೇ ಪ್ರಾರಂಭದಲ್ಲಿ ಎಲ್ಲ ಔಷಧಿಗಳು ದುಬಾರಿಯಾಗಿರುತ್ತವೆ. ಕ್ರಮೇಣ ಔಷಧಿಗೆ ಪೈಪೋಟಿಯಿಂದಾಗಿ ಔಷಧಿ ಬೆಲೆಗಳು ಇಳಿಯುತ್ತವೆ. ಆದರೆ ಸರ'ಕಾರ / ಔಷಧಿ ನಿಯಂತ್ರಣ ಮಂಡಳಿ ಯಾವ ಹಸ್ತಕ್ಷೇಪವನ್ನೂ ಮಾಡುವುದಿಲ್ಲ. ಆದರೂ ಔಷಧಿ ಬೆಲೆಗಳು ಭಾರತದಲ್ಲಿ ಇತರೇ ದೇಶಗಳಿಗೆ ಹೋಲಿಸಿದಲ್ಲಿ ಕಡಿಮೆ ಯಾಗಿದ್ದವು. ಎಂದು ಹೇಳಬಹುದಾಗಿದೆ. ಇದಕ್ಕೆ ಕಾರಣ ಭಾರತೀಯ ಸಾರ್ವಜನಿಕ ಕ್ಷೇತ್ರದ ಔಷಧಿ ಉದ್ಯಮ ಕಡಿಮೆ ಬೆಲೆಯ ಔಷಧಿ ತಯಾರಿಸಿ ಬಹುರಾಷ್ಟ್ರೀಯ ಕಂಪನಿಗಳಿಗೆ ಪೈಪೋಟಿ ಒಡ್ಡಿದ್ದರಿಂದ ಹಾಗೂ ಭಾರತೀಯ ಪೇಟೆಂಟ್ ಕಾಯಿದೆ 1970 ಔಷಧಿಗಳಿಗೆ ಉತ್ಪನ್ನ ಪೇಟೆಂಟ್ ನಿರಾಕರಿಸಿದ್ದರಿಂದ.

ಆಸ್ಟ್ರೇಲಿಯಾ, ಜಪಾನ್, ಕೆನಡಾ, ಬ್ರಿಟನ್ ಹಾಗೂ ಅಮೇರಿಕಾದಲ್ಲೂ ಔಷಧಿ ಬೆಲೆಗಳ ಮೇಲೆ ಸರ್ಕಾರ ನಿಯಂತ್ರಣ ಸಾಧಿಸಿದೆ. ಆದರೆ ಭಾರತದಲ್ಲಿ ಔಷಧಿಕಂಪನಿಗಳು ನಿಯಂತ್ರಣ ಬೇಡವೆಂದು ಸರ್ಕಾರದ ಮೇಲೆ ಒತ್ತಡ ತರುತ್ತವೆ!

ಭಾರತದಲ್ಲಿ ಔಷಧಿ ನಿಯಂತ್ರಣ ವಿದ್ದರೂ, ಭಂಡತನದಿಂದ ಔಷಧಿ ನೀತಿಯನ್ನು ಉಲ್ಲಂಘನೆ ಮಾಡಿ ಹೆಚ್ಚು ಬೆಲೆಯಲ್ಲಿ ಔಷಧಿಯನ್ನು ಮಾರಲಾಗುತ್ತದೆ. ಔಷಧಿ ಕಂಪನಿಗಳ ಈ ಭಂಡತನವನ್ನು ಮೆಚ್ಚಬೇಕೇ? ಔಷಧಿ ನಿಯಂತ್ರಣಕ್ಕೆ ಇದನ್ನು ತಡೆಯಲಾಗಿಲ್ಲ. ಅಥವಾ ತಡೆಯಲು ಮನಸ್ಸಿಲ್ಲವೋ? ಸರ್ಕಾರ ಈ ಔಷಧಿಗಳನ್ನು ಖರೀದಿಸಿದಾಗ, ಕೊಟ್ಟ ಹೆಚ್ಚುವರಿ ಹಣವನ್ನು ಮರು ಪಡೆಯಲು ನ್ಯಾಯಾಲಯಕ್ಕೆ ಹೋಗಬೇಕಾಗುತ್ತದೆ. ನ್ಯಾಯಾಲಯದ ತೀರ್ಮಾನ ಬರುವ ಹೊತ್ತಿಗೆ, ನಷ್ಟವಾಗಿ ಹೋಗಿರುತ್ತದೆ. ಈ ರೀತಿ ಜನಸಾಮಾನ್ಯರು ನೇರವಾಗಿ ಹೆಚ್ಚು ಹಣ ಕೊಟ್ಟು ಖರೀದಿಸಿ ಮೋಸ ಹೋದದ್ದನ್ನು ಗುರುತಿಸಲಾಗಿದೆ. ಈ ರೀತಿ ಔಷಧಿ ಕಂಪನಿಗಳು ಕೋಟ್ಯಾಂತರ ರೂಪಾಯಿ ಲಾಭ ಮಾಡಿಕೊಂಡು ಜನರರನ್ನು ಮೋಸಮಾಡಿದ ಪ್ರಸಂಗ ಕರ್ನಾಟಕದಲ್ಲಿ ವರದಿಯಾಗಿದೆ. ಈ ಪ್ರಕ್ರಿಯೆಗೆ ಔಷಧಿ ನಿಯಂತ್ರಣದ ಪರೋಕ್ಷ ಸಹಾಯವಿದ್ದುದೂ ವರದಿಯಾಗಿದೆ.

				ರೂಪಾಯಿಗಳಲ್ಲಿ
		ಮಾರುಕಟ್ಟೆ ಬೆಲೆ	ನಿಗದಿತ ಬೆಲೆ	% ವ್ಯತ್ಯಾಸ
ಥಿಯೋಬ್ರಿಕ್	ಆಸ್ತಮಾ ಔಷಧಿ	13.00	2.88	158.68
ರೋವಿಟಾ ಸಿರಪ್ 30ml	ವಿಟಮಿನ್	27.00	7.78	247.04

ಔಷಧಿಗೆ ಸಂಬಂಧಿಸಿದ ಕೆಲವು ವಿಷಯಗಳನ್ನು ಮಾತ್ರ ಪತ್ರಿಕೆಗಳು ಪ್ರಕಟಿಸುತ್ತವೆ. ಜನಸಾಮಾನ್ಯರ ಗಮನಕ್ಕೆ, ವೈದ್ಯರ ಗಮನಕ್ಕೆ ಬರದ ಇನ್ನೊಂದು ವಿಷಯವನ್ನು ಗಮನಿಸೋಣ. ಅದೇ ಔಷಧಿ ಬೆಲೆಗಳ ವ್ಯತ್ಯಾಸ! ಒಂದೇ ಔಷಧಿಯನ್ನು ಹಲವಾರು ಕಂಪನಿಗಳು ತಯಾರಿಸುತ್ತಿದ್ದು ಅವುಗಳ ಬೆಲೆಯಲ್ಲಿ ಅಪಾರ ವ್ಯತ್ಯಾಸವಿರುವುದು ಕಂಡು ಬಂದಿದೆ. ಇದರಿಂದಾಗಿ ಜನರು ಅನಗತ್ಯವಾಗಿ ಕೆಲವು ಔಷಧಿಗಳಿಗೆ ಹೆಚ್ಚು ಬೆಲೆ ತೆತ್ತಂತಾಗುತ್ತಿದೆ. ಸಾಮಾನ್ಯವಾಗಿ ವೈದ್ಯರು ಔಷಧಿ ಬೆಲೆಯನ್ನು ಗಮನಿಸದೇ ಔಷಧಿಗಳನ್ನು ಬರೆಯುತ್ತಾರೆ! ಔಷಧಿ ಬೆಲೆ ನಿಗದಿ ಪಡಿಸುವ ಸಮಿತಿಯೇ ಈ ತರಹದ ಬೆಲೆ ವ್ಯತ್ಯಾಸದಿಂದ ಆಶ್ಚರ್ಯಗೊಂಡಿದೆ!

ಇತ್ತೀಚೆಗೆ ಹನ್ನೊಂದು ಔಷಧಿ ಕಂಪನಿಗಳು ಅಕ್ಟೋಬರ್ 2006 ರಲ್ಲಿ, 886 ಔಷಧಿಗಳ ಬೆಲೆಗಳನ್ನು ಕಡಿಮೆ ಮಾಡಿರುವುದಾಗಿ ಹೇಳಿಕೆ ನೀಡಿದ್ದವು. ಈ ಹೇಳಿಕೆಯನ್ನು ಸರ್ಕಾರ ಹಾಗೂ ಜನಸಾಮಾನ್ಯರು ಸ್ವಾಗತಿಸಿದರು. ಆದರೆ ಈ ಹೇಳಿಕೆಯನ್ನು ಪರೀಕ್ಷಿಸಿದಾಗ ಕಂಡು ಬಂದ ಅಂಶವೆಂದರೆ ಕಡಿಮೆ ಮಾಡಿದ ಬೆಲೆಗಳು ಸಾಮಾನ್ಯವಾಗಿ ಉಪಯೋಗಿಸದ ಔಷಧಿಗಳದ್ದಾಗಿದೆ. ಹಾಗೂ ಆಸ್ಪತ್ರೆಗೆ ಒದಗಿಸುವ ದೊಡ್ಡ ಔಷಧಿಕಟ್ಟಿನ ಬೆಲೆಗಳಾಗಿವೆ. ಇದೊಂದು ಔಷಧಿ ಕಂಪನಿಯ ತಂತ್ರ ಅಷ್ಟೇ!

ನಕಲೀ ಔಷಧಿಗಳು

ಇತ್ತೀಚಿಗಿನ ದಿನಗಳಲ್ಲಿ ನಕಲೀ ಔಷಧಿಗಳ ಬಗ್ಗೆ ಸಾಕಷ್ಟು ಚರ್ಚೆಯಾಗುತ್ತಿದೆ. ಈ ವಿಷಯದ ಬಗ್ಗೆ ಸರಿಯಾದ ಮಾಹಿತಿ ನೀಡಬೇಕಾದವರು ಔಷಧಿ ನಿಯಂತ್ರಣ ಅಧಿಕಾರಿಗಳು. ಆದರೆ ಅವರು ಮೌನದಿಂದಿದ್ದಾರೆ.

ರೆಸ್ಪಿರಿಡಾನ್ (ತೀವ್ರತರ ಮಾನಸಿಕ ರೋಗಕ್ಕೆ ಉಪಯೋಗಿಸಲಾಗುವುದು)		
ಟೊರೆಂಟ್	ರೂ. 1.69	
ಎಥನಾರ್	ರೂ. 27.00	ವ್ಯತ್ಯಾಸ 1493.63 ಶೇ.
ಗ್ಲಿಮಿಪ್ರೈಡ್ (ಸಕ್ಕರೆ ರೋಗಕ್ಕೆ ಉಪಯೋಗಿಸಲಾಗುವುದು)		
ಮನ್‌ಕೈಂಡ್	ರೂ. 0.80	
ಆವೆಂತಿಸ್	ರೂ. 5.30	ವ್ಯತ್ಯಾಸ 562.50
ಆಮ್ಲೋಡೆಪಿನ್ (ರಕ್ತದೊತ್ತಡ ಕಡಿಮೆ ಮಾಡಲು ಉಪಯೋಗಿಸಲಾಗುವುದು)		
ಮನಕೈಂಡ್	ರೂ. 4.00	
ಫೈರುರ್	ರೂ. 66.96	ವ್ಯತ್ಯಾಸ 1594.00
ಲಿವ್ರೋಫ್ಲಾಕ್ಸಿನ್ (ಸೂಕ್ಷಾಣು ವಿರುದ್ಧದ ಚಿಕಿತ್ಸೆಗೆ)		
ಸಿಪ್ಲಾ	ರೂ.6.82	
ಆವೆಂತಿಸ್	ರೂ. 95.00	ವ್ಯತ್ಯಾಸ 1292.96

ಯಾವುದೇ ಔಷಧಿ ನಿಗದಿತ ಪರಿಣಾಮ ಬೀರದಿದ್ದಾಗ ಅಥವಾ ಔಷಧಿಯಲ್ಲಿ ನಮೂದಿಸಿದ ಔಷಧಿಯ ಘಟಕದ ಬದಲು ಬೇರೆ ಘಟಕವಿದ್ದಾಗ, ಆ ಔಷದಿಯನ್ನು ನಕಲಿ ಔಷಧಿ ಎನ್ನಬಹುದು. ನಕಲೀ ಔಷಧಿಗಳು ಔಷಧಿ ಕಂಪನಿಗಳಿಗೆ ಅಪಾರ ಲಾಭ ತರುತ್ತವೆ. ಆದ್ದರಿಂದ ನಕಲೀ ಔಷಧಿಗಳಿರಲು ಸಾಧ್ಯವಿಲ್ಲವೆಂದು ಹೇಳಲಾಗದು. ಅದರಲ್ಲೂ ಪರಿಣಾಮಕಾರಿಯಾದ ಔಷಧಿ ನಿಯಂತ್ರಣ ವಿಲ್ಲದಿದ್ದಾಗ. ಮಾರುಕಟ್ಟೆಯಲ್ಲಿ ಎಷ್ಟು ನಕಲೀ ಔಷದಿ ಇದೆ, ಎಲ್ಲಿಂದ ಬರುತ್ತಿದೆ. ಸರ್ಕಾರ ಸ್ಪಷ್ಟ ಪಡಿಸಿಲ್ಲ. ಒಂದು ಅಂದಾಜಿನ ಪ್ರಕಾರ ಮಾರುಕಟ್ಟೆಯಲ್ಲಿಯ 30% ಔಷದಿಗಳು ನಕಲೀ ಔಷಧಿಗಳೆಂದು (10,200 ಕೋಟಿ ರೂಗಳು) ತಿಳಿದು ಬಂದಿದೆ. ಈ ಸಮಸ್ಯೆಯನ್ನು ಕೇವಲ ಔಷಧಿ ನಿಯಂತ್ರಣ ಪ್ರಾಧಿಕಾರ ಅಥವಾ ಮಂಡಳಿ ಪತ್ತೆ ಹಚ್ಚಬಹುದಾಗಿದೆ. ಹಾಗೂ ವೈದ್ಯರು ಅದರ ಸೂಚನೆ ಕೊಡಬಲ್ಲರು. ಔಷಧಿ ನಿಯಂತ್ರಣದಲ್ಲಿ ನಿಯಂತ್ರಕರ ಕೊರತೆ ಇದೆ, ಹಾಗೂ ಭ್ರಷ್ಟಾಚಾರವೂ ವ್ಯಾಪಕವಾಗಿದೆ ಹಾಗೂ ವೈದ್ಯರು ಬಹುರಾಷ್ಟ್ರೀಯ ಕಂಪನಿಯ ಔಷಧಿಗಳು ಒಳ್ಳೆಯವು ಎಂಬ ಭ್ರಮೆಯಲ್ಲಿದ್ದರೆ, ಈ ಸಮಸ್ಯೆಗೆ ಪರಿಹಾರ ದೊರಕುವುದೆಲ್ಲಿ?

ಅನಗತ್ಯ ಔಷಧಿಗಳು



ವಿಶ್ವ ಆರೋಗ್ಯ ಸಂಸ್ಥೆಯ ಅಗತ್ಯ ಔಷಧಿಗಳ ಪಟ್ಟಿಯಲ್ಲಿರದ ಎಲ್ಲ ಔಷಧಿಗಳು ಹಾಗೂ ಔಷಧಿ ಪುಸ್ತಕಗಳಲ್ಲಿ ಹೆಸರಿಸದ ಔಷಧಿಗಳು ಭಾರತೀಯ ಮಾರುಕಟ್ಟೆಯಲ್ಲಿ ಈ ಅನಗತ್ಯ ಔಷಧಿಗಳ ಸಂಖ್ಯೆಯ ಹೆಚ್ಚಾಗಿದೆ. ಈ ಔಷಧಿಗಳು ಸಮ್ಮಿಶ್ರ, ದುಬಾರಿ, ಹೆಚ್ಚು ಅಡ್ಡ ಪರಿಣಾಮವಿರುವ, ಔಷಧಿ ಪಠ್ಯಪುಸ್ತಕಗಳಲ್ಲಿ ಹೆಸರಿಸದ ಔಷಧಿಗಳು. ಔಷಧಿ ಕಂಪನಿಗಳ ಈ ಔಷಧಿಗಳ ಬಗ್ಗೆ ತಪ್ಪು ಮಾಹಿತಿ ನೀಡಿ ಈ ಔಷಧಿಗಳನ್ನು ಮಾರುತ್ತಾರೆ. ಔಷಧಿ ನಿಯಂತ್ರಣ ಮಂಡಳಿಯೇ ಈ ಔಷಧಿಗಳನ್ನು ನೊಂದಣಿ ಮಾಡಿಕೊಡುತ್ತವೆ!

ಉದಾ:ಎರಡು ಅಥವಾ ಹೆಚ್ಚು ಘಟಕಗಳಿರುವ ಸಮ್ಮಿಶ್ರ ಔಷಧಿಗಳು 1) ಟಾನಿಕ್‌ಗಳು 2) ಕೆಮ್ಮಿನ ಸಿರಪ್‌ಗಳು 3) ಮಲ್ಟಿ ವಿಟಮಿನ್‌ಗಳು

ವಿಶ್ವ ಆರೋಗ್ಯ ಸಂಸ್ಥೆ, ವೈದ್ಯಕೀಯ ಪಠ್ಯಪುಸ್ತಕಗಳು, ಜಾತಿ ಸೂಚಕ ಔಷಧಿಗಳನ್ನು ಬಳಸಲು ಪ್ರೋತ್ಸಾಹ ನೀಡುತ್ತವೆ. ಆದರೆ ಔಷಧಿ ಕಂಪನಿಗಳು ಗುರುತು ಸೂಚಕ ಔಷಧಿಗಳನ್ನೇ ಬರೆದು ಕೊಡಲು ವೈದ್ಯರನ್ನು ಒತ್ತಾಯಿಸುತ್ತವೆ. ಇದರಿಂದ ಔಷಧಿಕಂಪನಿಗೆ ಲಾಭ. ಆದರೆ ಈಗಿನ ದಿನಗಳಲ್ಲಿ ಕೆಲವು ಕಂಪನಿಗಳು ಜಾತಿಸೂಚಕ ಔಷದಿಗಳನ್ನು ತಯಾರಿಸಲು ಮುಂದಾಗಿವೆ. ಆದರೆ ಈ ಜಾತಿಸೂಚಕ ಔಷಧಿಗಳು ದುಬಾರಿ.

ಸರ್ಕಾರ, ವೈದ್ಯರು ಔಷಧಿ ನಿಯಂತ್ರಣ ಯಾಕೆ ಸುಮ್ಮನಿವೆ ! ಎಂಬುದು ಜನಸಾಮಾನ್ಯರಿಗೆ ಅರ್ಥಮಾಡಿಕೊಳ್ಳಲು ಕಬ್ಬಿಣದ ಕಡಲೆಯಾಗಿದೆ.

ಔಷಧಿ ಕಂಪನಿಗಳ ಒತ್ತಡದಿಂದ ಸರ್ಕಾರ ಅಗತ್ಯ ಔಷಧಿಯ ಪಟ್ಟಿ ತಯಾರಿಸಿ, ಅಗತ್ಯ ಔಷಧಿಯನ್ನು ತಯಾರಿಸಲು ಪ್ರತಿಯೊಂದು ಕಂಪನಿಗೆ ಕೋಟಾ ಕೊಡಲು ಹಿಂಜರಿಯುತ್ತಿದೆ. ಅನಗತ್ಯ ಔಷಧಿಗಳಿಗೆ ಪ್ರಾಮುಖ್ಯತೆ ಸಿಕ್ಕು ಆ ಔಷಧಿಗಳನ್ನೆಲ್ಲ ಔಷಧಿ ಕಂಪನಿಗಳು ಮಾರುತ್ತ ಬಂದಿವೆ. ಇದರಿಂದಾಗಿ ಅನಗತ್ಯ ಔಷಧಿಗಳೇ ಮಾರುಕಟ್ಟೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿವೆ. ವೈದ್ಯರಿಗೆ ಅಗತ್ಯ ಔಷಧಿ ಬಗ್ಗೆ ಮಾಹಿತಿ ಇಲ್ಲದಾಗಿದೆ. ಆದ್ದರಿಂದ ವೈದ್ಯರು ಔಷಧಿ ಕಂಪನಿಗಳ ಪ್ರಚಾರಕ್ಕೆ ಮಣಿದಿದ್ದಾರೆ. ಈ ಬದಲಾವಣೆ ತರಲು, ಔಷಧಿ ನೀತಿ ಜನಪರ ಮಾಡಲು, ಸರ್ಕಾರಕ್ಕೆ ರಾಜಕೀಯ ಒಲವು ಇಲ್ಲದಾಗಿದೆ.

ವೈದ್ಯರ ಪಾತ್ರ

ವೈದ್ಯರು ಅಗತ್ಯ/ಅನಗತ್ಯ ಔಷಧಿ ಪರಿಕಲ್ಪನೆಯನ್ನು ಅರಿಯದಾಗಿದ್ದಾರೆ. ಆ ವಿಷಯ ಪಠ್ಯಪುಸ್ತಕಗಳಲ್ಲಿಲ್ಲ. ವೈದ್ಯರು ವ್ಯಾಸಂಗದ ಸಮಯದಲ್ಲಿ ಜಾತಿ ಸೂಚಕ ಔಷಧಿಗಳನ್ನು ಅಭ್ಯಾಸ ಮಾಡಿದ್ದರೂ, ಆ ಅಭ್ಯಾಸವನ್ನು ಮರೆತು ಗುರುತು ಸೂಚಕ ಔಷಧಿಗಳನ್ನು ಬರೆದುಕೊಡಲು ಮುಂದಾಗುತ್ತಾರೆ. ಇನ್ನು ಕೆಲವು ವೈದ್ಯರು, ಜಾತಿಸೂಚಕ ಔಷಧಿಗಳು ಪರಿಣಾಮಕಾರಿಯಲ್ಲ(!) ವೆಂದು ನಂಬುತ್ತಾರೆ. ಔಷಧಿ ಉಪಯೋಗವನ್ನು ಬಿಟ್ಟರೆ ಔಷಧಿ ತಯಾರಿಕೆಯ ರಾಜಕೀಯ ನಮಗೆ ಬೇಡ ಎಂಬುದು ವೈದ್ಯರ ಅಭಿಪ್ರಾಯ, ಇದರಿಂದಾಗಿ ಬಹುರಾಷ್ಟ್ರೀಯ ಕಂಪನಿಗಳ ಲಾಭವನ್ನು ಹೆಚ್ಚಿಸಲು ಸಹಾಯ ಮಾಡುತ್ತಿರುವುದನ್ನು ಅವರು ಗುರುತಿಸದವರಾಗಿದ್ದಾರೆ. ಅನಗತ್ಯ ದುಬಾರಿ, ಅಪಾಯಕಾರಿ ಔಷಧಿಗಳನ್ನು ನಿರಂತರವಾಗಿ ಬರೆಯುವ ಅಭ್ಯಾಸವುಳ್ಳವರಾಗಿದ್ದಾರೆ. ಇದಕ್ಕೆ ಪ್ರೇರಣೆ ಔಷಧಿ ಕಂಪನಿಗಳು.

ಜನ ಸಾಮಾನ್ಯರು ಅನಗತ್ಯ, ಅಪಾಯಕಾರಿ, ದುಬಾರಿ ಔಷಧಿಗಳ ಬಗ್ಗೆ ಆಶ್ಚರ್ಯ ವ್ಯಕ್ತ ಪಡಿಸುತ್ತಾರೆ. ಹೇಗೆ ಸರ್ಕಾರ ಈ ತರಹದ ಔಷಧಿಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡುತ್ತದೆ, ಔಷಧಿ ಕಂಪನಿಗಳ ಮೇಲೆ ನಿಯಂತ್ರಣ ತರಲು ಸಾಧ್ಯವಿಲ್ಲವೇ ಎಂದು ಕೇಳುತ್ತಾರೆ. ಜನ ಸಾಮಾನ್ಯರು ಔಷಧಿ ಉಪಯೋಗಿಸಲು ವೈದ್ಯರೇ ತೀರ್ಮಾನಿಸಬೇಕಾಗುತ್ತದೆ. ಜನ ಸಾಮಾನ್ಯರಿಗೆ ಔಷಧಿ ಬಗೆಗೆ ತೀರ್ಮಾನ ಸಾಧ್ಯವಿಲ್ಲ. ಅಗತ್ಯ ಔಷಧಿಗಳ ಬಗ್ಗೆ ಕನಿಷ್ಟ ಮಾಹಿತಿಯೂ ಜನರಿಗೆ ಇಲ್ಲದಾಗಿದೆ, ಆದ್ದರಿಂದ ಇಂದಿಗೂ ಅನಗತ್ಯ ಅಪಾಯಕಾರಿ ಔಷಧಿಗಳು ಮಾರುಕಟ್ಟೆ ಯಲ್ಲಿ ದೊರಕುತ್ತವೆ.

ಸರ್ಕಾರದ ಪಾತ್ರ

ಔಷಧಿ ನಿಯಂತ್ರಣ ಮಂಡಳಿ ಅಗತ್ಯ ಔಷಧಿಯನ್ನು 1977 ರಲ್ಲಿಯೇ ವಿಶ್ವ ಆರೋಗ್ಯ ಸಂಸ್ಥೆ ಬಿಡುಗಡೆ ಮಾಡಿದರೂ ಇತ್ತೀಚಿನವರೆಗೆ (1996) ಭಾರತ ಅದನ್ನು ಜಾರಿಗೊಳಿಸಿರಲಿಲ್ಲ. ಇದಕ್ಕೆ ಕಾರಣ ರಾಜಕೀಯ ಇಚ್ಛಾಶಕ್ತಿಯ ಕೊರತೆ. ಔಷಧಿ ಕಂಪನಿಗಳು ಸರ್ಕಾರದ ಮೇಲೆ ಒತ್ತಡ ಹಾಕಿ ಅನಗತ್ಯ ಔಷಧಿಗಳನ್ನುಮಾರುಕಟ್ಟೆಯಿಂದ ತೆಗೆದು ಹಾಕದಂತೆ ನೋಡಿಕೊಂಡಿವೆ. ಔಷಧಿ ಕಂಪನಿಗಳಿಗೆ ಅಗತ್ಯ ಔಷಧಿ ಒದಗಿಸುವುದಕ್ಕಿಂತ ಲಾಭ ಮಹತ್ವದ್ದು.

ಪೇಟೆಂಟ್ ನೀತಿ

90ರ ದಶಕದವರೆಗೆ, ಭಾರತದಲ್ಲಿ ಔಷಧಿ ಬೆಲೆಗಳು ಇತರೇ ದೇಶಗಳಿಗೆ ಹೋಲಿಸಿದಲ್ಲಿ ಕಡಿಮೆಯಾಗಿದ್ದವು. ಆದರೆ ಅದರ ನಂತರ ಔಷಧಿಗಳ ಬೆಲೆಗಳು ಹೆಚ್ಚುತ್ತಿವೆಯೆಂದು ಹಲವಾರು ವರದಿಗಳು ಹೇಳುತ್ತವೆ. 1995 ರಲ್ಲಿ ನಮ್ಮ

ಪುಟ 14ಕ್ಕೆ

ಶರತ್‌ಚಂದ್ರ

ಪ್ಯಾಲೈಸ್ಟೈನ್ ಮಹಾದುರಂತ : ‘ಅಲ್ - ನಕ್ ಬಾ’ ಕ್ಕೆ 60 ವರ್ಷ

ಒಂದೇ ಪ್ರದೇಶದ ಒಬ್ಬರ ಸ್ವಾತಂತ್ರ್ಯ ಉತ್ಸವ ಇನ್ನೊಬ್ಬರ ‘ಮಹಾದುರಂತ’ ಆಗಬಹುದೇ ಇದೇ ಆಗಿರುವುದು ಪ್ಯಾಲೆಸ್ಟೈನ್‌ನಲ್ಲಿ. ಮೇ 14 ರಂದು ಇಸ್ರೇಲ್ ತನ್ನ 60 ನೇ ಹುಟ್ಟು ಹಬ್ಬ ಮತ್ತು ಸ್ವಾತಂತ್ರ್ಯ ಉತ್ಸವ ಆಚರಿಸಿತು. ಆದರೆ ಸ್ವತಂತ್ರ ಪ್ಯಾಲೆಸ್ಟೈನ್ ಮತ್ತು ಹಲವು ಅರಬ್ ಮತ್ತಿತರ ದೇಶಗಳಲ್ಲಿ ನೆಲೆಸಿರುವ ನಿರಾಶ್ರಿತರು ಅದೇ ದಿನವನ್ನು ತಮ್ಮ ಸ್ವಾತಂತ್ರ್ಯ ಹರಣದ ‘ಅಲ್-ನಕ್-ಬಾ’ (ಮಹಾದುರಂತ) ದಿನವಾಗಿ ಆಚರಿಸಿದರು. 1948 ರಲ್ಲಿ ಇಸ್ರೇಲಿ ದೇಶ ಹುಟ್ಟಿದ್ದು ಪ್ಯಾಲೆಸ್ಟೈನ್ ಜನತೆಯ ಸಂಕಟಗಳ ಮೇಲೆ. ಇಸ್ರೇಲಿ ಜಿಯೋನಿಸ್ಟರು (ಜ್ಯೂ ಉಗ್ರವಾದಿಗಳು) ಆ ದೇಶವನ್ನು ರಚಿಸಲು ಭಯೋತ್ಪಾದಕ ಕೃತ್ಯಗಳ ಮೂಲಕ 70 ಲಕ್ಷ ಪ್ಯಾಲೆಸ್ಟೈನ್ನರನ್ನು ಮನೆಬಿಟ್ಟು ಓಡಿಸಿ ನಿರಾಶ್ರಿತರನ್ನಾಗಿಸಿದ್ದರು. ಇವರಲ್ಲಿ ಬಹುಪಾಲು ಜನರಿಗೆ ಯಾವತ್ತೂ ತಮ್ಮ ಮನೆಗಳಿಗೆ ಹಿಂತಿರುಗಲು ಆಗಲಿಲ್ಲ. ಸಾವಿರಾರು (ಮುಖ್ಯವಾಗಿ ಮಕ್ಕಳು) ದಾರಿಯಲ್ಲಿ ಅನ್ನ ನೀರಿಲ್ಲದೆ ಸತ್ತರು. ಸುಮಾರು 50 ಲಕ್ಷದಷ್ಟು ಅವರ ಕುಟುಂಬದವರು ಈಗಲೂ ‘ಶಾಶ್ವತ ನಿರಾಶ್ರಿತ’ರಾಗಿದ್ದಾರೆ. ಸ್ವತಂತ್ರ ಪ್ಯಾಲೆಸ್ಟೈನ್‌ನ ಗಾಜಾ ಪಟ್ಟಿಯಲ್ಲಿ ಇರುವ ಪ್ಯಾಲೆಸ್ಟೈನ್ನರೂ ಕ್ರೂರ ದಿಗ್ಬಂಧನಕ್ಕೆ ಒಳಗಾಗಿದ್ದು ತಮ್ಮ ದೇಶದಲ್ಲೇ ನಿರಾಶ್ರಿತರಂತೆ ಇದ್ದಾರೆ.

‘ಅಲ್-ನಕ್-ಬಾ’ದಿನವನ್ನು ಪ್ಯಾಲೆಸ್ಟೈನ್ನರು ಶೋಕ ಮತ್ತು ಪ್ರತಿಭಟನೆಯ ದಿನವಾಗಿ ಆಚರಿಸಿದರು. ಪ್ರತಿ ಪಟ್ಟಣ ಮತ್ತು ಹಳ್ಳಿಯ ಬಳಿ ಇರುವ ಇಸ್ರೇಲಿ ಗಡಿಯ ‘ಚೆಕ್ ಪಾಯಿಂಟ್’ ಬಳಿ ಮೆರವಣಿಗೆಯಲ್ಲಿ ಹೋಗಿ ಪ್ರತಿಭಟಿಸಿದರು. ಸ್ವತಂತ್ರ ಪ್ಯಾಲೆಸ್ಟೈನ್‌ನ ಮಧ್ಯ-ಮಧ್ಯ ಇಸ್ರೇಲಿ



ಕಾಲೋನಿಗಳನ್ನು ರಚಿಸಿ ಬೇಲಿ ಹಾಕಿ ತುಂಡು-ತುಂಡು ಮಾಡಿದ್ದಾರೆ. ಆದ್ದರಿಂದ ಪ್ಯಾಲೆಸ್ಟೈನ್‌ನಲ್ಲಿ ಎಲ್ಲೆಲ್ಲೂ ‘ಗಡಿ’ಗಳು. ಒಂದು ಹಳ್ಳಿಯಿಂದ ಇನ್ನೊಂದು ಹಳ್ಳಿಗೆ ಹೋಗಬೇಕಾದರೆ ಇಸ್ರೇಲಿ ‘ಚೆಕ್ ಪಾಯಿಂಟ್’ ಮತ್ತು ‘ಶರೀರ ಪರೀಕ್ಷೆ’ಮತ್ತಿತರ ಅವಮಾನ-ಕಿರುಕುಳಗಳ ಮೂಲಕ ಹಾದು ಹೋಗಬೇಕು. ಆದ್ದರಿಂದ ಈ ‘ಚೆಕ್ ಪಾಯಿಂಟ್’ಗಳು ಪ್ಯಾಲೆಸ್ಟೈನ್ ಜನರ ಸಂಕಟದ ಪ್ರತೀಕ. ರಾಜಧಾನಿ ರಾಮಲ್ಲಾ ಮತ್ತು ಗಾಜಾ ಪಟ್ಟಿಯಲ್ಲಿ ಭಾರೀ ಸಂಖ್ಯೆಯಲ್ಲಿ ಜನ ಸೇರಿದ ಪ್ರಮುಖ ಪ್ರತಿಭಟನಾ ರ್‍ಯಾಲಿ ನಡೆಯಿತು. ಸ್ಕೂಲು-ಕಾಲೇಜುಗಳಿಗೆ ರಜೆ ಇತ್ತು. ಈ ರ್‍ಯಾಲಿಯಲ್ಲಿ ಸಾವಿರಾರು (ಅಲ್-ನಕ್ ಬಾ ದಿನದ ನಂತರ ಕಳೆದ ದಿನಗಳಷ್ಟು) ಕಪ್ಪು ಬಲೂನುಗಳನ್ನು (ಅರಬರಲ್ಲಿ ಶೋಕದ ಸಂಕೇತ) ಹಾರಿಬಿಡಲಾಯಿತು. ಪ್ರತಿಭಟನಾಕಾರರು ತಮ್ಮ ಅಪ್ಪ-ಅಜ್ಜಂದಿರ ಕಳೆದುಕೊಂಡ ಮನೆಯ ಕೀಲಿ ಕೈ ಹಿಡಿದಿದ್ದರು.

ಇಸ್ರೇಲಿ-ಪ್ಯಾಲೆಸ್ಟೈನ್ ವಿವಾದದಲ್ಲಿ ‘ಪ್ರಾಮಾಣಿಕ ಮಧ್ಯವರ್ತಿ’ ಎಂದು ಹೇಳಿಕೊಳ್ಳುವ ಅಮೆರಿಕದ ಅಧ್ಯಕ್ಷ ಬುಶ್ ಇಸ್ರೇಲಿ 60ನೇ ಸ್ವಾತಂತ್ರ್ಯ ಉತ್ಸವಕ್ಕೆ ಮಾತ್ರ ಹೋದರು. ಆ ಮೂಲಕ ತಾವು ಯಾರ ಪರ ಎಂದು ತಿಳಿಸಿದರು. ಪ್ಯಾಲೆಸ್ಟೈನ್ನರ ‘ಅಲ್-ನಕ್ ಬಾ’ ಆಚರಣೆ ಅವರ ಗಮನಕ್ಕೆ ಬರಲಿಲ್ಲ. ಅಲ್ಲಿ ಅವರು ತಲೆ ಹಾಕಲಿಲ್ಲ. ಇಸ್ರೇಲಿ ಉತ್ಸವ ಭಾಷಣದಲ್ಲಿ ಪ್ಯಾಲೆಸ್ಟೈನ್ನರ ಬಗ್ಗೆ ಸುದ್ದಿ ಎತ್ತಲಿಲ್ಲ. ಮಾತ್ರವಲ್ಲ ಇಸ್ರೇಲಿನ ಭಯೋತ್ಪಾದಕ ವಿರೋದಿಗಳ ವಿರುದ್ಧ ಗುಡುಗಿದರು. ಇಸ್ರೇಲಿನ ಸಮರವನ್ನು ಶ್ಲಾಘಿಸಿದರು. ಪ್ಯಾಲೆಸ್ಟೈನ್ ಸ್ವಾತಂತ್ರ್ಯ ಹೋರಾಟಗಾರರು ಭಯೋತ್ಪಾದಕರು ಎಂದು ಪರೋಕ್ಷವಾಗಿ ಹೇಳಿದರು. ನೆರೆಯ ಇರಾನ್, ಸಿರಿಯಾಗಳ ವಿರುದ್ಧ ಬೆದರಿಕೆ ಹಾಕಿದರು.

ಅಮೆರಿಕನ್ ಮಿಲಿಟರಿ ನೆಲೆಗಳ ವಿರುದ್ದ ಜಪಾನ್ ಪ್ರತಿಭಟನೆ

ಅಮೆರಿಕನ್ ಮಿಲಿಟರಿ ನೆಲೆಗಳ ವಿರುದ್ಧ ಎಲ್ಲಾ ಕಡೆ ಪ್ರತಿಭಟನೆ ತೀವ್ರಗೊಳ್ಳುತ್ತಿದೆ. ಇರಾಕ್ ನಲ್ಲಿ ಅಮೆರಿಕದ ಕ್ರೂರ ಯುದ್ಧ ಕೋರ ಕ್ರಮಗಳನ್ನು ನೋಡಿ ಅವರ ಮಿಲಿಟರಿ ನೆಲೆಗಳು ತಮ್ಮ ರಕ್ಷಣೆಗೆ ಅಲ್ಲ. ಸ್ವಾತಂತ್ರ್ಯ ಭಕ್ಷಣೆಗೆ ಅಂತ ಹೆಚ್ಚು ಹೆಚ್ಚು ಜನಕ್ಕೆ ಅರಿವಾಗುತ್ತಿದೆ. ಉತ್ತರ ಜಪಾನಿನ ಹೊಕ್ಕಿಡೋ ದ್ವೀಪದಲ್ಲಿರುವ ಯೌಸುಬೆತ್ಸು ಮಿಲಿಟರಿ ನೆಲೆ ಇಂಥ ನೆಲೆಗಳಲ್ಲಿ ಒಂದು. ಇಲ್ಲಿ ನೂರಾರು ಜಪಾನಿ ಶಾಂತಿ ಚಳುವಳಿ ಕಾರ್ಯಕರ್ತರು ಸತತವಾಗಿ ‘ಧರಣಿ’ ಕೂತು ಅಮೆರಿಕನ್ ಮಿಲಿಟರಿ ಯೌಸುಬೆತ್ಸು ಬಿಟ್ಟು ಹೋಗಬೇಕೆಂದು ಒತ್ತಾಯಿಸುತ್ತಿದ್ದಾರೆ. 1962 ರಲ್ಲಿ ಮಿಲಿಟರಿ ನೆಲೆ ಸ್ಥಾಪಿಸಲು ಇಲ್ಲಿನ ಡೈರಿ ರೈತರು ತಮ್ಮ ಜಮೀನು ಮಾರುವಂತೆ ಸರ್ಕಾರ ಒತ್ತಡ ಹೇರಿತ್ತು. ಕೇವಲ ಮೂರು ರೈತರು ಈ ಒತ್ತಡ ಲೆಕ್ಕಿಸದೆ ಅಲ್ಲೇ ನೆಲೆಸಿದ್ದಾರೆ. ಅಂತಹ ಒಬ್ಬ ರೈತನ ಮನೆಯೆ ಶಾಂತಿ ಚಳುವಳಿಯ ಶಾಶ್ವತ ಕ್ಯಾಂಪ್ ಆಗಿಬಿಟ್ಟಿದೆ. ಜಪಾನಿ ಸಂವಿಧಾನದ ಮಿಲಿಟರಿ ಕ್ರಮಗಳನ್ನು ತ್ಯಾಗ ಮಾಡುವ ಒಂಬತ್ತನೇ ಕಲಮು ಶಾಂತಿ ಚಳುವಳಿ ಕಾರ್ಯಕರ್ತರ ಒಂದು ಆಯುಧ. ಈ ಕಲಮು ಬಳಸಿ ಅಮೆರಿಕನ್ ಮಿಲಿಟರಿ ಚಟುವಟಿಕೆ ವಿರುದ್ಧ ಕಾನೂನು ಸಮರ ಸಹ ಹೂಡಿದೆ. ಸಂವಿಧಾನದ ಒಂಬತ್ತನೇ ಕಲಮು ರದ್ದುಗೊಳಿಸಿ ತನ್ನ ಮಿಲಿಟರಿ ಚಟುವಟಿಕೆಯಲ್ಲಿ ಭಾಗವಹಿಸುವಂತೆ ಒತ್ತಡ ಹೇರುತ್ತಿದೆ.

ಬೊಲಿವಿಯ ಜನಮತ ಸಂಗ್ರಹ

ಬೊಲಿವಿಯದ ಅಧ್ಯಕ್ಷ ಮೊರಾಲೆಸ್ ಕೆಲವು ಶ್ರೀಮಂತ ಪ್ರಾಂತ್ಯಗಳ ಗವರ್ನರ್‌ಗಳ ಸವಾಲನ್ನು ಸ್ವೀಕರಿಸಿದ್ದಾರೆ. ಮೊರಾಲೆಸ್ ಅವರ ಬಡವರ-ಪರ ಮತ್ತು ಸಾಮಾಜಿಕ ನ್ಯಾಯದ (ಭೂಸುಧಾರಣೆ ಮುಂತಾದ) ನೀತಿಗಳಿಗೆ ಕಡಿವಾಣ ಹಾಕುವ ಅವರಿಗೆ ವಾಪಸು ರಾಜಕೀಯ ಸವಾಲು ಎಸೆದಿದ್ದಾರೆ. ಅವರು ತಂದಿರುವ ಒಂದು ಹೊಸ ಕಾನೂನು ಪ್ರಕಾರ ಅಗಸ್ಟ್ 10 ರಂದು ಅಧ್ಯಕ್ಷರು (ಸ್ವತ: ಅವರು ಸೇರಿದಂತೆ) ಮತ್ತು ಎಲ್ಲಾ ಗವರ್ನರ್‌ಗಳು ‘ವಾಪಸು ಕರೆಯುವ’ ಜನಮತ ಸಂಗ್ರಹ ಎದುರಿಸಬೇಕು. ಕೆಲವು ಶ್ರೀಮಂತ ಪ್ರಾಂತ್ಯಗಳಲ್ಲಿ



ಜನಮತ ಸಂಗ್ರಹದ ದುರ್ಬಳಕೆ ಮಾಡಿ ಆ ಪ್ರಾಂತ್ಯಗಳ ಸಂಪನ್ಮೂಲ ಮತ್ತು ಆದಾಯದ ಮೇಲೆ ಪೂರ್ಣ ನಿಯಂತ್ರಣ ಸಾಧಿಸುವ ಸಂವಿಧಾನ-ವಿರೋಧಿ ಕ್ರಮದ ವಿರುದ್ಧ ಮೊರಾಲೆಸ್ ಅವರ ರಾಜಕೀಯ ಬಾಣ. ಈ ಜನಮತ ಸಂಗ್ರಹ ನಡೆಸುವಂತೆ ವಿದೇಶಿ ಚುನಾವಣಾ ವೀಕ್ಷಕರನ್ನು ಆಹ್ವಾನಿಸಿದ್ದಾರೆ. ಆ ಮೂಲಕ ಬಲಪಂಥೀಯರು ಮತ್ತು ಅವರ ಅಂತರ್‍ರಾಷ್ಟ್ರೀಯ ಬೆಂಬಲಿಗರಿಗೆ ರಾಜಕೀಯ ಸವಾಲು ಎಸೆದಿದ್ದಾರೆ.

ಫ್ರೆಂಚ್ ಸರ್ಕಾರಿ ನೌಕರರ ಮುಷ್ಕರ

ಫ್ರೆಂಚ್ ಸರ್ಕಾರಿ ನೌಕರರು ಮತ್ತು ಶಿಕ್ಷಕರು ಸಾರ್ಕೋಜಿ ಸರ್ಕಾರದ ಉದ್ಯೋಗ ಕಡಿತದ ವಿರುದ್ಧ ಮನಃ ಯುದ್ಧ ಸಾರಿದ್ದಾರೆ. ಕಳೆದ ವಾರ ಈ ವಿಷಯದ ಮೇಲೆ ಭಾರೀ ಮುಷ್ಕರ ನಡೆಸಿದರು. ಇದು ಈ ವರ್ಷ ಕಡಿತ ಮಾಡಬೇಕೆಂದಿರುವ 23 ಸಾವಿರ ಸರ್ಕಾರಿ ನೌಕರಿ (11 ಸಾವಿರ ಶಿಕ್ಷಕರು ಸೇರಿದಂತೆ)ಗೆ ಸಂಬಂಧಿಸಿದ್ದು. ಮುಂದಿನ ವರ್ಷ 35 ಸಾವಿರ ಉದ್ಯೋಗಗಳ ಕಡಿತದ ಯೋಜನೆ ಇದೆ. ಏಳುವರೆ ಲಕ್ಷ ಫ್ರೆಂಚ್ ಶಿಕ್ಷಕರ ಬಹುಪಾಲು (ಸುಮಾರು ಶೇ.60) ಮುಷ್ಕರದಲ್ಲಿ ಭಾಗವಹಿಸಿದರು. ಲಕ್ಷಾಂತರ ಸರ್ಕಾರಿ ನೌಕರರೂ ಮುಷ್ಕರದಲ್ಲಿ ಭಾಗವಹಿಸಿದರು. ಪ್ಯಾರಿಸ್ ಸೇರಿದಂತೆ ಫ್ರಾನ್ಸ್‌ನಾದ್ಯಂತ ಭಾರಿ ಪ್ರತಿಭಟನಾ ಮೆರವಣಿಗೆಗಳು ನಡೆದವು. ಶಿಕ್ಷಕರ ಮುಷ್ಕರ ಬೆಂಬಲಿಸಿ ಹಲವು ಕಡೆ ವಿದ್ಯಾರ್ಥಿಗಳೂ ಪ್ರತಿಭಟನೆಯಲ್ಲಿ ಬಾಗವಹಿಸಿದರು. ಸಾಮಾಜಿಕ ಸೇವೆಗಳ ಕಡಿತದ ನೀತಿ ಅನುಸರಿಸಿರುವ ಸಾರ್ಕೋಜಿ ಸರ್ಕಾರದ ಜನಪ್ರಿಯತೆ ತೀವ್ರವಾಗಿ ಕುಸಿದಿದ್ದು, ಅದು ಬಿಕ್ಕಟ್ಟು ಎದುರಿಸಲಿದೆ.



ಔಷಧಿಗಳು ಜನಾರೋಗ್ಯಕ್ಕೋ ಅಥವಾ........

ಪುಟ 13 ರಿಂದ

ಪೇಟೆಂಟ್ ನೀತಿಗೆ ತಿದ್ದುಪಡಿ ತರಲಾಗಿದೆ. ಇದರಿಂದಾಗಿ ಇನ್ನು ಮುಂದೆ ಪೇಟೆಂಟ್ ಪಡೆದ ಔಷಧಿಗಳು ದುಬಾರಿಯಾಗುತ್ತವೆ. ಇಲ್ಲಿಯವರೆಗೆ ಭಾರತದ ಕಂಪನಿಗಳು ಯಾವ ಔಷಧಕ್ಕೂ ಪೇಟೆಂಟ್ ಪಡೆದಿಲ್ಲ, ಆದರೆ ಇನ್ನು ಮುಂದೆ ಭಾರತ ಹಲವಾರು ಔಷಧಿಗಳಿಗೆ ಪೇಟೆಂಟ್ ನೀಡುವ ಪರಿಸ್ಥಿತಿ ಇದೆ. ಭಾರತದ ಪೇಟೆಂಟ್ ಆಫೀಸಿನಲ್ಲಿ ಸುಮಾರು 9000 ಔಷಧಿಗಳಿಗೆ ಪೇಟೆಂಟ್ ಕೇಳಿ ಅರ್ಜಿ ಬಂದಿದೆ. ಅದರಲ್ಲಿ ಹಲವಾರು ಕ್ಷುಲ್ಲಕ ಔಷಧಿಗಳಿಗೆ-ನೋವಾರ್ಟಿಸ್ ಕಂಪನಿ ಗ್ಲೀವ್ಯಾಕ್ ಎಂಬ ಔಷದಿಗೆ ಪೇಟೆಂಟ್ ಕೇಳಿದೆ. ಅದೇ ಔಷಧಿಯನ್ನು ಭಾರತೀಯ ಕಂಪನಿಗಳು ತಯಾರಿಸುತ್ತಿವೆ. ಅದರ ಬೆಲೆ ಕೇವಲ 8000 ರೂಪಾಯಿಗಳು (ವರ್ಷಕ್ಕೆ), ಆದರೆ ಗ್ಲೀವ್ಯಾಕ್ ಔಷಧಿಗೆ 1 ಲಕ್ಷ 40 ಸಾವಿರ ರೂ (ವರ್ಷಕ್ಕೆ). ಪೇಟೆಂಟ್ ಹಾವಳಿಯಿಂದಾಗಿ, ಮುಂದಿನ ದಿನಗಳಲ್ಲಿ ಔಷಧಿಗಳ ಬೆಲೆಗಳು ಹೆಚ್ಚಾಗಲಿವೆ.

ಔಷಧಿಗಳ ವಿಷಯದಲ್ಲಿ ಸರ್ಕಾರ ಜನರಹಿತವನ್ನು ಕಡೆಗಣಿಸಬಾರದು. ಹೊರದೇಶಗಳ ಔಷಧಿ ಕಂಪನಿಗಳಿಗೆ ಬದ್ಧರಾಗಿರುವುದ ಬದಲು, ಜನರ, ಜನರ ಸಮಸ್ಯೆಗಳಿಗೆ ಸ್ಪಂದಿಸಬೇಕು, ಇಲ್ಲವಾದರೆ ದುರಂತ ಖಂಡಿತ.

ಜನಪರ ಔಷಧಿ ನೀತಿ :

ಅಗತ್ಯ ಔಷಧಿಗಳು ಜಾತಿ ಸೂಚಕ ರೂಪದಲ್ಲಿ ಲಭ್ಯವಾಗಿರಬೇಕು. ಅನಗತ್ಯ ಔಷಧಿ ಅಪಾಯಕರ ಔಷಧಿಗಳು ಇರಕೂಡದು. ಔಷಧಿ ನಿಯಂತ್ರಣ, ಔಷಧಿ ಗುಣಮಟ್ಟ ಹಾಗೂ ಬೆಲೆ ನಿಯಂತ್ರಣದ ಬಗ್ಗೆ ಯಾವಾಗಲೂ ಜಾಗರೂಕತೆ ವಹಿಸಬೇಕು.

ರಾಷ್ಟ್ರಮಟ್ಟದಲ್ಲಿ ಔಷಧಿಗಳ ಅಡ್ಡ ಪರಿಣಾಮಗಳನ್ನು ದಾಖಲಿಸಿ ವರದಿ ಮಾಡುವ ವ್ಯವಸ್ಥೆ ಇರಬೇಕು. ಔಷಧಿ ಅಂಗಡಿಗಳಲ್ಲಿ ಅರ್ಹ ಔಷಧಿ ವ್ಯಾಪಾರಿ ಇರುವುದು ಕಡ್ಡಾಯವಾಗಬೇಕು. ಔಷಧಿ ಉಪಯೋಗದ ಗರಿಷ್ಟ ದಿನಾಂಕ ಮೀರಿದ ಔಷಧಿಗಳನ್ನು ಅಂಗಡಿಗಳು ಮಾರಕೂಡದು

ಎಲ್ಲ ಔಷಧಿ ಕಂಪನಿಗಳು ಕಡ್ಡಾಯವಾಗಿ ಅಗತ್ಯ ಔಷಧಿಗಳನ್ನು ತಯಾರಿಸು ವಂತಾಗಬೇಕು. ಔಷಧಿ ಗುಣಮಟ್ಟದ ಬಗ್ಗೆ ಅನುಮಾನ ಬಂದಾಗ ಸರ್ಕಾರಿ ಔಷಧಿ ಪ್ರಯೋಗಲಯದಲ್ಲಿ, ಔಷಧಿ ಪರೀಕ್ಷೆ ಮಾಡಿ ವರದಿ ಮಾಡುವ ಸೌಲಭ್ಯ ಇರಬೇಕು. ಹೊಸ ಔಷಧಿ ಪರೀಕ್ಷೆಯನ್ನು ಔಷಧಿ ನಿಯಂತ್ರಣದಡಿಯಲ್ಲಿಯೇ ಮಾಡಲು, ಕಡ್ಡಾಯ ಮಾಡಬೇಕು. ಔಷಧಿಗಳ ಬಗ್ಗೆ ಎಲ್ಲ ಮಾಹಿತಿ ಜನಸಾಮಾನ್ಯರಿಗೆ ದೊರಕಿಸಬೇಕು.

ಚುಚ್ಚುಮದ್ದು

ಪ್ರಶ್ನಿಸಬಾರದು?

■ "ಆರೆಸ್ಸೆಸ್‌ನಂತಹ ದೇಶಭಕ್ತ ಸಂಘಟನೆಯನ್ನೇ ಪ್ರಶ್ನಿಸಿರುವ ಶಕುಂತಲಾ ಶೆಟ್ಟಿ ತಾನು ಏರಿಬಂದ ಏಣಿಯನ್ನು ಒದ್ದು ದೇಶದ ವಿರೋಧಿ ಶಕ್ತಿಗಳೊಂದಿಗೆ ಶಾಮೀಲಾಗಿದ್ದಾರೆ"

ಡಿ.ವಿ.ಸದಾನಂದಗೌಡ ಬಿಜೆಪಿ ರಾಜ್ಯಾಧ್ಯಕ್ಷ

→ ಅಂದರೆ ಆರೆಸ್ಸೆಸ್ ಅನ್ನು ಪ್ರಶ್ನಿಸುವುದೇ ದೇಶದ್ರೋಹವೇ?

★

ಮಾಡಬೇಡಿ

■ 'ಟಿ.ವಿ.ಯಲ್ಲಿ ತೋರಿಸುವ ಕುಸ್ತಿಯ ತಂತ್ರಗಳನ್ನು ಮನೆಯಲ್ಲಿ ಪ್ರಯೋಗಿಸಬೇಡಿ"

- ದಲೀಪ್ ಸಿಂಗ್, WWF ಕುಸ್ತಿಪಟು

→ ಯಾವುದನ್ನು ಅನುಸರಿಸಬಾರದೋ ಅದನ್ನೇ ತೋರಿಸಿ ಮಕ್ಕಳಿಗೆ. ಅನುಸರಿಸುವಂತಹದ್ದೇನು ತೋರಿಸಬೇಡಿ.

★

■ ಬಿಜೆಪಿ ರಿಯಲ್ ಎಸ್ಟೇಟ್ ಮಂದಿಗೆ ಟಿಕೆಟ್ ನೀಡಿದೆ. ರಿಯಲ್ ಎಸ್ಟೇಟ್ ಕಾನೂನು ಬಾಹಿರ ಕೃತ್ಯವಲ್ಲ. ಬಳ್ಳಾರಿ ಗಣಿ ದೊರೆಗಳು ಅಕ್ರಮ ನಡೆಸುತ್ತಿಲ್ಲ. ಅವರ ಕಾರ್ಯ ನ್ಯಾಯವಾಗಿದೆ. ಅದೊಂದು ವೃತ್ತಿ.

ಡಿ.ವಿ.ಸದಾನಂದಗೌಡ ಬಿಜೆಪಿ ರಾಜ್ಯಾಧ್ಯಕ್ಷ

→ ಇತ್ತೀಚಿನ ಉಪಗ್ರಹ ಸಮೀಕ್ಷಾ ವರದಿ ಓದಿದ್ದೀರಾ?

★

■ ಹಿಂದುತ್ವದ ಆಧಾರದಲ್ಲಿ ಬಿಜೆಪಿ ಬಂದಿದೆ. ಅಧಿಕಾರಕ್ಕೆ ಬಂದರೂ ಅದನ್ನು ಬಿಜೆಪಿ ಬಿಡುವ ಪ್ರಶ್ನೆಯೇ ಇಲ್ಲ. ಅದು ತತ್ವ ಜೀವನ ಪದ್ಧತಿ.

→ ಹುಟ್ಟುಗುಣ ಸುಟ್ಟರೂ ಹೋಗಲ್ಲ. ಅಂತಾರೆ ಅಲ್ವಾ.

★

■ ಗಾಂಧೀಜಿ ಹೆಸರು ಹೇಳುವ ಹಕ್ಕು ಕಾಂಗ್ರೆಸ್‌ಗಿಲ್ಲ

- ನರೇಂದ್ರ ಮೋದಿ

→ ಹೌದು ಗಾಂಧಿಯನ್ನು ಕೊಂದವರಿಗೆ ಮಾತ್ರಾನೇ ಅದು ಇರೋದು !!

ಇದ್ದದ್ದು ಇದ್ದಾಂಗ....

■ "ಉಚಿತ ವಿದ್ಯುತ್ ನೀಡುವುದಾಗಿ ಬಿಜೆಪಿ ಈ ಬಾರಿ ಪ್ರಣಾಳಿಕೆಯಲ್ಲಿ ಪ್ರಕಟಿಸಿದೆ. ದೇಶದ ಏಳು ರಾಜ್ಯಗಳಲ್ಲಿ ಬಿಜೆಪಿ ಅಧಿಕಾರದಲ್ಲಿದೆ. ಅಲ್ಲಿ ಯಾಕೆ ರೈತರಿಗೆ ಉಚಿತ ವಿದ್ಯುತ್ ನೀಡುತ್ತಿಲ್ಲ."

ಎಚ್.ಡಿ.ದೇವೇಗೌಡ, ಜೆಡಿ(ಎಸ್) ರಾಷ್ಟ್ರಾಧ್ಯಕ್ಷ

★

ನೀತಿಸಂಹಿತೆಗೆ 40 ಕೋಟಿ

■ "ಚುನಾವಣೆಗೆ ಸಂಬಂಧಿಸಿದಂತೆ ರಾಜ್ಯದಲ್ಲಿ ಇಲ್ಲಿಯವರೆಗೆ 1915 ಪ್ರಕರಣಗಳು ದಾಖಲಾಗಿದ್ದು, ನಗದು ಹಣ ಸೇರಿದಂತೆ 40.83 ಕೋಟಿ ರೂ. ಮೌಲ್ಯದ ಸಾಮಗ್ರಿಗಳನ್ನು ವಶಪಡಿಸಿಕೊಳ್ಳಲಾಗಿದೆ."

ಗೋಪಾಲಸ್ವಾಮಿ ಮುಖ್ಯ ಚುನಾವಣಾ ಆಯುಕ್ತ

★

■ "ಬಳ್ಳಾರಿಯಲ್ಲಿ ಜೆಡಿ(ಎಸ್) ಪ್ರಚಾರಕ್ಕೆ ನಾನು ಹೋಗುವುದಿಲ್ಲ. ಗಣಿ ಧಣಿಗಳ ಅಟ್ಟಹಾಸದ ಮುಂದೆ ನಾನೇನು ಮಾಡಲು ಸಾಧ್ಯ"

ಎಚ್.ಡಿ.ದೇವೇಗೌಡ

ಕವನ

ಇಂದೇ.... ಈಗಲೇ

ಸೂರ್ಯ
ನಿನ್ನದೆಂಥಾ ಬಿಸಿಲೋ
ನಮ್ಮ ಹೊಟ್ಟೆಯ
ಹಸಿವಿನ ಮುಂದೆ

ಮೋಡಗಳೇ
ನಿಮ್ಮದೆಂಥಾ ಮಳೆಯೋ
ನಮ್ಮ ಬಡತನದ
ಕಣ್ಣೀರಿನ ಮುಂದೆ

ಬಿರುಗಾಳಿಯೇ
ನಿನ್ನದೆಂಥಾ ಆರ್ಭಟವೋ
ನಮ್ಮ ಶಾಂತಿ ಕಳೆದ
ನಿಟ್ಟುಸಿರಿನ ಮುಂದೆ

ಸೂರ್ಯ
ಸುಡು
ಹಸಿಹಸಿ ಹಸಿವ
ಬಿಸಿಲಿರಲಿ
ಹೊಂಬಿಸಿಲಾಗಿ

ಮಳೆಯೇ
ಸುರಿ
ಬಡತನ ಬಡವಾಗುವ
ಮಳೆಯ
ಹೊನ್ನೊಳೆಯ

ಬಿರುಗಾಳಿಯೇ
ಬೀಸು
ನೆಮ್ಮದಿಯ ನೆಮ್ಮದಿಯಾಗಿ
ಗಾಳಿ
ತಂಗಾಳಿ
ಇಂದೇ
ಈಗಲೇ
ಈ ಕ್ಷಣವೇ....

ಕೋಟಿ ಕೋಟಿ ಜನರ ಕನಸು
ನನಸಾಗಲಿ
ಶತ ಶತಮಾನದ ಕ್ರೂರ ಶಾಪ
ಕೊನೆಯಾಗಲಿ.

- ವಿ.ಹರಿನಾಥ ಬಾಬು
ಸಿರುಗುಪ್ಪ

......'ಬ್ರಾಂಡ್' ಇಂದಿನ ವಿಶೇಷ ಸಂಸ್ಕೃತಿ

ಪುಟ 2 ರಿಂದ

ಕುಣಿಯುವುವು. ಕಮಿಶನ್ ಏಜೆಂಟ್‌ಗಳು ಕ್ಯೂಬಾ, ವಿಯೆಟ್ನಾ, ಉತ್ತರ ಕೊರಿಯಾವನ್ನು ತೀವ್ರವಾಗಿ ವಿರೋಧಿಸುತ್ತವೆ. ಆದರೆ ಬಹುರಾಷ್ಟ್ರೀಯ ಕಂಪೆನಿಗಳ ದೈತ್ಯಶಕ್ತಿಯಿಂದಾಗಿ ಅವು ಸಾಕಷ್ಟು ಯಾತನೆಯನ್ನು ಅನುಭವಿಸುತ್ತಿವೆ. ಕಂಪೆನಿಗಳ ಬೇಳೆ ಅಷ್ಟು ಸುಲಭದಲ್ಲಿ ಬೇಯುವುದಿಲ್ಲ.

ರಾಕ್ಷಸ ಸಂತಾನದಂತೆ ಬೆಳೆಯುತ್ತಿರುವ ಜಾಗತಿಕ ವ್ಯಾಪಾರ ವ್ಯವಸ್ಥೆಯಿಂದಾಗಿ ಬಂಡವಾಳ ಮತ್ತು ಸಂಪನ್ಮೂಲಗಳಿಗಾಗಿ ಬಹುರಾಷ್ಟ್ರೀಯ ಕಂಪೆನಿಗಳು ಏನು ಬೇಕಾದರೂ ಮಾಡಲು ಸಿದ್ಧವಿವೆ. ಮೂರನೆಯ ವಿಶ್ವದ ನಿರ್ದಯಿ ಸರ್ವಾಧಿಕಾರಿಗಳ ಜೊತೆಗೆ ಸಖ್ಯ ಮಾಡಿಕೊಳ್ಳುತ್ತಾ, ತಮ್ಮ ಕೈಗಾರಿಕೆಗಳನ್ನು ಕಂಟ್ರಾಕ್ಟರುಗಳಿಗೆ ಮಾರುತ್ತಾ, ಕಾರ್ಮಿಕರಿಗೆ ಅತ್ಯಂತ ಕಡಿಮೆ ಸಂಬಳ ಕೊಡುತ್ತಾ ಬೇಕಾದ್ದನ್ನು ಸಾಧಿಸುವುದು ಸಾಧ್ಯವಾಗಿದೆ. ಏಕೆಂದರೆ ವ್ಯಾಪಾರದ ಅಂತರಾಷ್ಟ್ರೀಯ ನಿಯಮ ಮತ್ತು ಕಾನೂನುಗಳೆಲ್ಲಾ ಅತ್ಯಂತ ಸಡಿಲವಾಗಿವೆ. ಇವರನ್ನು ತಡೆಯುವವರು ಯಾರೂ ಇಲ್ಲ.

ಯುರೋಪ್ ಮತ್ತು ಅಮೆರಿಕಾದಲ್ಲಿ ನಡೆದ ಹಲವಾರು ಸಂಶೋಧನೆಗಳ ಪ್ರಕಾರ ಜಾಹೀರಾತುಗಳು ಮಕ್ಕಳ ಮೇಲೆ ಗಂಭೀರ ಪರಿಣಾಮವನ್ನು ಬೀರುತ್ತವೆ. ಮಕ್ಕಳ ಕಾಮನೆಗಳನ್ನು ನಿಯಂತ್ರಿಸುವ ಸಮಸ್ಯೆ ವಿರಳವಾಗುತ್ತಿರುವುದು ಇಂದಿನ ವಾಸ್ತವ. ಮಕ್ಕಳು ಬ್ರಾಂಡುಗಳ ಗುಲಾಮರಾಗಿಬಿಡುತ್ತಾರೆ. ಅದು ಸಿಗದಿದ್ದಾಗ ಅವರ ಪ್ರವೃತ್ತಿ ಹಿಂಸಾತ್ಮಕವಾಗುತ್ತದೆ. ಕೆಲ ಸಮಯದ ಹಿಂದೆ ದಿಲ್ಲಿಯ ಕನಾಟ್ ಪ್ಲೇಸ್‌ನಲ್ಲಿ ಒಂದು ಅಂಗಡಿಯ ಗಾಜೊಡೆದು ನವ ಯುವಕರು ಜೀನ್ಸ್ ಪ್ಯಾಂಟ್ ಕದ್ದಿದ್ದರು. ಅವರು ಎಂಜನಿಯರಿಂಗ್ ವಿದ್ಯಾರ್ಥಿಗಳಾಗಿದ್ದರು. ಇಂಥ ಸಾವಿರ ಉದಾಹರಣೆಗಳು ಇಂದು ಸಹಜವಾಗಿಯೇ ಸಿಗುತ್ತದೆ. ವಾನ್ಸ್ ಪೆಕರ್ಡ್ ತನ್ನ ಪ್ರಸಿದ್ಧ ಅಧ್ಯಯನ 'ದಿ ಹಿಡನ್ ಪರ್ಸುವೇಡರ್'ನಲ್ಲಿ ಜಾಹೀರಾತುಗಳು ಹೇಗೆ ಪುಸಲಾಯಿಸುತ್ತವೆ ಎಂಬುದನ್ನು ಶೋಧಿಸಿದ್ದಾರೆ '1981'. ಡಗಸ್ ಕೆಲನರ್ '1990' ಜಾಹೀರಾತು ಮತ್ತು ಕನ್‌ಸ್ಯೂಮರ್ ಸಂಸ್ಕೃತಿಯ ಸಂಬಂಧಗಳನ್ನು ಚೆನ್ನಾಗಿ ವಿಶ್ಲೇಷಿಸಿದ್ದಾರೆ. ಜೆರಿ ಮೆಂಡರ್ ಅಂತೂ ಟೆಲಿವಿಶನ್‌ಗಳನ್ನೆ ನಾಶ ಮಾಡಿಬಿಡಬೇಕೆಂದು ಕರೆ ಕೊಟ್ಟಿದ್ದಾರೆ. ಅಮೆರಿಕಾದ ಸಮಾಜದಲ್ಲಿ ಟಿ.ವಿ.ಗೂ ಮತ್ತು ಹಿಂಸೆಗೂ ನಿಕಟ ಸಂಬಂಧವಿದೆಯೆಂಬುದು ಅಧ್ಯಯನದಿಂದ ತಿಳಿದು ಬಂದಿದೆ. ಅದನ್ನು ನಾವು ನಮ್ಮ ದೇಶದಲ್ಲಿ ಇಂದು ಪ್ರತ್ಯಕ್ಷವಾಗಿಯೇ ನೋಡುತ್ತಿದ್ದೇವೆ.

ಎಂ.ಟಿ.ವಿ.ಯ ವಿಕೃತ ಮುಖ

ಎಮ್.ಟಿ.ವಿ. ಬಗೆಗೆ ಹೇಳುವುದಾದರೆ ಅದೊಂದು ಕೇವಲ ಚಾನೆಲ್ ಅಲ್ಲ, ಕೇವಲ ಒಂದು ಬ್ರಾಂಡೂ ಅಲ್ಲ. ಅದು ಜಗತ್ತಿನ ಚಿರ ಯುವಕರ ಜೀವನ. ಸುದೀಶ್ ಪಚೌರಿ ತಮ್ಮ 'ಮೀಡಿಯಾ ಜನ ತಂತ್ರ ಔರ್ ಆತಂಕವಾದ್' ಎಂಬ ಕೃತಿಯಲ್ಲಿ ಎಮ್.ಟಿ.ವಿ. ಪರಿಣಾಮಗಳ ಬಗ್ಗೆ ಹೀಗೆ ವಿಶ್ಲೇಷಿಸುತ್ತಾರೆ.

'ಎಮ್.ಟಿ.ವಿ., ಎಮ್ ಎಂದರೆ ಮ್ಯೂಸಿಕ್, ಎಮ್ ಎಂದರೆ ಯಮರಾಜ. ಎಮ್ ನಿಂದ ನಾನು, ನನ್ನ. ನಾನು ಎಂದರೆ ಸ್ವಯಂವಾದೀ ಸಂಗೀತ. 12 ರಿಂದ 24ರ ವಯಸ್ಸಿನವರಿಗೆ ಮ್ಯೂಸಿಕ್ ಗ್ಲೋಬಲ್ ಸಂಗೀತ್' ಹಾಡು, ಆನಂದ, ಅನಂತ ಆನಂದ, ಹಳಬರಿಗೆ - ವೃದ್ಧರಿಗೆ ಯಮರಾಜ. ಎಮ್.ಟಿ.ವಿ.ಗೆ ಈಗ 20 ವರ್ಷ. ಸದಾ 20 ವರ್ಷದಲ್ಲೇ ಇರಲು ಪೆಪ್ಸಿಯೊಟ್ಟಿಗೆ ಸೇರಿ ಎಮ್.ಟಿ.ವಿ. ರೀಸರ್ಚ್ ಮಾಡಿದೆ. 12 ರಿಂದ 24 ಮಯಸ್ಸಿನ ಸಾವಿರಾರು ಮಕ್ಕಳ ಇಂಟರ್‌ವ್ಯೂ ನಡೆಸಲಾಯಿತು. ಇದರ ಫಲಿತಾಂಶವೇನೆಂದರೆ ನಮ್ಮ ಸಮಾಜದ ಈ ಪ್ರಾಯದ ಮಕ್ಕಳ ಜಗತ್ತೆಂದರೆ - 'ನಾನು, ನನ್ನ ಮತ್ತು ಕೇವಲ ಹೈದ್ರಾಬಾದ್, ನಾನು' ದಿಲ್ಲಿ, ಮುಂಬೈ, ಕೋಲ್ಕತ್ತಾ, ಚೆನ್ನೈ, ಹೈದ್ರಾಬಾದ್, ಬೆಂಗಳೂರಿನಲ್ಲಿ ಇವರು ಅಧಿಕ ಸಂಖ್ಯೆಯಲ್ಲಿ ಸಿಗುತ್ತಾರೆ. ಅವರು ತೆಳ್ಳಗೆ ಇರಲು ಬಯಸುತ್ತಾರೆ. ಅವರು ಎಲ್ಲೆಂದರಲ್ಲಿ ಕಂಡು ಬರುತ್ತಾರೆ. ಬ್ರಾಂಡ್ ಮಾರುವ ಶೋರೂಂನಲ್ಲಿ ಕಂಡು ಬರುತ್ತಾರೆ. ಬ್ರಾಂಡ್ ಮಾರುವ ಶೋರೂಂನಲ್ಲೆ ಅವರು ಖರೀದಿಸಲು ಬಯಸುತ್ತಾರೆ. ಒಂದು friendly ಮ್ಯಾಚ್‌ನಲ್ಲೂ ಅವರಿಗೆ ಸೋಲು ಎಂದರೆ ಅಸಹ್ಯ. ಅವರು ತಮ್ಮ ವೃದ್ಧ ತಂದೆ ತಾಯಿಯುವರನ್ನು ವೃದ್ಧಾಶ್ರಮಕ್ಕೆ ಕಳುಹಿಸಲು ಬಯಸುತ್ತಾರೆ... ಇದು ಬ್ರಾಂಡ್‌ಗಳ 'ಕೂಲ್ ಸಂಸ್ಕೃತಿ' .

ಸೌಂದರ್ಯದ ಮೊದಲ ಅಗತ್ಯವೆಂದರೆ ಯೌವನವನ್ನು ಹಾಗೇ ಇರಿಸಿಕೊಳ್ಳುವುದು. ಯುವತಿಯ ಹಾಗೆ ಕಾಣುವ ವೃದ್ಧೆಗೆ ತಾನು ಸ್ವತಃ ಫಿಟ್ ಆಗಿರುವುದು ಮುಖ್ಯ. ವೃದ್ಧಾಪ್ಯ ಒಂದು ಪ್ರಾಕೃತಿಕ ಘಟನೆ ಅಲ್ಲ, ದುರ್ಘಟನೆ! ಈ ದುರ್ಘಟನೆಯಿಂದ ಮಹಿಳೆಯರನ್ನು ರಕ್ಷಿಸಲು ಕಾಸ್ಮೆಟಿಕ್ ಡಯೆಟಿಂಗ್ ಕೈಗಾರಿಕೆಗಳಿವೆ. ಅವುಗಳ ಬ್ರಾಂಡ್‌ಗಳು ಹಗಲೂ ರಾತ್ರಿ ಟಿವಿ ಪರದೆಯಲ್ಲಿ ಕುಣಿಯುತ್ತಿರುತ್ತವೆ. ಕೇವಲ ಅಮೆರಿಕಾ ಒಂದರಲ್ಲೆ ಡಯಟ್ ಕೈಗಾರಿಕೆಯಲ್ಲಿ 4500 ಕೋಟಿ ರೂಪಾಯಿ ವ್ಯಾಪಾರವಾಗುತ್ತದೆ. ಇಂದು ಪ್ರತಿಯೊಂದು ಹೆಣ್ಣೂ ತನ್ನ ರೂಪದ ಬಗ್ಗೆ ಚಿಂತಿತಳಾಗುತ್ತಾಳೆ. ಇಂದು ಸಾಮಾನ್ಯ ಹೆಂಗಸಿಗೆ ಹೋಲಿಸಿದರೆ ಮಾಡೆಲ್ ತರುಣಿಯ ಭಾರ ಶೇ. 24 ಕಡಿಮೆ. ದಪ್ಪದ ಸಿನಿಮಾ ಆ್ಯಕ್ಟ್ರೆಸ್‌ಳನ್ನು ಕಲ್ಪಿಸುವುದೂ ಅಸಾಧ್ಯ. ಈ ಬ್ರಾಂಡ್ ಮಹಿಳೆಯರಿಂದಾಗಿ ಇಂದು ಸಾಮಾನ್ಯ ಸ್ತ್ರೀಯರು ಅದೃಶ್ಯವಾಗಿ ಹೋಗಿದ್ದಾರೆ. ಇಂದು ಪತ್ರಿಕೆಗಳಲ್ಲಿ, ಟಿ.ವಿ.ಯಲ್ಲಿ ಪ್ರತಿಯೊಂದು ಬ್ರಾಂಡಿನ ಜತೆಗೂ ಕಾಣಿಸುವ ಅರೆನಗ್ನ ಹುಡುಗಿಯರನ್ನು ಇಂದಿನ ನಾಗರಿಕ ಸಮಾಜ ಒಪ್ಪಿಕೊಂಡು ಬಿಟ್ಟಿದೆ. 'ಸ್ತ್ರೀ' ಎಂದರೆ ಕೇವಲ ಒಂದು ದೇಹ 'ಮನುಷ್ಯ ಅಲ್ಲ' ಎಂಬುದು ಇಂದಿನ ಸಾಮಾಜಿಕ ಮಾನಸದಲ್ಲಿ ಅಚ್ಚೊತ್ತಲ್ಪಟ್ಟ ವಿಚಾರ. ಮನೋರಂಜನಾ ಕೈಗಾರಿಕೆಯ ಬಹು ದೊಡ್ಡ ಗ್ರಾಹಕ ಪುರುಷ. ಆತನನ್ನು ತೃಪ್ತಿ ಪಡಿಸಲು ಹೆಣ್ಣು ಬೇಕು. ಸಾಮಂತ ಯುಗದಲ್ಲೂ ರಾಜ ಮಹಾರಾಜರ ಎದುರಲ್ಲಿ ಹೆಣ್ಣು ಅಂಗ ಪ್ರದರ್ಶಿಸಿ ನರ್ತಿಸುತ್ತಿದ್ದಳು. ಈಗೀನದ್ದು ಒಂದು ಹೊಸ ಬಗೆಯ ಪಾಳೇಗಾರಿ ಯುಗ. ಇಂದು ಸೆಕ್ಸ್ ಎಷ್ಟು ಪರಾಕಾಷ್ಠೆಗೆ ತಲುಪಬಹುದೊ ಅಷ್ಟೂ ಪರಾಕಾಷ್ಠೆಗೆ ತಲುಪಿ ಅದು ಒಂದು ಪರ್ವರ್ಶನ್‌ಗೆ ಒಳಗಾಗಿದೆ. ಸುಕೋಮಲ, ಶುಭ್ರ, ಪ್ರೇಮ ಸತ್ತು ಹೋಗಿ ಪ್ಲಾಸ್ಟಿಕ್ ಬ್ರಾಂಡ್ ಭೂಮಂಡಲವನ್ನೇ ವ್ಯಾಪಿಸಿದೆ. ಹೊಸ ಬ್ರಾಂಡ್ ಸಂಸ್ಕೃತಿ ಬೆಳೆದು



'ಮುಸ್ಸಂಜೆ ಮಾತು' - ಮಾನವೀಯ ಮೌಲ್ಯಗಳ ಉದ್ದೀಪನ

ರೇಡಿಯೋ ಚಾನಲ್‌ನಲ್ಲಿ ಒಂದರಲ್ಲಿ ಕೆಲವು ತಿಂಗಳುಗಳ ಹಿಂದೆ ರಾತ್ರಿ 9.30 ರ ಸಮಯದಲ್ಲಿ ಪ್ರಸಾರವಾಗುತ್ತಿದ್ದ ಕಾರ್ಯಕ್ರಮವದು. ನೊಂದ ಮನಸುಗಳಿಗೆ ಸಾಂತ್ವನ ನೀಡುವ 'ನೆನಪಿನ ದೋಣಿ' ಕಾರ್ಯಕ್ರಮ. ಆ ಕಾರ್ಯಕ್ರಮ ನಡೆಸಿಕೊಡುವ ರೇಡಿಯೋ ಜಾಕಿ ಪ್ರದೀಪನ ಮಾತುಗಾರಿಕೆಯೇ ಆ ಕಾರ್ಯಕ್ರಮದ ವಿಶೇಷತೆ. ಎಂತಹವರೂ ಮನಬಿಚ್ಚಿ ಮಾತನಾಡುವಂತೆ ಪ್ರೇರೇಪಿಸುವ ಅವರ ಆತ್ಮೀಯ ಧ್ವನಿ ಹಲವು ಜನರನ್ನು ಮರುಳು ಮಾಡಿದ್ದು ನಿಜ. ವಿಶೇಷವಾಗಿ ಮಹಿಳೆಯರು ಇದರಿಂದ ಪ್ರಭಾವಿತರಾಗಿದ್ದು, ಸಾಕಷ್ಟು ಪ್ರಸಿದ್ಧಿ ಪಡೆದಿತ್ತು ಈ ಕಾರ್ಯಕ್ರಮ.

ಯಾರಲ್ಲಿಯೂ ಹೇಳಿಕೊಳ್ಳಲಾಗದ, ಹೇಳದೆ ಇರಲೂ ಆಗದ, ಬದುಕಿನಲ್ಲಿ ಆಗಿ ಹೋದ ಹಲವು ಸಿಹಿ-ಕಹಿ ನೆನಪುಗಳಿಗೆ ಕಿವಿಯಾಗಿ, ಒಂದಿಷ್ಟು ಸಾಂತ್ವನ, ಒಂದಿಷ್ಟು ಧೈರ್ಯ ಹೇಳಿ ಬದುಕಿಗೆ ಆತ್ಮಸ್ಥೈರ್ಯ ತುಂಬುತ್ತಿದ್ದ ಈ ಕಾರ್ಯಕ್ರಮ ತುಂಬಾ ಪ್ರಭಾವಶಾಲಿಯಾಗಿತ್ತು. ಇದರ ಯಶಸ್ಸಿನ ಕೇಂದ್ರಬಿಂದು ರೇಡಿಯೋ ಜಾಕಿ ಪ್ರದೀಪ ಮತ್ತು ಆತನ ಧ್ವನಿ.

ಈ ಕಾರ್ಯಕ್ರಮದಿಂದ ಪ್ರಭಾವಿತರಾಗಿಯೇ ನಿರ್ದೇಶಕರಾದ ಮಹೇಶ್ 'ಮುಸ್ಸಂಜೆ ಮಾತು' ಚಿತ್ರಕ್ಕೆ ಕಥೆ ಹೆಣೆದಿದ್ದಾರೆ. ಚಿತ್ರದ ನಾಯಕ (ಸುದೀಪ್) ರೇಡಿಯೋ ಜಾಕಿ. ಹೆಸರು ಅದೇ 'ಪ್ರದೀಪ'. ಅವನು ನಡೆಸಿಕೊಡುವ ಕಾರ್ಯಕ್ರಮವೇ 'ಮುಸ್ಸಂಜೆ ಮಾತು'. ಹಲವರ ಸುಖ-ದುಃಖಗಳಲ್ಲಿ ಭಾಗಿಯಾಗಿ ಈ ಕಾರ್ಯಕ್ರಮದಿಂದಲೇ ಹಲವು ಅಭಿಮಾನಿಗಳನ್ನು ಸೃಷ್ಟಿಸಿಕೊಂಡವನು. ಹೆಚ್ಚಿನ ಆದಾಯದ ಬೇರೆ ಮಾರ್ಗಗಳಿದ್ದರೂ ಇದರಲ್ಲೇ ನೆಮ್ಮದಿ ಕಂಡುಕೊಂಡ ಸಭ್ಯ ಯುವಕ. ವ್ಯಕ್ತಿಯಾಗಿಯೂ ಮಾನವೀಯ ಮೌಲ್ಯಗಳನ್ನು ರೂಢಿಸಿಕೊಂಡವನು.

ಇದನ್ನೇ ಆಧಾರವಾಗಿಟ್ಟುಕೊಂಡು ಮಾನವೀಯ ಮೌಲ್ಯಗಳನ್ನು ಉತ್ತೇಜಿಸುವ ಹಲವು ಸನ್ನಿವೇಶಗಳನ್ನು ಹೆಣೆದು ಜಾಣ್ಮೆ ಮೆರೆದಿದ್ದಾರೆ ನಿರ್ದೇಶಕರು ಮತ್ತು ನೋಡುಗನ ಮನಮುಟ್ಟುವಂತೆ ನಿರೂಪಿಸುವಲ್ಲಿಯೂ ಯಶಸ್ವಿಯಾಗಿದ್ದಾರೆ ಅವರು.

ನಾಯಕಿ ತನು (ರಮ್ಯಾ) ಬದುಕಿನಲ್ಲಿ ನೊಂದ ಯುವತಿ. ತಾಯಿ ಸತ್ತ ನಂತರ ಕುಡುಕ ತಂದೆಯಿಂದಲೇ ಮನೆಯಿಂದ ಹೊರಗಟ್ಟಿಸಿಕೊಂಡ ನತದೃಷ್ಟೆ. ಸ್ನೇಹಿತೆಯ ಮನೆಯಲ್ಲಿ ಆಸರೆ ಪಡೆದವಳು. ಆ ಸ್ನೇಹಿತೆ (ಅನು ಪ್ರಭಾಕರ್) ಪ್ರದೀಪನ ಅಭಿಮಾನಿ. ಅವನ ಸಾಂತ್ವನದ ಮಾತುಗಳಿಗೆ ಮರುಳಾದವಳು. ತನ್ನ ಸ್ನೇಹಿತೆಗೂ ಆತನೊಂದಿಗೆ ಮಾತನಾಡುವಂತೆ ಒತ್ತಾಯಿಸುತ್ತಾಳೆ. ಆಕೆ ಮಾತನಾಡುತ್ತಾಳೆ ಮತ್ತು ಆತನ ಮಾತುಗಳಿಂದ ಬದುಕಿಗೆ ಧೈರ್ಯ ತಂದುಕೊಳ್ಳುತ್ತಾಳೆ.

ಅಕಸ್ಮಿಕವಾಗಿ ಮುಖತಃ ಭೇಟಿಯಾಗುವ ಪ್ರದೀಪ ಮತ್ತು ತನು ಆತ್ಮೀಯ ಸ್ನೇಹಿತರಾಗುತ್ತಾರೆ. ಪರಸ್ಪರ ಒಲವಿದ್ದರೂ, ಎಲ್ಲಿ ಸ್ನೇಹಕ್ಕೆ ಧಕ್ಕೆ ಬರುತ್ತದೋ ಎಂಬ ಕಾರಣಕ್ಕೆ ಪರಸ್ಪರ ಹೇಳಿಕೊಳ್ಳುವುದಿಲ್ಲ. ಅಂತಿಮವಾಗಿ ತನು ಬೇರೊಬ್ಬರನ್ನು ಮದುವೆಯಾಗಲು ನಿಶ್ಚಯಿಸಿದಾಗ ಪ್ರದೀಪ ಆಘಾತಕ್ಕೊಳಗಾಗುತ್ತಾನೆ.

ದುಃಖಿತನಾಗಿ ತನ್ನ 'ಮುಸ್ಸಂಜೆ ಮಾತು' ಕಾರ್ಯಕ್ರಮದಿಂದಲೂ ದೂರ ಉಳಿಯುತ್ತಾನೆ. ಆದರೆ ಆತನ ಮಾತನ್ನು ಕೇಳಲು ಹಂಬಲಿಸುವ ಅಭಿಮಾನಿಗಳು ರೇಡಿಯೋ ಕೇಂದ್ರಕ್ಕೆ ಮುತ್ತಿಗೆ ಹಾಕಿ ಕಾರ್ಯಕ್ರಮಕ್ಕೆ ಒತ್ತಾಯಿಸುತ್ತಾರೆ. ನೋವಿನಲ್ಲಿದ್ದ ಪ್ರದೀಪನಿಗೆ ಅವರು ಸಾಂತ್ವನ ನೀಡುತ್ತಾ, ನೋವಿಗೆ ಕಾರಣವಾದ ವಿಷಯವನ್ನು ತಿಳಿಸಲು ಒತ್ತಾಯಿಸುತ್ತಾರೆ. ಆಗ ತಾನು ತನುವನ್ನು ಪ್ರೀತಿಸಿದ್ದು, ಆಕೆಗೆ ಅದು ಗೊತ್ತಿಲ್ಲದ್ದು ಮತ್ತು ಈಗಲೂ ಆಕೆಯ ಜೀವನಕ್ಕೆ ಅಡ್ಡಗಾಲು ಹಾಕಲು ಇಷ್ಟವಿಲ್ಲದ್ದನ್ನೆಲ್ಲಾ ಅವರ ಮುಂದೆ ಹೇಳಿಕೊಳ್ಳುತ್ತಾನೆ. ಈ ಸಮಯದಲ್ಲಿ ಪ್ರದೀಪನ



ಸ್ನೇಹಿತ ಆತನ ಮಾತುಗಳನ್ನು ರೇಡಿಯೋ ಪ್ರಸಾರಕ್ಕೆ ಸಂಪರ್ಕಿಸುತ್ತಾನೆ. ಮದುವೆ ಮನೆಯಲ್ಲಿದ್ದ ತನು ಈ ಮಾತುಗಳನ್ನು ಕೇಳಿ ಸಂತೋಷಗೊಂಡು ರೇಡಿಯೋ ಕೇಂದ್ರಕ್ಕೆ ಧಾವಿಸುತ್ತಾಳೆ. ಅವಳನ್ನು ಮದುವೆಯಾಗಲಿದ್ದ ಹುಡುಗನು ಅದಕ್ಕೆ ಸಮ್ಮತಿಸುತ್ತಾನೆ. ಅಂತಿಮವಾಗಿ ಪ್ರದೀಪ್-ತನು ಒಂದಾಗುವುದರೊಂದಿಗೆ ಚಿತ್ರ ಅಂತ್ಯವಾಗುತ್ತದೆ.

ಚಿತ್ರದ ಕಥೆ ಸಾಮಾನ್ಯ ಪ್ರೇಮಕಥೆಯೇ ಆದರೂ ನೊಂದ ಜೀವಿಗಳಿಗೆ ಸಹಾಯ ಮಾಡಲಾಗದಿದ್ದರೂ ಕನಿಷ್ಠ ಸಾಂತ್ವನ, ಆತ್ಮೀಯತೆಯನ್ನಾದರೂ ತೋರಿಸುವಂತಹ ಮನಸುಳ್ಳವರಾಗಬೇಕೆಂಬ ಬಯಕೆ, ತುಡಿತ ಈ ಚಿತ್ರದಲ್ಲಿದೆ. ಸ್ವಾಸ್ಥ್ಯಪೂರ್ಣ ಸಮಾಜಕ್ಕೆ ಉತ್ತಮ ನಾಗರಿಕರಾಗಬೇಕೆಂಬ ಆಶಯವಿದೆ. ಇದಕ್ಕೆ ಪೂರಕವಾಗಿಯೇ ಹಲವು ಸನ್ನಿವೇಶಗಳನ್ನು ಹೆಣೆಯಲಾಗಿದೆ. ಅವು ಮನಸ್ಸನ್ನು ತಟ್ಟುತ್ತದೆ ಕೂಡಾ.

ಕೆಲವು ಅಸಂಗತ, ಅಸಂಬದ್ಧ ಸನ್ನಿವೇಶಗಳೂ ಇವೆ. ಉದಾಹರಣೆಗೆ ಆತ್ಮವಿಶ್ವಾಸದ ಪ್ರತೀಕವಾದ ಪ್ರದೀಪ ತನ್ನ ಪ್ರೇಮ ವಿಫಲವಾದಾಗ ಆಕಾಶವೇ ತಲೆಮೇಲೆ ಬಿದ್ದಂತೆ ದುಃಖಿಸುವುದು ಅತಿರೇಕವಾಯಿತು. ಮತ್ತು ದೇವಸ್ಥಾನವೊಂದಲ್ಲಿ ತಕ್ಕಡಿಯ ಒಂದು ಭಾಗಕ್ಕೆ ಒಂದು ಮೊಳ ಹೂ ಹಾಕಿದರೆ ಇನ್ನೊಂದು ಭಾಗದಲ್ಲಿರುವ ಲಿಂಗವನ್ನು ಮೇಲೆತ್ತಿ ಹೂವು ಇರುವ ಭಾಗ ಕೆಳಗೆ ಬಂದರೆ ಬಯಸಿದ್ದು ಈಡೇರುತ್ತದೆ ಎಂಬ ಸನ್ನಿವೇಶಗಳು ಚಿತ್ರಕ್ಕೂ ಪೂರಕವೂ ಅಲ್ಲ ಮತ್ತು ಮೂಢನಂಬಿಕೆಯನ್ನು ಪ್ರಚೋದಿಸುವಂತದ್ದು.

ಪ್ರದೀಪನಾಗಿ ಸುದೀಪ್ ನವ ಯುವಕನಾಗಿ ಮನ ಸೆಳೆಯುತ್ತಾರೆ. ರಮ್ಯಾ, ಅನು ಪ್ರಭಾಕರ್ ಇವರ ಅಭಿಯಯವೂ ಉತ್ತಮವಾಗಿದೆ. ಸಂಗೀತ ನಿರ್ದೇಶಕ ವಿ.ಶ್ರೀಧರ್‌ರವರ ಸಂಗೀತ ಮಧುರವಾಗಿದೆ. ಎರಡು ಹಾಡುಗಳು ಚಿತ್ರದ ಪ್ರಮುಖ ಆಕರ್ಷಣೆ. ಯಾವುದೇ ಅತಿರೇಕಗಳಿಲ್ಲದ, ಲಾಂಗು ಮಚ್ಚುಗಳಿಲ್ಲದ, ಮನೆಮಂದಿಯೆಲ್ಲಾ ಒಂದಿಷ್ಟು ಮುಜುಗರಕ್ಕೊಳಗಾಗದೆ ಕೂತು ನೋಡಬಹುದಾದ ಸುಂದರ ಚಿತ್ರ 'ಮುಸ್ಸಂಜೆ ಮಾತು'.

○



ಒಂದೇ ರಾಕೆಟ್‌ನಲ್ಲಿ ಹತ್ತು ಉಪಗ್ರಹಗಳ ಉಡಾವಣೆ

ಬಾಹ್ಯಾಕಾಶ ಸಂಸ್ಥೆ ಇಸ್ರೋ ಮತ್ತೊಂದು ಹೆಜ್ಜೆ

ಈ ಬಾರಿ ಹತ್ತು ಉಪಗ್ರಹಗಳನ್ನು ಇಸ್ರೋ ಸಂಸ್ಥೆಯು ಒಂದೇ ರಾಕೆಟ್ ವಾಹನದಲ್ಲಿ ಅಂತರಿಕ್ಷಕ್ಕೆ ಯಶಸ್ವಿಯಾಗಿ ಕಳುಹಿಸಿರುವುದು ಎಲ್ಲೆಡೆ ಸುದ್ದಿಯಾಗಿದೆ. 230 ಟನ್ ತೂಕದ ಪಿಎಸ್‌ಎಲ್‌ವಿ-ಸಿ9 ಹೆಸರಿನ ರಾಕೆಟ್, 824 ಕೆಜಿ ತೂಕವಿರುವ ಹತ್ತು ಉಪಗ್ರಹಗಳ ಭಾರವನ್ನು ಹೊತ್ತೊಯ್ದಿತು. ಭೂಮಿಯಿಂದ 637 ಕಿ.ಮೀ ಎತ್ತರದಲ್ಲಿರುವ ಭೂಮಿಯ ಸುತ್ತಲೂ ಇರುವ ಅಂತರಿಕ್ಷದ ಕಕ್ಷೆಗೆ ಹತ್ತು ಉಪಗ್ರಹಗಳನ್ನು ತಲುಪಿಸಿತು. ಉಪಗ್ರಹವು ಅನುಸರಿಸುವ ಪಥವನ್ನು ಕಕ್ಷೆಯೆನ್ನುತ್ತಾರೆ. ಹೀಗೆ ಉಡಾವಣೆಗೊಂಡ ಎಲ್ಲ ಉಪಗ್ರಹಗಳು ಭೂಮಿಯ ಮೇಲಿನ ನಿಯಂತ್ರಣ ಕೇಂದ್ರಗಳಿಗೆ ಸಂದೇಶ ರವಾನಿಸುತ್ತಿವೆ. ಭಾರತ ಇದೇ ಪ್ರಥಮ ಸಲ ಒಂದೇ ಬಾರಿಗೆ ಹತ್ತು ಉಪಗ್ರಹಗಳನ್ನು ಉಡ್ಡಯನ ಮಾಡಿರುವುದು. ಅತಿ ಹೆಚ್ಚು ತೂಕದ ಉಪಗ್ರಹಗಳನ್ನು ಕಳುಹಿಸಿರುವುದು ವಿಶ್ವ ದಾಖಲೆಯೇ ಸರಿ. ಈ ಹಿಂದೆ, 2007ರಲ್ಲಿ ಒಟ್ಟು 300 ಕೆಜಿ ತೂಕವುಳ್ಳ 16 ಉಪಗ್ರಹಗಳನ್ನು ರಷ್ಯಾ ಉಡ್ಡಯನ ಮಾಡಿತ್ತು.



ಪಿಎಸ್‌ಎಲ್‌ವಿ-ಸಿ9 ರಾಕೆಟ್ ಉಡಾವಣೆ

ಶ್ರೀಹರಿಕೋಟಾದಲ್ಲಿ ಇರುವ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಿಂದ ಉಡಾವಣೆಗೊಂಡ ಪಿಎಸ್‌ಎಲ್‌ವಿ-ಸಿ9 ರಾಕೆಟ್ ಒಟ್ಟು 1,151 ಸೆಕೆಂಡ್‌ಗಳ ಕಾಲ ಪಯಣಿಸಿತು. ಇದರಲ್ಲಿ ಭಾರತದ್ದೇ ಆದ 690 ಕೆಜಿ ತೂಕದ ಕಾರ್ಟೋಸ್ಯಾಟ್-2ಎ ಮತ್ತು 83 ಕೆಜಿ ತೂಕದ ಇಂಡಿಯನ್ ಮಿನಿ ಸ್ಯಾಟಲೈಟ್-1 (ಐಎಂಎಸ್-1) ಎಂಬ ಎರಡು ದೂರ-ಸಂವೇದಿ ಉಪಗ್ರಹಗಳು ಸಹ ಇದ್ದವು. ಉಳಿದವು ಕೆನಡಾ ಮತ್ತು ಜರ್ಮನಿಯ ವಿಶ್ವ ವಿದ್ಯಾನಿಲಯಗಳು ಸಿದ್ಧಪಡಿಸಿದ್ದ ಎಂಟು ನ್ಯಾನೋ ಉಪಗ್ರಹಗಳು. ಕಾರ್ಟೋಸ್ಯಾಟ್-2ಎ ಉಪಗ್ರಹದಲ್ಲಿ ಅತ್ಯಾಧುನಿಕ ಗುಣಮಟ್ಟದ ಪಾನ್‌ಕ್ರೋಮ್ಯಾಟಿಕ್ ಕ್ಯಾಮೆರಾ ಇದ್ದು, ಅದರಿಂದ ದೊರೆಯುವ ಒಂದು ಮೀಟರ್ ಅಂತರದ ಚಿತ್ರಗಳನ್ನು ನಗರ ಮತ್ತು ಗ್ರಾಮೀಣ ಪ್ರದೇಶದ ರಸ್ತೆಗಳು, ವರ್ತುಲ ರಸ್ತೆಗಳು, ವಸತಿಗೃಹ ಪ್ರದೇಶಗಳಂತಹ ಮ್ಯಾಪಿಂಗ್ ಕಾರ್ಯಗಳಿಗೆ ಬಳಸಬಹುದು. ಐಎಂಎಸ್-1 ಉಪಗ್ರಹದಲ್ಲಿ ಎರಡು ಕ್ಯಾಮೆರಾಗಳಿದ್ದು, ಇದು ಎರಡು ವರ್ಷಗಳವರೆಗೂ ಬಾಳಿಕೆ ಬರುವಂತೆ ವಿನ್ಯಾಸಗೊಳಿಸಲಾಗಿದೆ.



ಕೆನಡಾ ಮತ್ತು ಜರ್ಮನಿ ದೇಶದ ವಿಶ್ವವಿದ್ಯಾಲಗಳು ಹಾರಿಬಿಟ್ಟಿರುವ ಉಪಗ್ರಹಗಳಿಂದ ಉತ್ತೇಜಿತಗೊಂಡಿರುವ ಇತರೆ ರಾಷ್ಟ್ರಗಳ ಹಲವಾರು ವಿಶ್ವವಿದ್ಯಾಲಯಗಳು ಕೂಡ ಉಪಗ್ರಹ ಉಡ್ಡಯನ ಯೋಜನೆಯನ್ನು ಹಾಕಿಕೊಂಡಿವೆ. ನಮ್ಮ ದೇಶದ ಐಐಟಿ-ಕಾನ್ಪುರ ಸಂಸ್ಥೆಯು ಕೂಡ ಅಂತಹದೊಂದು ಯೋಜನೆಯಲ್ಲಿ ನಿರತವಾಗಿದೆ.

ಇಸ್ರೋ ಮತ್ತು ಪಿಎಸ್‌ಎಲ್‌ವಿ ರಾಕೆಟ್‌ಗಳು:

ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೋ)ಯು ಸಿದ್ಧಪಡಿಸಿರುವ ಈ ರಾಕೆಟ್‌ಗೆ ಪಿಎಸ್‌ಎಲ್‌ವಿ (ಪೋಲಾರ್ ಸ್ಯಾಟಲೈಟ್ ಲಾಂಚ್ ವೆಹಿಕಲ್) ಎಂದು ಹೆಸರು. ಬೆಂಗಳೂರಿನಲ್ಲಿರುವ ಇಸ್ರೋ ಉಪಗ್ರಹ ಕೇಂದ್ರವು-

ಪುಟ 10ಕ್ಕೆ

JANASHAKTHI KANNADA VARA PATRIKE : Printed by G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at: Kriya Prakashana, 12. 18th Cross, S.R.Nagar, BANGALORE - 560 027 Karnataka (State) and Published at BANGALORE No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor: S.Y.GURUSHANTH